ಸಾಹಿತ್ಯ ದಾಸೋಹ – ೭೭೮

ಸಂಚಿಕೆ 52 – ಸೆಪ್ಟೆಂಬರ್ 2024

10.08.2024ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ . . .

ನಮ್ಮ ಮಾತು

ಆತ್ಮೀಯರೆ,

ಕ್ರೋಧಿ ನಾಮ ಸಂವತ್ಸರದ ಶ್ರಾವಣ ಮಾಸದಲ್ಲಿ ಅಂದರೆ ೦೫.೦೮.೨೦೨೪ ರಿಂದ ೦೨.೦೯.೨೦೨೪ರ ನಡುವೆ ನಮ್ಮ ವೇದಿಕೆಯು ನಡೆಸಿದ ೨೯ ದಿನಗಳ 'ಪುಟ್ಟ ಕಥಾ ಶ್ರಾವಣ ಅಭಿಯಾನ'ವು ಸಾವಿರಾರು ಕಥೆಗಳ ಪ್ರವಾಹವನ್ನೇ ಹರಿಸಿದೆ. ಉತ್ಸಾಹದಿಂದ ಭಾಗವಹಿಸಿದ ಎಲ್ಲ ಕತೆಗಾರರಿಗೆ ಧನ್ಯವಾದಗಳು.

ಕಳೆದ ಬಾರಿಯ ಕಥಾಶ್ರಾವಣದ ಸವಿಸ್ಮರಣೆಯಲ್ಲಿ ಮುಂದಿನ ತಿಂಗಳು ಒಂದು ವೇದಿಕೆಯ ಸಮಾರಂಭವನ್ನು ಆಯೋಜಿಸಲಾಗಿದೆ. ವಿವರಗಳು ಸದ್ಯದಲ್ಲೇ ಲಭ್ಯವಾಗಲಿದೆ.

೧೦.೦೮.೨೦೨೪ರಂದು ನಡೆದ ೨೨೮ನೆಯ ದಾಸೋಹವು ನಮ್ಮ ವೇದಿಕೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ನಮ್ಮ ಮೊದಲ ದಾಸೋಹ ನಡೆದದ್ದು ಸರಿಯಾಗಿ ೨೫ ವರ್ಷಗಳ ಹಿಂದೆ ಅಂದರೆ ೧೫.೦೮.೧೯೯೯ರಂದು. ಕಳೆದ ೨೫ ವರ್ಷಗಳಲ್ಲಿ ನಡೆದ ಒಟ್ಟು ೨೨೮ ದಾಸೋಹಗಳಲ್ಲಿ ಪಾಲ್ಗೊಂಡು ವಿವಿಧ ಬಗೆಯ, ವಿವಿಧ ಶೈಲಿಯ, ವಿವಿಧ ವಿಷಯಗಳನ್ನು ಕುರಿತ ಅಸಂಖ್ಯಾತ ಬರಹಗಳನ್ನು ಪ್ರಸ್ತುತಪಡಿಸಿ ಸಾಹಿತ್ಯ ದಾಸೋಹವನ್ನು ಗಟ್ಟಿಯಾಗಿ ನೆಲೆಗೊಳಿಸಿದ ಎಲ್ಲರಿಗೂ ವಂದನೆಗಳು. ಮುಂಬರುವ ದಿನಗಳಲ್ಲಿಯೂ ನಿಮ್ಮೆಲ್ಲರ ಸಹಕಾರ ಹೀಗೇ ಮುಂದುವರಿಯಲಿ ಎಂಬುದೇ ನಮ್ಮ ಆಶಯ.

ದಾಸೋಹ ೨೨೮ರ ಅಧ್ಯಕ್ಷತೆವಹಿಸಿ ದಾಸೋಹವನ್ನು ಯಶಸ್ವಿಗೊಳಿಸಿದ ಶ್ರೀ ಶ್ರೀರಂಗರಾಜನ್ ಅವರಿಗೆ, ಎಲ್ಲ ಲೇಖಕವರ್ಗಕ್ಕೆ, ಭಾಗವಹಿಸಿದ ವೀಕ್ಷಕರಿಗೆ, ಓದುಗರಿಗೆ, ತಾಂತ್ರಿಕವರ್ಗಕ್ಕೆ, ಎಲ್ಲ ಸಾಹಿತ್ಯಾಸಕ್ತರಿಗೆ ಹಾಗೂ ಈ ಸಂಚಿಕೆಯನ್ನು ರೂಪಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರಿಗೆ ಧನ್ಯವಾದಗಳು.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ *೧೪.೦೯.೨೦೨೪*

ದಾಸೋಹದ ಪುಟಗಳಲ್ಲಿ . . .

ಮುಖಚಿತ್ರ: ಶ್ರೀಖಂಡ ಮಹದೇವ – ಹಿಮಾಲಯ ಪರ್ವತ ಶ್ರೇಣಿ (ಕೃಪೆ: ಶ್ರೀ ಗುರುರಾಜ ಶಾಸ್ತ್ರಿ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 228


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

೧೦.೦೮.೨೦೨೪ರ ಶನಿವಾರದಂದು ಇಳಿ ಮಧ್ಯಾಹ್ನ ೩.೩೦ಕ್ಕೆ ಸರಿಯಾಗಿ ಆಗಸ್ಟ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಗೂಗಲ್ ಮೀಟ್ ಅಂತರ್ಜಾಲ ವೇದಿಕೆಯಲ್ಲಿ ಆರಂಭವಾಯಿತು.

ಸಭೆಯ ಸಾರಥ್ಯವಹಿಸಿ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದ ಶ್ರೀ ಕೆ.ಎನ್.ಮಹಾಬಲ ಅವರು ಈ ಬಾರಿಯ ದಾಸೋಹವು ಒಂದು ಮೈಲಿಗಲ್ಲಿನ ಸಾಧನೆಯನ್ನು ಸ್ಮರಿಸುವ ಕಾರ್ಯಕ್ರಮ, ಕಾರಣ ಮೊದಲನೆಯ ಸಾಹಿತ್ಯ ದಾಸೋಹ ನಡೆದದ್ದು ೧೫., ಆಗಸ್ಟ್ ೧೯೯೯ರಂದು. ಈಗ ಸಾಹಿತ್ಯ ದಾಸೋಹಕ್ಕೆ ಇಪ್ಪತ್ತೈದು ವರ್ಷಗಳು ತುಂಬಿವೆ ಎಂದು ಹರ್ಷಿಸಿದರು. ಇಂದಿನ ೨೨೮ನೇ ಸಾಹಿತ್ಯ ದಾಸೋಹದ ಅಧ್ಯಕ್ಷರಾದ ಶ್ರೀಯುತ ಎಂ.ಆರ್. ಶ್ರೀರಂಗರಾಜನ್ ಅವರ ಪರಿಚಯವನ್ನು ನೀಡಿದರು.

ನಂತರ ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ. ಶ್ರೀ. ರವೀಂದ್ರ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.

- ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವತಿಯಿಂದ ಪ್ರತೀ ಮಾಹೆ ನಡೆಯುತ್ತಿರುವ "ಸಾಹಿತ್ಯ ದಾಸೋಹ" ಕಾರ್ಯಕ್ರಮಕ್ಕೆ ಇದೇ ಆಗಸ್ಟ್ ೧೫ ರಂದು ೨೫ ವರ್ಷಗಳು ತುಂಬುತ್ತವೆ, ಹಲವು ರೀತಿಯ ದಾಖಲೆಗಳನ್ನು ಸೃಷ್ಟಿಸಿದ ಈ ಕಾರ್ಯಕ್ರಮದ ದಾರಿಯಲ್ಲಿಯ ಎಲ್ಲರ ಪರಿಶ್ರಮವನ್ನು ನೆನೆದ ಅವರು, ಈ ಕುರಿತು ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ಯೋಜಿಸಲಾಗುತ್ತಿದೆ ಎಂದರು.



- ಶ್ರಾವಣದ ಪುಟ್ಟ ಕಥೆಗಳ ಅಭಿಯಾನವು ಯಶಸ್ವಿಯಾಗಿ ಮುನ್ನುಗ್ಗುತ್ತಿದ್ದು, ನಿತ್ಯ ಕನಿಷ್ಠ ೪೦ ಕಥೆಗಳು ವೇದಿಕೆಯಲ್ಲಿ ಬರುತ್ತಿವೆ ಎಂದು ಸಂತಸ ವ್ಯಕ್ತಪಡಿಸಿದರು. ಟೀಕೆಗಳಿಗಾಗಲೀ, ವಿಮರ್ಶೆಗಳಿಗಾಗಲೀ ಎದೆಗುಂದದೆ ಪ್ರಯತ್ನ ಮುಂದುವರೆಸಿ ಎಂದು ಕರೆ ನೀಡಿದರು.
- ದಿನಾಂಕ ೦೭, ಆಗಸ್ಟ್ ೨೦೨೪ರಂದು ಗೋಖಲೆ ಸಾರ್ವಜನಿಕ ಸಂಸ್ಥೆಯ ಸಭಾಂಗಣದಲ್ಲಿ ಸಮನ್ವಯ ಸಮಿತಿಯ ವತಿಯಿಂದ ಆಯೋಜಿಸಿದ್ದ ಪ್ರಾಚಾರ್ಯ ಎಚ್ಚೆಸ್ಕೆ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಜೆ.ಎನ್. ಜಗನ್ನಾಥ ಅವರು ನೀಡಿದ ಉಪನ್ಯಾಸವು ಬಹಳ ಉತ್ಕೃಷ್ಟವಾಗಿತ್ತು; ಪ್ರಾಚಾರ್ಯ ಎಚ್ಚೆಸ್ಕೆಯವರು ಇಂದು ನಮ್ಮೊಡನಿದ್ದಿದ್ದರೆ ಖಂಡಿತ ಮೆಚ್ಚುತ್ತಿದ್ದರು. ಶ್ರೀ ಜಗನ್ನಾಥ ಅವರು ಇಂಗ್ಲಿಷಿನಲ್ಲಿ ಬರೆದ "Handbook

Of Treasury Management" ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಕ್ಕಾಗಿ ಅವರನ್ನು ಅಭಿನಂದಿಸಿ "ಬ್ಯಾಂಕಿನಲ್ಲಿ ಖಜಾನಾ ವ್ಯವಸ್ಥಾಪನೆ ಒಂದು ಕೈಪಿಡಿ" ಯನ್ನು ಪ್ರದರ್ಶಿಸಿದರು. ಅನುವಾದ ಕಾರ್ಯದಲ್ಲಿ ನೆರವು ನೀಡಿದ ಶ್ರೀ ಎಲ್.ವಿ. ರವೀಂದ್ರ ಕುಮಾರ್ ಅವರನ್ನೂ ಅಭಿನಂದಿಸಿದರು.

- ವೇದಿಕೆಯ ತೆರೆಯ ಹಿಂದೆ ವೇದಿಕೆಯ ಸದಸ್ಯರ ಕಥೆಗಳು, ಕಾವ್ಯ ಹಾಗೂ ಲೇಖನಗಳನ್ನು ಓದಿ ಯುಟ್ಯೂಬ್ ಕಡತ ಮಾಡುವ ಕೆಲಸ ನಡೆಯುತ್ತಿದೆ. ಇದನ್ನು ಈ ಬಾರಿಇಯ "ತಿಂಗಳ ಬೆಳಕು" ಕಾರ್ಯಕ್ರಮದಲ್ಲಿ ವಿಸ್ತೃತವಾಗಿ ಪರಿಚಯಿಸಲಾಗುವುದು ಎಂದರು.
- ಇತ್ತೀಚಿನ ದಿನಗಳಲ್ಲಿ ವೇದಿಕೆಯ ಸದಸ್ಯರು ರಚಿಸಿದ ಈ ಕೆಳಕಂಡ ಪುಸ್ತಕಗಳು ಬಿಡುಗಡೆಯಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸುತ್ತಾ, ಈ ಎಲ್ಲ ಲೇಖಕರನ್ನೂ ಅಭಿನಂದಿಸಿದರು.

  ಅ. ಸಂವಹನ ಸಂವರ್ಧನ – ಶ್ರೀಮತಿ. ಪೂರ್ಣಿಮಾ ಭಗವಾನ್

  ಆ. ದ್ರೋಣ ಮತ್ತು ಮಾಂಡವಿ – ಶ್ರೀ.ಗಣಪತಿ ಹೆಗಡೆ

  ಇ. ಒಟ್ಟು ಆರು ಕೃತಿಗಳು – ಶ್ರೀಮತಿ ಸತ್ಯವತಿ ಮೂರ್ತಿ

  ಈ. ಸಂಕದ ಮೇಲಿನ ನಡಿಗೆ – ಶ್ರೀ ಶಶಿಧರ ಹಾಲಾಡಿ

  ಉ. ಕವಿತೆಗೆ ಕಾಲುಗಳಿಲ್ಲ – ಡಾ. ಗೋವಿಂದ ಹೆಗಡೆ

  ಊ. ಬದುಕು ಬಿಂಬ – ಒಂದು ಇಣುಕು ನೋಟ ಮತ್ತು ತಂಗಾಳಿಯಲ್ಲಿ ವಾಕಿಂಗ್ ಮತ್ತು ಇತರ ಲೇಖನಗಳು – ಶ್ರೀಮತಿ ಪದ್ಮಾ ಆನಂದ್, ಮೈಸೂರು

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ಒಟ್ಟು ಇಪ್ಪತ್ತೈದು ಸದಸ್ಯರು ನೋಂದಾಯಿಸಿದ್ದು ಈ ಪೈಕಿ ಇಪ್ಪತ್ತೂರು ಲೇಖಕರು ತಾವಿರುವ ತಾಣದಿಂದಲೇ ತಮ್ಮ ಪ್ರಸ್ತುತಿಗಳನ್ನು ವಾಚಿಸಿದರು.

ಎಲ್ಲ ಬರಹಗಳ ಪ್ರಸ್ತುತಿಯು ಮುಗಿದ ನಂತರ ಅಧ್ಯಕ್ಷರಾದ ಶ್ರೀ ಎಂ.ಆರ್.ಶ್ರೀರಂಗರಾಜನ್ ಅವರು ತಮ್ಮ ಅಧ್ಯಕ್ಷೀಯ ನುಡಿಗಳನ್ನು ದಾಖಲಿಸಿದರು. ನಾವು ಸಚಿನ್ ತೆಂಡೂಲ್ಕರ್ ತರಹ ದಾಖಲೆಗಳನ್ನು ಮುರಿಯುತ್ತಲೇ ಇರುತ್ತೇವೆ, ಸಾಗುತ್ತಲೇ ಇರುತ್ತೇವೆ ಎಂದು ಸಂತೋಷ ವ್ಯಕ್ತಪಡಿಸಿದರು. ೨೨೮ ದಾಸೋಹಗಳನ್ನು ನಡೆಸಿರುವ ವೇದಿಕೆಯ ಕಾರ್ಯಕ್ರಮಗಳು ಯಾವುದೇ ಗಿನ್ನಿಸ್ ದಾಖಲೆಗೆ ಕಡಿಮೆ ಇಲ್ಲ ಎಂದ ಅವರು, ಸಭೆಯಲ್ಲಿ ಸೇರಿದ ಎಲ್ಲರನ್ನೂ ಅಭಿನಂದಿಸಿ, ಹೆಮ್ಮೆಪಟ್ಟರು. ಪ್ರತೀ ಲೇಖನವನ್ನೂ ವಿವರವಾಗಿ ಸಾರದೊಡನೆ ತೆರೆದಿಟ್ಟ ರೀತಿ ಗಮನಾರ್ಹವಾಗಿತ್ತು. ಅತ್ಯಂತ ವಿನಮ್ರತೆಯ ಅನಿಸಿಕೆಗಳು, ಪ್ರೌಢ ವಿಮರ್ಶೆ ಹಾಗೂ ಅಲ್ಲಲ್ಲಿ ನೀಡಿದ ಅತ್ಯುತ್ತಮ ಸಾಹಿತ್ಯಕ ಉದಾಹರಣೆಗಳು ಎಲ್ಲರ ಮನಮುಟ್ಟಿದವು.

ಕೊನೆಯಲ್ಲಿ ಶ್ರೀ ಗುರುರಾಜ ಶಾಸ್ತ್ರಿ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಆಗಸ್ಟ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್. ಮಹಾಬಲ

ಜಿ ಮೀಟ್ ಆತಿಥ್ಯ : ಶ್ರೀಮತಿ. ರೇಣುಕಾ ದೇಸಾಯಿ

ವಿಡಿಯೋ ಮುದ್ರಣ : ಶ್ರೀ.ಗುರುರಾಜ ಶಾಸ್ತ್ರಿ

ಈ ದಾಸೋಹದ ಪೂರ್ಣ ಕಾರ್ಯಕ್ರಮವು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಟ್ಯೂಬ್‌ನಲ್ಲಿ ಲಭ್ಯವಿದೆ.

***

ತಿಂಗಳ ಬೆಳಕು - 7

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಗದ್ಯ ಬರಹದ ಮಿಂಚುಗೊಂಚಲು"

ಯೂಟ್ಯೂಬ್ ಪ್ರಸಾರ ಮಾಲೆ



ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

'ತಿಂಗಳ ಬೆಳಕು–೭' ಕಾರ್ಯಕ್ರಮ ೨೪.೦೮.೨೦೨೪ ಶನಿವಾರ ಸಂಜೆ ೫.೩೦ಕ್ಕೆ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಜಿಮೀಟ್ ತಂತ್ರಜ್ಞಾನದ ಮೂಲಕ ನಡೆಯಿತು

'ತಿಂಗಳ ಬೆಳಕು' ಕಾರ್ಯಕ್ರಮದ ಸಂಚಾಲಕ ರವಿ ಕುಸುಬಿಯವರು ಎಲ್ಲರನ್ನೂ ಸ್ವಾಗತಿಸಿ, ಇತ್ತೀಚೆಗೆ ಪುಸ್ತಕಗಳನ್ನು ಓದುವ ವ್ಯವಧಾನ ಕಡಿಮೆಯಾಗುತ್ತಿದ್ದು, ಆಡಿಯೋ ಬುಕ್ ಪರಿಕಲ್ಪನೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತಿದೆ. ಈ ಹಿನ್ನೆಲೆಯಲ್ಲಿ ಇಂದಿನ ಕಾರ್ಯಕ್ರಮದಲ್ಲಿ ನಮ್ಮ ವೇದಿಕೆಯವರೇ ಆದ ಮೂರು ಲೇಖಕರ ಕತೆಗಳನ್ನು ವಿಡಿಯೋ ಸಂಸ್ಕರಣ ಮಾಡಿಸಿ, ಎಲ್ಲರಿಗೂ ಕೇಳಿಸಿ, ಅದರ ವಿವಿಧ ಆಯಾಮಗಳ ಬಗ್ಗೆ ಪರಿಚಯಿಸಲಾಗುವುದು ಎಂದು ಹೇಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ವೇದಿಕೆಯ ಪ್ರಧಾನ ಕಾರ್ಯದರ್ಶಿ ಶ್ರೀ ಬೆಂ.ಶ್ರೀ. ರವೀಂದ್ರರವರು, ವೇದಿಕೆಯ ಸದಸ್ಯರ ಗದ್ಯ ಬರಹಗಳು ಹೆಚ್ಚು ಜನರನ್ನು ತಲುಪಬೇಕೆಂಬ ಉದ್ದೇಶದಿಂದ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಉಪಾಧ್ಯಕ್ಷರಾದ ಶ್ರೀ ಎಚ್.ಎಲ್. ಗುರುಪ್ರಸಾದ್ ಅವರು ವಿವಿಧ ಬರಹಗಳನ್ನು ವಿಡಿಯೋ ಸಂಸ್ಕರಣ ಮಾಡುವ ಜವಾಬ್ದಾರಿ ತೆಗೆದುಕೊಂಡು ಬಹಳ ಶ್ರಮವಹಿಸಿ, ಕೆಲವರ ಕತೆಗಳನ್ನು ಯಶಸ್ವಿಯಾಗಿ ಓದಿಸಿ ಯೂಟ್ಯೂಬ್‌ಗೆ ಅಳವಡಿಸಿದ್ದಾರೆ. ಇವು ಗುರುಪ್ರಸಾದ್ ಅವರ ಮತ್ತು ಆಯಾ ಲೇಖಕರ ಯೂಟ್ಯೂಬ್ ವಾಹಿನಿಯಲ್ಲಿ ದೊರೆಯುತ್ತವೆ.. ಈಗಾಗಲೇ ವಿವಿಧ ಕತೆಗಳಿಗೆ ೩೩ ಜನ ಧ್ವನಿ ನೀಡಿದ್ದಾರೆ. ಇಂದಿನ ಕಾರ್ಯಕ್ರಮದಲ್ಲಿ ಶ್ರೀಮತಿ ಗಿರಿಜಾ ರಾಜ್, ಶಂಕರರಾವ್ ಹಾಗೂ ನಾಗರತ್ನ ಚಂದ್ರಶೇಖರ್ ಅವರ ಒಂದೊಂದು ಕತೆಗಳನ್ನು ಸಮಯದ ಮಿತಿಯಲ್ಲಿ ಪ್ರಸ್ತುತಪಡಿಸಲಾಗುವುದು ಎಂದರು.

ಇದೇ ತಾ ೨೬ರಂದು ನಮ್ಮ ವೇದಿಕೆಯ ಪ್ರೇರಕಶಕ್ತಿಯಾದ ಪ್ರಾಚಾರ್ಯ ಎಚ್ಚೆಸ್ಕೆಯವರ ಜನ್ಮದಿನ. ಅವರು ಸುಮಾರು ೨೮ ವರ್ಷಗಳ ಕಾಲ ನಮ್ಮ ಚಟುವಟಿಕೆಗಳಿಗೆ ಸ್ಫೂರ್ತಿಯಾಗಿದ್ದರು. ಇವರ ಬಗ್ಗೆ ಗುರುಪ್ರಸಾದರು ಒಂದು ಕಿರುಹೊತ್ತಿಗೆ ತಯಾರಿಸಿ ಪಿಡಿಎಫ್ ರೂಪದಲ್ಲಿ ಇಂದು ಬಿಡುಗಡೆ ಮಾಡುತ್ತಿದ್ದಾರೆ ಎಂದೂ ರವೀಂದ್ರ ಅವರು ತಿಳಿಸಿದರು.

ವೇದಿಕೆಯಲ್ಲಿ ನಡೆಯುತ್ತಿರುವ 'ಪುಟ್ಟ ಕಥಾ ಶ್ರಾವಣ ಅಭಿಯಾನ' ಯಶಸ್ವಿಯಾಗಿ ನಡೆಯುತ್ತಿದ್ದು ಇದುವರೆಗಿನ ಇಪ್ಪತ್ತು ದಿನಗಳಲ್ಲಿ ೬೫ಕ್ಕೂ ಹೆಚ್ಚು ಲೇಖಕರು ೭೨೫ ಕತೆಗಳು ಬಂದಿದ್ದು ಅಭಿಯಾನ ಇನ್ನೂ ಒಂಬತ್ತು ದಿನಗಳ ಕಾಲ ಮುಂದುವರೆಯಲಿದ್ದು, ಒಟ್ಟು ಕತೆಗಳ ಸಂಖ್ಯೆ ೧೦೦೦ ಮೀರುವ ನಿರೀಕ್ಷೆಯಿದೆ. ಇದೊಂದು ಮಹತ್ತರ ದಾಖಲೆಯ ಸಾಧನೆಯಾಗಲಿದೆ ಎಂದು ಹೇಳಿ ಎಲ್ಲ ಕತೆಗಾರರನ್ನೂ ಅಭಿನಂದಿಸಿದರು.

ಶ್ರೀ ಎಚ್.ಎಲ್.ಗುರುಪ್ರಸಾದ್ ಅವರು ಮಾತನಾಡಿ, 'ಗದ್ಯ ಬರಹಗಳ ಮಿಂಚುಗೊಂಚಲು' ಯುಟ್ಯೂಬ್ ಪ್ರಸಾರ ಮಾಲಿಕೆಯಲ್ಲಿ ವೇದಿಕೆಯ ಸದಸ್ಯರ ವಿವಿಧ ಬರಹಗಳ ವಿಡಿಯೋ ಸಂಸ್ಕರಣೆ ಈಗಾಗಲೇ ನಡೆದಿದೆ. ಇದೀಗ ಕಥಾವಾಚನವನ್ನು ವಿಡಿಯೋಗೆ ಅಳವಡಿಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಲೇಖಕರ ಕತೆಗಳಿಗೆ ಸ್ವತಃ ಲೇಖಕರು ಅಥವಾ ಇತರರಿಂದ ಧ್ವನಿಮುದ್ರಣ ಮಾಡಿಸಿ, ಸೂಕ್ತ ಚಿತ್ರಗಳನ್ನು ಅಳವಡಿಸಿ, ವೀಡಿಯೋ ಸಂಸ್ಕರಿಸಿ, ಕತೆಗಾರರಿಗೆ ಮತ್ತು ಧ್ವನಿ ನೀಡಿದವರಿಗೆ ಕಳುಹಿಸಿ, ಯೂಟ್ಯೂಬ್‌ನಲ್ಲಿ ಪ್ರಕಟಿಸಲು ಮಾರ್ಗದರ್ಶನ ನೀಡಿದುದಕ್ಕೆ ಸಂಬಂಧಿಸಿದಂತೆ ತಮ್ಮ ಅನಿಸಿಕೆ ಹಾಗೂ ಅನುಭವಗಳನ್ನು ಹಂಚಿಕೊಂಡರಲ್ಲದೆ, ಇನ್ನೂ ಆಗಬೇಕಾದ ಹಲವು ಬರಹಗಳ ವಿಡಿಯೋ ಸಂಸ್ಕರಣಾ ಕಾರ್ಯಗಳ ಬಗ್ಗೆ ಸೂಕ್ತ ಮಾಹಿತಿ ನೀಡಿದರು.

ಶ್ರೀ ಗುರುಪ್ರಸಾದ್ ಅವರು ರಚಿಸಿದ ಎಚ್ಚೆಸ್ಕೆಯವರ ಬಗೆಗಿನ ಪಿಡಿಎಫ್ ಬಿಡುಗಡೆ ಮಾಡಲಾಯಿತು.

ನಂತರ ಶ್ರೀಮತಿ ಎಲ್ ಗಿರಿಜಾರಾಜ್ ಅವರು ರಚಿಸಿದ 'ಅವನು' ಹಾಗೂ ಶ್ರೀ ಶಂಕರ ರಾವ್ ಅವರ 'ಸಾಕ್ಷಿ' ಮತ್ತು ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರ 'ಗೋಡೆ' ಎಂಬ ಧ್ವನಿಮುದ್ರಿತ ಕತೆಗಳನ್ನು ಪ್ರಸಾರ ಮಾಡಲಾಯಿತು. ಈ ಕತೆಗಳು ಶ್ರೀಮತಿ ನಳಿನಿ ಮತ್ತು ಶ್ರೀ ಭ.ರಾ.ವಿಜಯಕುಮಾರ್ (ಕತೆ: ಅವನು), ಶ್ರೀ ಹು.ವಾ.ಶ್ರೀಪ್ರಕಾಶ್ (ಕತೆ: ಸಾಕ್ಷಿ) ಮತ್ತು ಶ್ರೀ ಗುರುಪ್ರಸಾದ್ ಹಾಲ್ಕುರಿಕೆ (ಕತೆ: ಗೋಡೆ) ಇವರ ಧ್ವನಿಗಳಿಂದ ಮೂಡಿಬಂದುವು.

ಪ್ರತಿಯೊಂದು ಪ್ರಸ್ತುತಿಯ ಆರಂಭದಲ್ಲಿಯೂ ಆಯಾ ಕತೆಗಳನ್ನು ರಚಿಸಿದ ಶ್ರೀಮತಿ ಗಿರಿಜಾ ರಾಜ್, ಶ್ರೀ ಶಂಕರ ರಾವ್ ಮತ್ತು ಶ್ರೀಮತಿ ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು ತಂತಮ್ಮ ಧ್ವನಿಮುದ್ರಿತ ಕತೆಗಳ ಪ್ರಸಾರದ ಬಗೆಗೆ ವ್ಯಕ್ತತಪಡಿಸಿದ ಅನಿಸಿಕೆಗಳನ್ನು ಪ್ರಸಾರ ಮಾಡಲಾಯಿತು.

ಕೇಳುಗರ ಪರವಾಗಿ ಮಾತನಾಡಿದ ಶ್ರೀ ಕೆ.ಆರ್.ಎಸ್.ಮೂರ್ತಿ, ಶ್ರೀ ಜಿ.ವಿ.ಅರುಣ, ಶ್ರೀ ವೆಂಕಟಸುಬ್ಬಯ್ಯ, ಶ್ರೀಮತಿ ಮಾಲತಿ ಶ್ರೀನಿವಾಸನ್ ಮತ್ತು ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ ರವರು ಈ ವಿಶಿಷ್ಟ ಕಾರ್ಯಕ್ರಮದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಶ್ರೀ ರಂಗರಾಜನ್ ಅವರು ಮಾತನಾಡಿ, ಒಟ್ಟು ೧೫ ಕತೆಗಳನ್ನು ಧ್ವನಿ ಮುದ್ರಣ ಮಾಡಲಾಗಿದ್ದು, ಕತೆಗಳನ್ನು ವಾಚಿಸಿದ ಪ್ರತಿಯೊಬ್ಬರೂ ಕತೆಗಳನ್ನು ಓದಿ, ಅರ್ಥ ಮಾಡಿಕೊಂಡು, ಅತ್ಯಂತ ಕಾಳಜಿಯಿಂದ ಕೇಳುಗರೆಲ್ಲರಿಗೂ ಹಿತವಾಗುವಂತೆ ಮತ್ತು ಪ್ರಿಯವಾಗುವಂತೆ ವಾಚಸಿದ್ದಾರೆ. 'ತಿಂಗಳ ಬೆಳಕು' ಕಾರ್ಯಕ್ರಮದ ಸಮಯದ ಮಿತಿಯಿಂದ ಇಂದು ಕೇವಲ ಮೂರು ಆಯ್ದ ಕತೆಗಳನ್ನು ಮಾತ್ರ ಪ್ರಸ್ತುತಪಡಿಸಲಾಗಿದ್ದು, ಉಳಿದ ಕತೆಗಳನ್ನು ಯುಟ್ಯೂಬ್‌ನಲ್ಲಿ ಕೇಳಬಹುದು ಎಂದರು.

ಕೊನೆಯಲ್ಲಿ ಶ್ರೀಮತಿ ರೇಣುಕಾ ದೇಸಾಯಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

(ಇಡೀ ಕಾರ್ಯಕ್ರಮವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು)

***

ಕವಿಮನ

ಕಾಲಾಂತಕನ ಸಂಚು

ಮಸಣಗಳು ಹಳತಾಗಿವೆ
ಸದ್ದಿಲ್ಲದೆ ಮಲಗಿದವರು ಇದ್ದಲ್ಲೇ ಕರಗಿದ್ದಾರೆ
ನನ್ನ ಬೆನ್ನಿಗೇಕೆ ನೀ ಬಿದ್ದಿರುವೆ?
`ದುರತಿ ಕ್ರಮಾ ಕಾಲಗತಿಃ'
ಕಾಲದ ಕ್ರಮ ಮೀರಲಾಗದೆಂಬುದು ನಾ ಬಲ್ಲೆ

ನೀ ಬೀಸುವ ಬಲೆಗೆ ನಾ ಮೀನಾಗಬಾರದೆಂದು
ಟ್ವಿಟರ್, ಫೇಸ್ಬುಕ್, ಇನ್ಸ್ಟಾಗ್ರಾಂ ಬಂದ್ ಮಾಡಿದೆ
ಮಗ ಪ್ರೀತಿಯಿಂದ ಕೊಡಿಸಿದ್ದ ಫೋನನ್ನು ನೀರಿಗೆಸೆದೆ
ಸಂಸಾರ ಜಂಜಾಟಗಳಲ್ಲಿ ಷಷ್ಠಿ ಪೂರೈಸಿ
ವ್ಯಷ್ಟಿಯಲ್ಲಿರುವ ನನಗೆ ಸಮಷ್ಟಿಯ ಕಾಣುವಾಸೆ
ಸಂಸಾರದಲ್ಲಿ ಜರ್ಜರಿತನಾದ ನನ್ನ ಮೇಲೆ
ನಿನ್ನ ಪ್ರಹಾರ ಸಲ್ಲ

ನಿನ್ನ ಚೋರ ಪ್ರಸಂಗಗಳ ನಾ ಬಲ್ಲೆ
ಬಸ್ ಪ್ರಯಾಣದಲ್ಲಿ ನಾನಿದ್ದಾಗ
ಅಕಾರಣವಾಗಿ ಅಪಘಾತ ಮಾಡಿಸಿದೆ
ಸತ್ತವನು ಸಾರಥಿ ಮಾತ್ರ, ತಪ್ಪಿತ್ತು ನಿನಗೆ ಗುರಿ

ನಾ ಬಹುಮಹಡಿಯ ಮೆಟ್ಟಿಲಿಳಿವಾಗ ಮಳೆನೀರು ಸುರಿಸಿ
ನನ್ನ ಹೊತ್ತೊಯ್ಯಲು ಸಂಚು ನಡೆಸಿದೆ
ಎತ್ತರದಿಂದ ಬಿದ್ದ ನಾನು
ಮರದ ಕೊಂಬೆಗೆ ಸಿಲುಕಿ ನೇತಾಡಿದಾಗ
ದಾರಿಹೋಕರು ನಿನ್ನಿಂದ ನನ್ನ ಪಾರು ಮಾಡಿದರು

ಹಟಮಾರಿ ನೀನು, ಛಲವೇ ನಿನ್ನ ಗುರಿ
ನನಗೆ ಅರವತ್ತಾಯಿತೆಂದು ಕದ್ದೊಯ್ಯಲು
ನೀನಾಡ...

– ಎಂ.ಎಸ್. ನರಸಿಂಹಮೂರ್ತಿ
07.08.2024

ಮೂಲ

ಸೊಗಸು ವಾತಾವರಣ ಮರದಡಿಯ ತಂಪು
ಹೋಗಿ ಬರಲಿದೆ ಹಾದಿ ಗಿಡಮರದ ಸೊಂಪು
ನಡುವಿನಲ್ಲಿದೆ ಬಾವಿ ಗಾತ್ರವೂ ಹಿರಿದು
ಕಟ್ಟೆ ರಾಟೆಯ ಕಂಬ ದೂರದಲೆ ಕರೆದು

ಅಚ್ಚುಕಟ್ಟಿನ ಕಟ್ಟೆ, ಬಳಿದ ಬಣ್ಣದ ಮೆರಗು
ಸುತ್ತೆಲ್ಲ ಚಿತ್ತಾರ ನೋಡುವುದೆ ಸೊಬಗು
ಮಧ್ಯದಲಿ ಬೀಗಿಹುದು ತಿರುಗುವಾ ರಾಟೆ
ದಪ್ಪ ಹಗ್ಗದ ಕುಣಿಕೆ ಅನುಕೂಲದೆಣಿಕೆ

ಆ ಊರ ಈ ಊರ ಹಾದಿ ನಡುವಲ್ಲಿಹುದು
ಬಹು ಜನರ ಓಡಾಟ ಬದಿಯೆ ಕಾದಿಹುದು
ಕಣ್ಸೆಳೆದು ಮಂದಿಯನು ತನ್ನೆಡೆಗೆ ಸೆಳೆದು
ಆಯಾಸಗೊಂಡವರ ಕರೆಯುವುದು ಮೆರೆದು

ಬಂದ ಮಂದಿಯು ನಡೆದು ಕಟ್ಟೆಯನು ಬಳಸಿ
ಹಗ್ಗವನು ಜಗ್ಗುತ್ತ ಬಗ್ಗುವರು ಇಣುಕಿ
ಮೂಗನ್ನು ಮುಚ್ಚುತ್ತ ತಲೆಕೊಡಹಿ ಸರಿದು
ಹಿಂಜರಿದು ನಡೆಯುವರು ನಿಟ್ಟುಸಿರ ಸುರಿದು

ಗಿಡಗಂಟಿಯಾವಾಸ ಅಡರುವಾ ನಾತ
ಕ್ರಿಮಿಕೀಟಗಳ ವಾಸ ಆಳ ಪ್ರಪಾತ
ಏನಿದ್ದರೇನಂತೆ ಆಕರ್ಷ ಉಳಿದು
ನೀರಿನೊರತೆಯೆ ಇಲ್ಲ, ಬಾವಿಯದು ಬರಿದು!

– ಭ ರಾ ವಿಜಯಕುಮಾರ್
14.08.2024

ಕವಿಮನ

ನೀನಿಲ್ಲದಾದೊಡೆ

ನೀನಿಲ್ಲದಾದೊಡೆ ನಾನಿಲ್ಲ
ನಿನ್ನಿಂದಲೇ ಈ ಜಗವೆಲ್ಲ
ನಿನ್ನಾಜ್ಞೆಯ ಹೊರತು ನಡೆಯದೇನಿಲ್ಲಿ
ನಿನ್ನಿಚ್ಛೆಯ ಮರೆತು ಚಲಿಸದೇನಿಲ್ಲಿ

ನೀ ಕಣ್ಣು ತೆರೆದರೆ ದಡ ಸೇರೀತು
ನಮ್ಮ ಪಯಣದ ನಾವೆ
ನಿನ್ನ ಮುನಿಸಿಗೆ ಮುಚ್ಚೀತು
ನಮ್ಮ ಬದುಕಿನ ಪುಟವೆ

ನನ್ನಂತರಂಗದಿ ನೆಲೆಸಿ ನೀನು
ಕೈಹಿಡಿದು ನಡೆಸುತಿರುವೆ
ನನ್ನ ನಾಲಿಗೆಯಲಡಗಿ ನೀ
ನನ್ನನ್ನು ನುಡಿಸುತಿರುವೆ

ನನ್ನಿಚ್ಛೆ ನಡೆಯಲ್ಲ ನಿನ್ನೆದುರು
ನಾ ಬಾಗಲೇ ಬೇಕು ನಿನ್ನೆದುರು
ಚದುರಂಗದ ಕಾಯಿ ನಾ ನಿನ್ನ ಕೈಯಲ್ಲಿ
ನಾನಂದುಕೊಂಡಂತೆ ಏನೂ ಆಗದಿಲ್ಲಿ

ಅರಿವಿಹುದು ನನಗೆ ನನ್ನ ಮಿತಿಯ
ತಿಳಿವಿಹುದೆನಗೆ ನಿನ್ನಪಾರ ಶಕ್ತಿಯ
ಕರುಣೆಯಲಿ ಪೊರೆದಿರುವೆ ಇಷ್ಟು ದಿನ ನೀನೆ
ಜಗದಳಿವು ಉಳಿವಿಗೆ ಕಾರಣ ನೀನೇತಾನೆ

– ವೆಂಕಟೇಶ ಬೈಲೂರು
21.08.2024

ನಾನೆಂಬ ಬೆಟ್ಟ

ಅಟ್ಟದಲಿ ಕೂರದಿರು ಬೆಟ್ಟವನು ಏರದಿರು
ಬಿದ್ದರೆ ಕೆಳಗೆ ಕಟ್ಟಬೇಕಾದೀತು ಚಟ್ಟವನು
ಮಟ್ಟಸದಿ ಒಟ್ಟಾಗಿ ಸೇರಿ ದಿಟ್ಟತನ ತೋರು
ಅಟ್ಟಬಿಡು ಮೆಟ್ಟಬಿಡು ಮಟ್ಟಗಳ ಕಟ್ಟಲೆಯ

ಬಟ್ಟೆಯಲಿ ಅಳೆಯದೆ ಮನಮುಟ್ಟಿ ನೋಡು
ಸಿಟ್ಟಾಗದಿರಾಗಾಗ ಕೆಟ್ಟ ಮಾತನಾಡದಿರು
ಮನದ ತಟ್ಟೆಯಲಿ ತನುವಿನ ಲಟ್ಟಣಿಗೆಯಿಂ
ಗುಣದ ಹಿಟ್ಟನು ನಾದಿ ಗಣದ ಪಟ್ಟವನೇರು

ಬಿಟ್ಟುಕೊಟ್ಟುಬಿಡು ನಾನೆಂಬ ಮೊಟ್ಟೆಯನು
ಇಟ್ಟುಕೊಂಡರೆ ಮನವು ಕೆಟ್ಟುಹೋಗುವುದು
ಕಟ್ಟಿಕೊಂಡರೆ ತನುವು ಸುಟ್ಟುಹೋಗುವುದು
ಬಿಟ್ಟು ನೋಡೊಮ್ಮೆ ಪೆಟ್ಟಾಗದ ಜೀವನವ

ಹಟ್ಟಿ ಕಟ್ಟಿಗೆಯದೋ ಇಟ್ಟಿಗೆಯದಾದರೇನು
ಸೊಟ್ಟದಾರಿ ಬಿಟ್ಟು ನೆಟ್ಟದಾರಿಯ ಗುಟ್ಟನ್ನು
ಪಟ್ಟಾಗಿ ಗೀತೆಯಲೇ ಪಠಿಸಿದವನವನೇ
ಬೆಟ್ಟಲ್ಲಿ ಬೆಟ್ಟವನೆತ್ತಿದವ ಶ್ರೀಕೃಷ್ಣನೊಬ್ಬನೇ.

– ಎಸ್. ಮಂಜುನಾಥ್ (ಹಿಮನಾಥ)
28.08.2024

ಸತ್ ಚಿಂತನೆ ಸನ್ಮಾರ್ಗಕ್ಕೆ ದಾರಿ

– ಮಾನಸ ಕೆ.ಕೆ.

ಸನಾತನ ಧರ್ಮದಲ್ಲಿ ಪೂಜೆಗೆ ಹಬ್ಬಕ್ಕೆ, ಸಂಸ್ಕೃತಿಗೆ, ಸಂಸ್ಕಾರಕ್ಕೆ ತನ್ನದೇ ಆದ ಮಹತ್ವವಿದೆ. ಮನುಷ್ಯರು ಆಧ್ಯಾತ್ಮಿಕ ಚಿಂತನೆಯತ್ತ ಸಾಗುವುದು ಅವರವರ ಪುಣ್ಯಾನುಸಾರವೆಂದೇ ಹೇಳಬಹುದು. ನಾವು ನಿತ್ಯಜೀವನದಲ್ಲಿ ಏನನ್ನು ಅಭ್ಯಾಸ ಮಾಡಿಕೊಂಡಿರುತ್ತೇವೋ ಅದೇ ಹವ್ಯಾಸವಾಗಿ ಪರಿವರ್ತನೆಯಾಗುತ್ತದೆ. ಜಗತ್ತಿನಲ್ಲಿ ನಾವು ಚಿಂತಿಸುವುದಕ್ಕೆ ಹಲವಾರು ವಿಚಾರಗಳು ಇರುವುವು. ಆದರೆ ಮನುಷ್ಯನು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಜ್ಞಾನ ಪ್ರತಿಯೊಬ್ಬನಿಗೂ ಇರಲೇಬೇಕು. ಸದಾ ಸತ್‌ಚಿಂತನೆಯನ್ನು ಮಾಡಿದಾಗ ಮಾಡುವ ಕಾರ್ಯವೂ ಒಳಿತಾಗುತ್ತದೆ. ಹೀಗೆ ನಮ್ಮ ಬದುಕಿನ ಹಾದಿಯನ್ನು ನಾವೇ ರೂಪಿಸಿಕೊಳ್ಳಬೇಕು. ಸಮಾಜದಲ್ಲಿ ಕಲಿಕೆಗಾಗಿ ಹಲವಾರು ಮಾರ್ಗಗಳಿವೆ. ಉತ್ತಮ ಹಾದಿಗಾಗಿ ಮನಸ್ಸು ಮಾಡಿದರೆ ಉತ್ತಮ ವಿಚಾರ ತಿಳಿಯಬಹುದು.

ಮನುಷ್ಯ ಒಂದು ಹಂತಕ್ಕೆ ಬಂದಮೇಲೆ ಅವನಿಗೆ ತನ್ನ ಸತ್‌ಚಿಂತನೆಯ ಮನಸ್ಸಿನಿಂದ ತಂತಾನೇ ಹೊಸ ಚೈತನ್ಯ ಚಿಗುರುತ್ತದೆ. ಚಿಂತನೆಯಿಂದ ಬದುಕಿನ ದಾರಿಯನ್ನು ತಾನೇ ರೂಪಿಸಿಕೊಳ್ಳುವ ಶಕ್ತಿ ಬರುತ್ತದೆ. ಬದುಕಿನ ಸಾಕಷ್ಟು ಹಾದಿಗಳು ಉತ್ತಮ ಮಾರ್ಗವನ್ನು ಸೂಚಿಸುತ್ತಿರುತ್ತದೆ. ನಾವು ಅಂತಹ ಒಂದಷ್ಟು ಸತ್‌ಚಿಂತನೆ ಮಾಡುವುದರ ಮೂಲಕ ಪಂಡಿತರು, ವಿದ್ವಾಂಸರು, ಗುರುಗಳು, ಮಠಾಧೀಶರು, ಸಂಘ ಸಂಸ್ಥೆಗಳು ಮತ್ತು ಸತ್ಸಂಗಗಳನ್ನು ನಾವು ನಿತ್ಯ ಕಾಣುತ್ತಿರುತ್ತೇವೆ. ನಾವು ಅಂತಹವರ ಮಾರ್ಗದರ್ಶನವನ್ನು ಪಡೆಯಬೇಕು ಅಲ್ಲಿನ ಹೊಸ ಹೊಸ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಮನಃಶಾಂತಿಯನ್ನು ಹೊಂದುವುದು ಬಹುಮುಖ್ಯವಾಗಿರುತ್ತದೆ. ಇದನ್ನು ಅಭ್ಯಾಸ ಮಾಡುವುದರಿಂದ ನಮ್ಮ ಕಷ್ಟಗಳಿಗೆ ಮಂಗಳ ಹಾಡಬಹುದು.

ಮನುಷ್ಯನ ಜೀವನದಲ್ಲಿ ಕೇವಲ ಸುಖವೇ ಇರುವುದಿಲ್ಲ, ಬರೀ ದುಃಖವೂ ಇರುವುದಿಲ್ಲ. ಭಗವಂತ ಎಲ್ಲರಿಗೂ ಸರಿಸಮನಾಗಿ ಬದುಕು ನೀಡಿರುತ್ತಾನೆ. ಸಮತೋಲನ ಮನಸ್ಥಿತಿಗೆ ನಾವು ಯಾವುದಾದರೊಂದು ವಿಚಾರಕ್ಕೆ ಹೋಗಲೇಬೇಕು.

ಜೀವನದಲ್ಲಿ ನಾವು ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಕಂಡಾಗ, ಓದಿದಾಗ ಸರಳತೆಯಲ್ಲಿಯೂ ಸುಖವಿದೆ. ಬದುಕಿನಲ್ಲಿ ಆಡಂಬರವಿಲ್ಲದೇ ತಮ್ಮದೇ ಆದ ಬದುಕಿನ ಶೈಲಿಯನ್ನು ರೂಢಿಸಿಕೊಂಡು ದೇವರನ್ನು ಕಾಣುವ ಪ್ರಯತ್ನಮಾಡಿ ಕಾಳಿಕಾದೇವಿಯನ್ನು ಒಲಿಸಿಕೊಂಡವರು ರಾಮಕೃಷ್ಣ ಪರಮಹಂಸರು. ನಿತ್ಯಪೂಜೆ, ಜಪತಪದಲ್ಲೇ ತಮ್ಮನ್ನು ತೊಡಗಿಸಿಕೊಂಡು ಕಾಲ ಕಳೆದಂತೆ ಹೆಂಡತಿಯನ್ನೇ ದೇವಿ ಸ್ವರೂಪದಲ್ಲಿ ಕಂಡು ಆಕೆಗೆ ಪೂಜೆ ಸಲ್ಲಿಸುತ್ತಿದ್ದರು. ಆಕೆಯನ್ನು ಪೂಜನೀಯ ಸ್ಥಾನಕ್ಕೆ ಇರಿಸಿ ಗೌರವಿಸಿದವರು.

ಹೆಣ್ಣನ್ನು ಗೌರವಿಸುವ ಸಂಸ್ಕೃತಿ ಅನಾದಿ ಕಾಲದಿಂದಲೂ ಸನಾತನ ಧರ್ಮದಿಂದಲೂ ಬಂದಿದೆ ಎಂಬುದಕ್ಕೆ ಇಂತಹ ಎಷ್ಟೋ ಸಾಕ್ಷಿಗಳಿವೆ. ಕೆಲವು ಅಹಿತಕರ ಘಟನೆಗಳು ನಡೆದಾಗ ಕೆಲವರು ಹೇಳಬಹುದು, .ಕಲಿಗಾಲ ಸ್ವಾಮಿ, ಈಗ ದೇವರೆಲ್ಲಿದ್ದಾನೆ?' ಅಂತ. ಅವನಿಲ್ಲದೇ ನಮ್ಮ ಹುಟ್ಟೆಲ್ಲಿ, ಅವನ ಭಿಕ್ಷೆಯೇ ಈ ಬದುಕಲ್ಲವೇ? ಜ್ಞಾನಿಗಳಾಗಿ ಆಲೋಚಿಸಿದಾಗ ಬದುಕಿನ ಕೆಲವು ದಿನಗಳು ಕಳೆದಾಗ ಒಟ್ಟಾರೆ ಆಧ್ಯಾತ್ಮಿಕ ಚಿಂತನೆಯಿಂದ ಬದುಕು ಬದಲಾಗಿ ನಾವೂ ಮತ್ತೊಬ್ಬರಿಗೆ ಮಾರ್ಗದರ್ಶಕರಾಗುವುದು ಬಹುಮುಖ್ಯ. ವ್ಯಕ್ತಿ ಹೀಗೆಯೇ ಬದುಕಬೇಕೆಂಬ ನಿಬಂಧನೆಗಳೇನಿಲ್ಲ. ಆದರೆ ಸತ್ಯ ಮಾರ್ಗ ಉತ್ತಮ ಮಾರ್ಗ. ಆಯ್ಕೆ ಮಾಡಿಕೊಂಡು ಮಾಡುವ ಉತ್ತಮ ಕೆಲಸದತ್ತ ಚಿತ್ತ ಹರಿಸಿದರೆ ಸಾಕು, ಸಕಲವೂ ಸಿದ್ಧಿಸುವುದರಲ್ಲಿ ಅನುಮಾನವೇ ಇಲ್ಲ. ನಮ್ಮ ಪರಂಪರೆಯಲ್ಲಿ ಸಾಕಷ್ಟು ಜನರು ಸಾಧಿಸಿ ಹೋಗಿದ್ದಾರೆ. ನಾವು ಕೇವಲ ಆಧ್ಯಾತ್ಮಿಕ ಚಿಂತನೆಯತ್ತ ಮನ ಹೊರಳಿದರೂ ದೇಶಕ್ಕಾಗಿ, ಭಾಷೆಗಾಗಿ, ನಾಡಿಗಾಗಿಯೂ ದುಡಿಯುವ ಮನಸ್ಸು ಮಾಡಿದರೆ ಅದು ಕೂಡ ಒಂದು ಉತ್ತಮ ಮಾರ್ಗ. ನಮ್ಮನ್ನು ನಾವು ಗೌರವಿಸಿಕೊಂಡಷ್ಟೇ ಸಂತಸ ಆಗುತ್ತದೆ.

ಇತಿಹಾಸವಿರಲಿ ವಿಜ್ಞಾನವಿರಲಿ, ಶೈಕ್ಷಣಿಕ ಕ್ಷೇತ್ರವಿರಲಿ, ಹೀಗೆ ಅನೇಕ ವಿವಿಧ ರೀತಿಯ ಸ್ವಯಂಸೇವೆ ಅಥವಾ ಸರ್ಕಾರಿ ಹುದ್ದೆ, ಶಿಕ್ಷಕ ವೃತ್ತಿ, ಇರಬಹುದು. ಇಂತಹ ಕಾಯಕದಲ್ಲಿಯೂ ಪರಮಾತ್ಮ ಎಲ್ಲರಿಗೂ ಸನ್ಮಾರ್ಗದ ಹಾದಿಯನ್ನು ನೀಡಿರುತ್ತಾನೆ. ಸರ್ವರ ಮನಸ್ಸು ಒಳಿತಿನತ್ತ ಸಾಗಬೇಕಿದೆ.

ನಾವು ನಿತ್ಯ ಜೀವನದಲ್ಲಿ ಮಾಡುವ ಕಾಯಕದಲ್ಲಿಯೂ ಸುಖವನ್ನು ಕಾಣಬಹುದು. ಕೆಲವೊಮ್ಮೆ ಕೇವಲ ಮನುಷ್ಯನು ಮತ್ತೊಬ್ಬ ಮನುಷ್ಯನಿಗೆ ಸಹಾಯ ಮಾಡುವುದಲ್ಲದೆ ಮೂಕಜೀವಿಗಳ ರಕ್ಷಣೆಯಲ್ಲಿಯೂ ಭಗವಂತನನ್ನು ಕಾಣಬಹುದು. ಜಾತಿ, ಮತ, ಪಂಥ, ಬೇಧವಿಲ್ಲದೆ ಸಕಲರನ್ನೂ ಸರಿಸಮತ್ವದಿ ಕಾಣುವ ಮನಸ್ಥಿತಿಯಲ್ಲಿ ಎಂದಿಗೂ ನೀಡುವ ಕೈ ಆಗಬೇಕೇ ಹೊರತು ಬೇಡುವ ಕೈ ಆಗದಿರಲಿ.

ನಮ್ಮ ಚಿಂತೆ ಸದಾ ಯಶಸ್ಸಿನತ್ತ ಸಾಗುತ್ತದೆ. ಯಶಸ್ಸಿನತ್ತ ಚಿಂತನೆ ಎಂದರೆ ಮನದಲ್ಲಿ ಒಂದು ಪ್ರಶ್ನೆ ಮೂಡಬಹುದು ಏನದು ಯಶಸ್ಸು, ಮನುಷ್ಯ ಸದಾ ಯಶಸ್ಸಿನತ್ತಲೇ ಸಾಗಬೇಕಾ ಎನಿಸಬಹುದು. ಆದರೆ ಬದುಕಿನೊಳಗೆ ಸಾಕಷ್ಟು ಸವಾಲುಗಳು ಎದುರಾಗುತ್ತವೆ. ಎಲ್ಲಾ ಸವಾಲುಗಳನ್ನು ಸ್ವೀಕರಿಸುತ್ತಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಮುಖ್ಯ. ತಾಳ್ಮೆಯು ಮನುಷ್ಯನನ್ನು ಎತ್ತರೆತ್ತರ ಕೊಂಡೊಯ್ಯುತ್ತದೆ. ಬದುಕು ಕೇವಲ ಸುಖಾಸುಮ್ಮನೆ ಸಾಗುವುದಲ್ಲ, ಏನಾದರೂ ಹೊಸತನದತ್ತ ಚಿತ್ತವಿರಬೇಕು.

ಹೀಗೆ ನಾನಾ ರೀತಿಯ ಚಿಂತನೆಗಳನ್ನು ಬದುಕಿನ ಉಪಯೋಗಕ್ಕೆ ಮಾಡುತ್ತಿರಲೇಬೇಕು. ಹಲವಾರು ವಿಚಾರಗಳು ಈ ಪ್ರಪಂಚದ ಸುತ್ತಲೂ ಇರುತ್ತವೆ. ಈಗ ಟೆಕ್ನಾಲಜಿ ಅಂತ ಆದಿಯಲ್ಲಿ ಬಂದಂತಹ ವಿಚಾರ ಬದುಕನ್ನು ಅಲ್ಲೆಗಳೆಯಲು ಅಸಾಧ್ಯ.

ದೇವರ ನಾಮಸ್ಮರಣೆ, ಪೂಜೆ, ಹೋಮ, ಸಂಕಲ್ಪ ಹೀಗೆ ಆಧ್ಯಾತ್ಮಕ ಲೋಕದಲ್ಲಿ ಬಹಳಷ್ಟು ವಿಚಾರಗಳಿವೆ. ಇತಿಹಾಸದ ಪುಟಗಳನ್ನು ತಿರುವಿದರೆ ರಾಮಾಯಣ, ಮಹಾಭಾರತದಂತಹ ಗ್ರಂಥಗಳಲ್ಲಿ ರಾಮನ ಜೀವನ ತತ್ವಗಳು, ಕೃಷ್ಣನ ಭಗವದ್ಗೀತೆಯ ಉಪದೇಶಗಳು ಮಾನವ ಕುಲಕೋಟಿಗೆ ಮುಕ್ತಿಗೆ ದಾರಿ ತೋರುತ್ತವೆ. ಕೆಲವರಿಗೆ ಇದೊಂದು ಗೊಂದಲ ಅನಿಸಬಹುದು. ಕಾಲವೇ ಎಲ್ಲವನ್ನೂ ನಿರ್ಣಯಿಸುವುದು ಎಂಬುದು ಕಟು ಸತ್ಯ. .ರಾಮನ ಆದರ್ಶದ ಬದುಕು ಸಕಲ ಜೀವಿಗಳಿಗೆ ಸ್ಫೂರ್ತಿದಾಯಕ.

ಮನುಷ್ಯರು ಒಂದಷ್ಟು ವಿಭಿನ್ನವಾದ ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಸಾಧ್ಯವಾದಷ್ಟು ಒಳಿತಿನತ್ತ ಗಮನಹರಿಸಿ ಮತ್ತೊಬ್ಬರಿಗೆ ಮಾರ್ಗದರ್ಶನವಾಗಬೇಕಿದೆ.

ನಾವು ಕೆಲವು ಉದಾಹರಣೆಗಳನ್ನು ನೋಡಬಹುದು.

ಇಲ್ಲಿ ಶ್ರೀಮಂತ ಬಡವ ಎಂಬ ಬೇಧವಿಲ್ಲ. ಎಲ್ಲರಿಗೂ ಸರಿಸಮಾನ ಬದುಕು ಹೊತ್ತು ತಂದವರಿಲ್ಲ, ಹೊತ್ತು ಹೋದವರಿಲ್ಲ. ಇವೆರಡನ್ನು ಅರ್ಥೈಸಿಕೊಂಡರೆ ೫೦% ಜನರ ಜೀವನ ಸುಧಾರಿಸುತ್ತದೆ. ಬಹಳಷ್ಟು ಜನ ಭ್ರಮೆಯಲ್ಲೇ ಇರುತ್ತಾರೆ. ವಾಸ್ತವ ಬದುಕಿಗೆ ಬರುವುದು ಬಹಳಷ್ಟು ಕಷ್ಟ. ಲೌಕಿಕ ಲೋಕದಲ್ಲಿ ತಿಳಿಯುವ ವಿಚಾರವನ್ನು ಗಮನಿಸುತ್ತಾ ಬಂದರೆ ಜ್ಞಾನಿಗಳಾಗುತ್ತಾರೆ.

ದೇವರು ನಮಗೆ ಎಲ್ಲವನ್ನೂ ನೀಡಿರುತ್ತಾರೆ. ಆದರೆ ನಮಗೆ ಗೋಚರಿಸಬೇಕಷ್ಟೆ.. ನಾವು ವಿನಾಕಾರಣ ಅಲ್ಲಿ ಇಲ್ಲಿ, ಅವರು ಇವರು ಎಂದು ಹುಡುಕಾಟದಲ್ಲೇ ನಮ್ಮ ಜೀವನ ಕಳೆದುಹೋಗುತ್ತದೆ.

ಜೀವನದಲ್ಲಿ ಯಾವ ಭಾಗ್ಯ ಬಂದಿದೆಯೋ ಅದರಲ್ಲಿ ಬದುಕುವ ಲಕ್ಷಣವೂ ಸತ್‌ಚಿಂತನೆಯ ಒಂದು ಭಾಗ. ಇಂತಹ ವಿಚಾರಗಳನ್ನು ರೂಢಿಸಿಕೊಂಡರೆ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುವ ಸಾಧ್ಯತೆ ಇರುತ್ತದೆ. ಆದರೂ, ಕಾಲನೊಟ್ಟಿಗೆ ಬರುವ ಎಲ್ಲಾ ವಿಚಾರವೂ ವಿಧಿಲಿಖಿತ. ಕೆಲವು ಅನುಭವಗಳ ನಂತರ ಅರಿವಾಗುವುದು.

ಹಾಗಿದ್ದಲ್ಲಿ ನಾವೀಗ ಸನ್ಮಾರ್ಗದತ್ತ ಹೇಗೆ ಸಾಗುವುದು. ಮೊದಲೇ ಹೇಳಿದಂತೆ ಗುರುಗಳ ಮೊರೆಹೋಗಬೇಕು. ಕೆಲವೊಮ್ಮ ನಾವೇ ಎಲ್ಲ ಸರಿ ಅನ್ನುವ ಧೋರಣೆ ಬಿಟ್ಟು ಜ್ಞಾನಿಗಳ ಮಾತನ್ನು ಕೇಳುವ ತಾಳ್ಮೆ ಬಹುಮುಖ್ಯ.

ಗುರುಗಳು ದೀಕ್ಷೆ ಪಡೆದು ಮಠಗಳಲ್ಲಿ ಅಧ್ಯಯನ ಮಾಡಿ ಪ್ರಪಂಚ ಜ್ಞಾನವನ್ನು ತಿಳಿದಿರುತ್ತಾರೆ. ಶೃಂಗೇರಿ ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥರು ಧ್ಯಾನದಲ್ಲಿ ಮುಳುಗಿ. ಶೃಂಗೇರಿ ತಾಯಿಯ ಆಶೀರ್ವಾದ ಪಡೆದ ಮಹಾಪುರುಷರು. ಸದಾ ಸತ್ ಚಿಂತನೆಯಲ್ಲಿ ಮುಳುಗಿ ಸರ್ವ ಜನರ ಸುಖಕ್ಕಾಗಿ ತಮ್ಮ ಜ್ಞಾನವನ್ನು ಹರಡುತ್ತಿದ್ದಾರೆ. ಸಿದ್ದಗಂಗೆ ಶ್ರೀಗಳ ಅನನ್ಯ ಜ್ಞಾನ ಸಂಪತ್ತು ಮಕ್ಕಳ ಪಾಲನೆಗೆ ಮೀಸಲಿಟ್ಟಿದ್ದು ಎಲ್ಲರಿಗೂ ತಿಳಿದ ವಿಷಯವೇ.

.

ಜ್ಞಾನ, ಯೋಗ, ಹಿತವಾದ ಮಾತು, ಉಪಕಾರ ಮನೋಭಾವ, ಹೀಗೆ ಹತ್ತು ಹಲವು ಬಗೆಯ ಮಾರ್ಗಗಳ ಮೂಲಕ ಸತ್ ಚಿಂತನೆಯಿಂದ ಮುಕ್ತಿ ಪಡೆಯುವ ಪ್ರಯತ್ನವನ್ನು ಸಮಾಜದಲ್ಲಿ ಮಾಡಿದರೆ ಸಾರ್ಥಕ ಬದುಕಾಗುತ್ತದೆ.

ಪ್ರತಿ ಜೀವಿಯು ಮನಸ್ಸಿನಿಂದ ಮಾಡುವ ಉತ್ತಮ ಕಾಯಕ, ಯಾರನ್ನೂ ನೋಯಿಸದೆ ಒಂದೇ ಮನಸ್ಸಿನಿಂದ ಹರಸಿದ ಹಾರೈಕೆಯೂ ಫಲಿಸುವುದು. ಫಲಾಪೇಕ್ಷೆ ಇಲ್ಲದ ಮನಸ್ಸು ಎಂದಿಗೂ ಸುಖಿ. ಇಂತಹ ಚಿಂತನೆಯು ಸಮಾಜದ ಪರಿವರ್ತನೆಗೆ ಉತ್ತಮ ಉದಾಹರಣೆಯಾಗುತ್ತದೆ.

***



ಪುಟ್ಟ ಕತೆಗಳ ಶ್ರಾವಣ

ಗಣೇಶ ಪ್ರಯತ್ನ

ಮುನ್ನೂರು ಪದಗಳಲ್ಲಿ ಪುಟ್ಟ ಕತೆ ಬರೆಯೋದು ಅಂದ್ರೆ ಬಹಳ ಕಷ್ಟ ಉಂಟು ಮಾರಾಯ್ರೇ..

ಆಗಲೇ ಶ್ರಾವಣ ಕಳೆದು ಭಾದ್ರಪದ ಬಂತು.. ಇನ್ನೂ ಒಂದು ಕತೆನೂ ಆಗಿಲ್ಲ. ನಂಗಿನ್ನು ಪುರಸೊತ್ತಿಲ್ಲ. ಭಾದ್ರಪದ ಫುಲ್ ಬಿಜಿ, ಪೂಜೆ... ಮೆರವಣಿಗೆ... ಮೋದಕ-ಕರಿಗಡುಬು ನೈವೇದ್ಯ... ನೀರಲ್ಲಿ ಗುಳುಂ...

ಇಲ್ಲೇ ಪೆನ್ನು ಕೆಳಗಿಡ್ತೆ. ಇದಕ್ಕಿಂತ ಮಹಾಭಾರತ ಬರೆಯೋದೇ ಸುಖ ಅನ್ಸುತ್ತೆ.

ಶ್ರಾವಣದ ತೇರು

– ಮಾಲತಿ ಶ್ರೀನಿವಾಸನ್

ಹೊರಟಿಹುದು ಮತ್ತೊಮ್ಮೆ
ಹೊಸ ಹುರುಪು ಹೊಸ ಭಾವದಿ
ಕುಣಿಯುತ್ತ ಸಾಹಿತ್ಯದಾಸೋಹದ
ತೇರು, ಶ್ರಾವಣ ಮಾಸದ ಸಂಭ್ರಮ
ಕಥೆಗಳ ಅಭಿಯಾನ ಮೇರು.

ಕವಿ ಕಲ್ಪನೆಯಲಿ ಹರಿದಿಹುದು
ಸಾಹಿತ್ಯ ಧಾರೆ, ಹಾಕುತ್ತ ವರುಣನ
ಮುಸಲಧಾರೆಗೆ ಸವಾಲು.
ಕಲ್ಪನೆಯ ನೂರಾರು ಕತೆಗಳ ಕಲರವ
ದಶಕಗಳ ಜೀವನದ ಹಲವಾರು
ಘಟನೆಗಳ ರೂಪರೇಖೆಯ ರಿಂಗಣದ
ಅನುಭವ.

ಕಥೆ ಬರೆಯಲೇ ಸುಮ್ಮನೆ ಓದಲೇ
ಅದು ಮೇಲು ಇದು ಸರಿಯಲ್ಲ,
ಮನ ದ್ವಂದ್ವಗಳ ಗೂಡು, ಸಂಸಾರದ
ಜಂಜಾಟದಲಿ, ಓದಿದರೆ ಬರೆಯಲು
ಬರೆದಾರೆ ಓದಲು ಸಮಯ ಸಾಲದು,
ಬೆಂಬಿಡದ ಹಸಿವು ನಿದ್ರೆಗಳ ಕಾಟ
ಜೋರು.

ಅಭ್ಯಾಸ ಬಲವೋ ಬ್ರಹ್ಮತೇಜೋ
ಬಲವೋ ಸ್ವರುಚಿಯ ಅಡಿಗೆ
ಶಿಸ್ತಿನ ಜೀವನದ ಗಡಿಗೆ. ಪೂಜೆ
ಪುನಸ್ಕಾರ ಅತಿಥಿ ಅಭ್ಯಾಗತರ
ಶುನಕ ಹಕ್ಕಿಪಿಕ್ಕಿಗಳ ಆತಿಥ್ಯ,
ಎಲ್ಲದರ ನಡುವೆ ಸರಿವುದು
ಬೇರೆಲ್ಲ ನೇಪಥ್ಯ.

. ಕತೆ, ಕವನ, ಚುಟುಕು ಬರೆದಷ್ಟು
ಓದಿದಷ್ಟು ಇನ್ನಷ್ಟು ಬೇಕೆಂಬ
ಭಾವನೆಯ ತುಡಿತ,
ಆ ಸರಸೋತಮ್ಮನ ಸರಪಳಿಯ
ಸಾಹಿತ್ಯ ಸೇವೆಯ ಕೈಂಕರ್ಯಕೆ
ಸದಾ ಮನದಿ ಮಿಡಿತ.

***

ಧ್ಯಾನ ಗಂಗೆ

– ಮಾಲತಿ ಶ್ರೀನಿವಾಸನ್

ಕಣ್ಣು ಮುಚ್ಚಿ ಯೋಗಾಸನದಿ ಕುಳಿತು
ಧ್ಯಾನದಡೆ ಮನವ ಸರಿಸೆ,
ಮರ್ಕಟಮನ ಸೂತ್ರ ತಪ್ಪಿದ ಪಟದಂತೆ
ಎತ್ತೆತ್ತಲೋ ಹರಿಯೆ. ನಿರತ
ಧ್ಯಾನದಲಿ ತನು ಮನ ಎಲ್ಲಿ
ನಿಲ್ಲುವುದಯ್ಯ?.

ಯೋಗಾಸನ ನೂರಾರು ಭಂಗಿಗಳ
ನಿಯಮ ಸಾಲದು, ಮನ ಸಂಯಮ
ಸದ್ಭಾವ, ಸಮತೋಲನ ಸ್ಫುರಿಸುತ್ತಾ
ಮಾಡುವ ಕೈಂಕರ್ಯಯವೆಲ್ಲ ಧ್ಯಾನ.

ಸುತ್ತಲಿರುವವರ ಆದರಿಸಿ, ದೀನದಲಿತರ
ಸಂತೈಸಿ, ಮಾಡುವ ಸೇವೆಯೇ ಧ್ಯಾನ,
ನಾನು ನನ್ನದೆಂಬ ಅಹಮಿಕೆಯ
ತೊರೆದು
ಎಲ್ಲರೊಳು ತಾನು, ತನ್ನೊಳು ಎಲ್ಲರೂ
ಎಂಬುವ ಮನದ ಅನುಭೂತಿಯೇ
ಧ್ಯಾನ.

ಜೀವನದ ಹಾದಿಯಲಿ ಪ್ರತಿ ಹೆಜ್ಜೆಯಲಿ
ಆತ್ಮಾವಲೋಕನಕೆ ಮನವ ಸಿದ್ಧಿಸಿ,
ಸರಿ ತಪ್ಪುಗಳ ಪರಕಿಸದೆ,
ಶಾಂತತೆಯಲಿ ಸದ್ಭಾವ ಸಚ್ಚಿಂತನೆಯಲಿ
ಅಂತಃಸತ್ವದ ಅರಿವು ಮೂಡೇ
ಅದುವೆ ಮಹಾಧ್ಯಾನ.

***

ಸೋಲಿನ ಮಹತ್ವ

– ಸ್ನೇಹ ಶಶಿಧರ

ಮೊನ್ನೆ ದೂರದರ್ಶನದಲ್ಲಿ ಮಕ್ಕಳ ಕಾರ್ಯಕ್ರಮವೊಂದನ್ನು ನೋಡುತ್ತಿದ್ದೆವು. ತೀರ್ಪು ಹೇಳುವ ಸಮಯಕ್ಕೆ ವಿಚಿತ್ರ ಡಬ್ ಡಬ್ ಎಂದು ಮ್ಯೂಜಿಕ್ ಹಾಕಿದ್ದರು. ಏನೋ ಆ ಮಕ್ಕಳ ಭವಿಷ್ಯವೇ ಆ ತೀರ್ಪಿನ ಮೇಲೆ ನಿಂತಿರುವ ರೀತಿ ಉತ್ಪ್ರೇಕ್ಷೆ. ಅದು ಸಾಲದೆಂಬಂತೆ ಮಧ್ಯೆ ಮೂರರಿಂದ ನಾಲ್ಕು ನಿಮಿಷಗಳ ಜಾಹೀರಾತುಗಳು ಬೇರೆ. ಒಬ್ಬ ತೀರ್ಪುಗಾರರು ಮಕ್ಕಳೆಲ್ಲಾ ಗೆದ್ದಿದ್ದೀರಾ. ನಿಮ್ಮೆಲ್ಲರಿಗೂ ಬಹುಮಾನ ಕೊಡುತ್ತೇವೆ ಎಂದರು. ಅದನ್ನು ಕೇಳಿ ಎಲ್ಲ ಮಕ್ಕಳಿಗಿಂತ ಅತ್ಯಂತ ಸುಂದರವಾಗಿ ಪರ್ಫಾರ್ಮ್ ಮಾಡಿದ ಹುಡುಗನಿಗೆ ನಿರಾಶೆಯಾಯಿತು. ಆ ಹುಡುಗ ಗೆದ್ದೇಗೆಲ್ಲುವನೆಂಬ ನಿರೀಕ್ಷೆ ವೀಕ್ಷಕರಲ್ಲಿ ಹುಟ್ಟಿಸಿದ್ದು ಸತ್ಯ. ನಮಗೂ ನೀರಾಶೆಯಾಯಿತು. ಚಾನಲ್ ಬದಲಾಯಿಸಿದೆವು.

ಇನ್ನೊಂದು ಚಾನಲ್‌ನಲ್ಲಿ ಹಾಡಿನ ಕಾರ್ಯಕ್ರಮ ನಡೀತಿತ್ತು. ಇಲ್ಲೇನು ಉತ್ಪ್ರೇಕ್ಷೆಗಳಿಲ್ಲ, ಸುಶ್ರಾವ್ಯವಾದ ಹಾಡುಗಾರಿಕೆಯಲ್ಲವೇ ಎಂದುಕೊಂಡು ಕೂತೆವು. ಒಂದು ವಿರಾಮದ ಬಳಿಕ ಒಬ್ಬ ಕುರುಡ ಹಾಡಲು ಬಂದ. ಚೆನ್ನಾಗಿ ಹಾಡುತ್ತಿದ್ದ. ಆದರೆ ಗೆಲ್ಲುವ ಕುದುರೆಯಲ್ಲ. ಅದಾದ ನಂತರ ಮತ್ತೊಬ್ಬ ಹಾಡಿದ. ಕೇಳಲು ಇಂಪಾಗಿ ಹಾಡುತ್ತಿದ್ದ ಆದರೂ ಅವನಿಗೆ ಸಂಗೀತ ಜ್ಞಾನವಿಲ್ಲವೆಂಬುದು ತಿಳಿಯುತ್ತಿತ್ತು.

ಹಾಡು ಮುಗಿಸಿದ ಮೇಲೆ ಶುರುವಾಯಿತು ಶೋಕಾಚರಣೆ. ಈಗ ಹಾಡಿದವ ಬಡವ. ಮೂರು ವರ್ಷದ ಹಿಂದೆ ಅಪಘಾತದಲ್ಲಿ ತಮ್ಮನಿಗೆ ಕಾಲು ಹೋಗಿತ್ತಂತೆ. ಅದರದೊಂದು ಕಿರುಚಿತ್ರ. ನಮಗೆ ಭಾವನೆಗಳಿಲ್ಲ ಎಂದುಕೊಳ್ಳಬೇಡಿ. ಆದರೆ ಕೇವಲ ಭಾವನೆಗಳಿಂದ, ಸಹಾನುಭೂತಿ ತೋರುವುದರಿಂದ ಆ ವ್ಯಕ್ತಿಗಳಿಗೆ ನ್ಯಾಯ ಸಿಗುವುದೇ? ಅವರ ಸ್ವಾಭಿಮಾನಕ್ಕೆ ಧಕ್ಕೆಯಾಗುವುದಿಲ್ಲವೇ?

ಸಾಧನೆ ಎಂಬುದನ್ನು ಒಂದೇ ಅಳತೆಗೋಲಿನಲ್ಲಿ ಅಳತೆ ಮಾಡಲಾಗುವುದಿಲ್ಲ. ನಮ್ಮ ಅತ್ತೆಯ ಕಾಲದಲ್ಲಿ ಗಂಡನಿಗೆ ಬಗೆಬಗೆಯ ಅಡುಗೆ ಮಾಡಿ ಬಡಿಸುವುದೇ ಸಾಧನೆ. ತಂದೆಯ ಕಾಲದಲ್ಲಿ ರಿಟೈರ್ ಆಗುವುದರೊಳಗೆ ಒಂದು ಸ್ವಂತ ಸೂರು ಮಾಡಿಕೊಂಡರೆ ಅದೇ ಸಾಧನೆ. ಕೆಲವರಿಗೆ ಮಕ್ಕಳನ್ನು ದಡಕ್ಕೆ ಮುಟ್ಟಿಸುವುದೇ ಸಾಧನೆ. ಇನ್ನೂ ಹಲವರಿಗೆ ತಮ್ಮ ದುಡಿಮೆಯೆಲ್ಲ ಸಂಗ್ರಹಿಸಿ ಅಕೌಂಟಿನಲ್ಲಿ ದುಡ್ಡು ಕೂಡಿಡುವುದೇ ಸಾಧನೆ. ಹೀಗೆ ಒಬ್ಬೊಬ್ಬರದ್ದು ಒಂದೊಂದು ಕಥೆ ಇರುತ್ತದೆ. ಯಾರದು ಕಡಿಮೆ, ಯಾರದು ಹೆಚ್ಚು ಎಂದು ಅರಿಯಲು ಸಾಧ್ಯವಿಲ್ಲ. ಕೆಲವೊಮ್ಮೆ ಮನೆ ಕೆಲಸದವಳು ಬಾರದಿದ್ದರೆ, ಬೀದಿಯಲ್ಲಿ ಕಸ ತೆಗೆಯುವವರು ಇಲ್ಲದಿದ್ದರೆ, ಜಗತ್ತೇ ನಿಂತುಹೋದಂತೆ ಭಾಸವಾಗುತ್ತದೆ. ಸಣ್ಣ ಪುಟ್ಟ ಕೆಲಸದವರೆಂದು ಮೂಗು ಮುರಿಯಲು ಸಾಧ್ಯವಾ? ಎಲ್ಲ ಕೆಲಸಕ್ಕೂ ಅದರದ್ದೇ ಮಹತ್ವವಿರುತ್ತದೆ. ಎಲ್ಲರೂ ಡಾಕ್ಟರೇ ಆಗಬೇಕು, ಇಂಜಿನೀಯರೇ ಆಗಬೇಕು ಎಂದರೆ ಕೂಲಿ ಕೆಲಸ ಯಾರು ಮಾಡುತ್ತಾರೆ?

ಈ ವಿಚಾರವನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕು. ಮೊದಲೇ ಹೇಳಿದಂತೆ ಎಲ್ಲರೂ ಗೆದ್ದಿರಿ ಎಂದರೆ ನಿಜವಾಗಿಯೂ ಗೆಲ್ಲಲು ಅರ್ಹತೆ ಪಡೆದುಕೊಂಡವರಿಗೆ ಅನ್ಯಾಯವಲ್ಲವೇ. ಅವನ ಭಾವನೆಗೆ, ಭಾವನೆಗೆ ಮಿಗಿಲಾಗಿ ಅವನ ಪ್ರತಿಭೆಗೆ ಬೆಲೆ ಇಲ್ಲವೇ? ಈಗೆಲ್ಲ ಖಾಸಗಿ ಶಾಲೆಗಳ ಕಾರ್ಯಕ್ರಮದಲ್ಲಿ ಕ್ಲಾಸಿನ ಎಲ್ಲ ಮಕ್ಕಳೂ ಸ್ಟೇಜ್ ಮೇಲೆ ಭಾಗವಹಿಸುತ್ತಾರೆ. ಇದು ನೋಡೋದಕ್ಕೂ ಯಾರಿಗೂ ಹಿತವಾಗಿರೋಲ್ಲ. ಆದರೂ ಎಲ್ಲರನ್ನು ಓಲೈಸುವ ಪ್ರವೃತ್ತಿ. ಅರ್ಹತೆ ಇರುವ ಪ್ರತಿಭೆಗಳು ಎಲೆಮರೆಯ ಕಾಯಿಯ ಹಾಗೆ ಅಡಗಿಹೋಗುತ್ತವೆ. ಕಾರಣ ಕೇಳಿದರೆ ಒಂದೇ ಉತ್ತರ, ''ಅಯ್ಯೋ, ಮಕ್ಕಳು ಸೋತರೆ ಅತ್ತುಬಿಡುತ್ತಾರೆ''. ಅಳಲಿ ಬಿಡಿ. ಹಿಂದೆ ನಾವು ಮಕ್ಕಳಾಗಿದ್ದಾಗ ನಾವು ಸ್ನೇಹಿತರೊಂದಿಗೆ ಜಗಳವಾಡಿಕೊಂಡಿದ್ದರೆ, ನಮ್ಮ ಪೋಷಕರು ಮೊದಲು ನಮಗೆ ಬುದ್ಧಿವಾದ ಹೇಳುತ್ತಿದ್ದರು. ಇದರಿಂದ ನಾವು ಸ್ನೇಹಿತರೊಂದಿಗೆ ತಗ್ಗಿ ಬಗ್ಗಿ ನಡೆಯಬೇಕು, ಎಲ್ಲರಂತೆಯೇ ನಾವು,. ನಾವೇನು ವಿಶೇಷವಲ್ಲ ಎಂದು ಮನವರಿಕೆಯಾಗುತ್ತಿತ್ತು. ಈಗ ನಾವು ನಮ್ಮ ಮಕ್ಕಳನ್ನು ತೀರ

ವಹಿಸಿಕೊಂಡುಬಿಡುತ್ತೇವೆ. ನಮ್ಮ ಮಕ್ಕಳಿಗೆ ಯಾರೂ ಬೆರಳು ತೋರಿಸಬಾರದು. ಹೀಗೆ ಮಾಡಿದರೆ ಮಕ್ಕಳಿಗೆ ಸತ್ಯದ ಅನುಭವವಾಗುವುದು ಯಾವಾಗ? ಸಣ್ಣ ವಯಸ್ಸಿನಲ್ಲಿ ಸಣ್ಣಪುಟ್ಟ ವೇಡಿಕೆಗಳಲ್ಲೂ ನಾವು ಸೋಲು ಅನುಭವಿಸಲು ಬಿಡದಿದ್ದರೆ ದೊಡ್ಡ ಹಂತ ತಲುಪಿದಾಗ ಅವರು ಹೇಗೆ ಎದುರಿಸುತ್ತಾರೆ? ಮಕ್ಕಳನ್ನು ರಕ್ಷಣೆ ಮಾಡುವುದು ಒಳ್ಳೆಯದೇ. ಗಾಳಿಪಟದ ರೀತಿ. ದಾರ ಉದ್ದವಿದ್ದಷ್ಟೂ ಪಟ ದೂರ ಹಾರುವುದು. ಬಾಲಂಗೋಚಿ ಕತ್ತರಿಸಿದರೆ ಗೋತ ಹೊಡೆದುಕೊಂಡು ಗೊತ್ತುಗುರಿಯಿಲ್ಲದೆ ಎಲ್ಲೋ ಹೋಗಿ ಬೀಳುವುದು. ಆದರೆ ಅದು ಅವರಿಗೆ ಉಸಿರು ಕಟ್ಟುವಂತಿರಬಾರದು. "ಅಮ್ಮ ನಿನ್ನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು, ಮಿಡುಕಾಡುತಿರುವೆ ನಾನು" ಎಂಬ ಹಾಡಿನ ರೀತಿ ಆಗಬಾರದು.

ಮಕ್ಕಳಿಗೆ ಗೆಲುವು ಮುಖ್ಯ. ನಿಜ. ಆದರೆ ಸೋಲನ್ನು ಎದುರಿಸುವುದು ಅದಕ್ಕಿಂತ ಮುಖ್ಯ. ಸೋಲಿನ ಅನುಭವವೇ ಆಗದ ಮಕ್ಕಳು ಮುಂದೆ ಮಾನಸಿಕ ಒತ್ತಡಗಳನ್ನು ಎದುರಿಸಲು ವಿಫಲರಾಗುತ್ತಾರೆ. ಕೆಲವೊಮ್ಮೆ ನಮ್ಮ ಈ ರಕ್ಷಣಾತ್ಮಕ ಪ್ರವೃತ್ತಿಯೇ ಅವರಿಗೆ ಮುಳುವಾದೀತು. ಹೆಚ್ಚುತಿರುವ ಆತ್ಮಹತ್ಯೆಗಳು, ವಿಚ್ಛೇದನಗಳು, ಮನೋರೋಗಗಳು ಇನ್ನೂ ಹಲವು ತೊಂದರೆಗಳಿಗೆ ಒಳಗಾಗುತ್ತಾರೆ. ಇದರಿಂದ ಅವರಿಗೇ ಸಮಸ್ಯೆ. ಅದರಿಂದ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಸೋಲಿನ ರುಚಿ ತೋರಿಸಬೇಕು. ಮಕ್ಕಳು ಸೋಲನ್ನು ತಿರಸ್ಕರಿಸದೆ ಗೆಲುವಿನ ಮೆಟ್ಟಿಲು ಮಾಡಿಕೊಳ್ಳಬೇಕು. ಗೆಲುವು ಶಾಶ್ವತವಲ್ಲ. ಸೋಲು ಸಹ ಶಾಶ್ವತವಲ್ಲ. ಇವತ್ತು ಗೆದ್ದವರು ನಾಳೆ ಸೋಲಬಹುದು. ಇಂದು ಸೋತವರು ನಾಳೆ ಗೆಲ್ಲಬಹುದು. ಗೆದ್ದಾಗ ಹಿಗ್ಗದೇ, ಸೋತಾಗ ಕುಗ್ಗದೇ ಇರುವುದು ಅತಿ ಮುಖ್ಯ. ಅದಕ್ಕೂ ಮಿಗಿಲಾಗಿ ಪ್ರಯತ್ನ ಅತಿಮುಖ್ಯ. ಸತತವಾಗಿ ಮುನ್ನುಗ್ಗುತ್ತಿರುವುದು ಮುಖ್ಯ.

***

ಪರಿವರ್ಧಿನಿ ಷಟ್ಪದಿಯಲ್ಲಿ

ಕನ್ನಡ ವೈಭವ

– ಸುಜಾತಾ ರವೀಶ್

ಪಂಪನು ಹಾಕಿದ ಹಾದಿಯ ಗುರುತಲಿ
ಸೊಂಪಿನ ನುಡಿಗಳ ಪದಗಳ ಗಣಿಯಲಿ ಪೆಂಪಿನ ಮಾತಿನ
ಸೊಬಗಿನ ಸೀಮೆಯು ನಮ್ಮಯ ಸಿರಿನಾಡು
ಇಂಪಿನ ವೀಣೆಯ ಖನಿಯಿದೆ ದನಿಯಲಿ
ಕಂಪಿನ ಮಲ್ಲಿಗೆ ತನಿಯಿದೆ ಬನದಲಿ
ತಂಪಿನ ನೆರಳಿನ ಮಾತೆಯ ಮಡಿಲಿನ ತವರಿದು ಕರುನಾಡು

ಅಂದದ ಕಲೆಯದು ಮೆರೆದಿದೆಯೆಲ್ಲೆಡೆ
ಚಂದದ ಸಂಸ್ಕೃತಿ ನೆಲೆಸಿದೆಯಿಲ್ಲಿಯೆ
ಚಂದನ ಪರಿಮಳ ತುಂಬಿದ ಸಂಪದವಿಲ್ಲಿದೆ ನೀ ನೋಡು
ಸುಂದರ ಪರಿಸರ ನಯನಕೆ ಪರುವವು ಕುಂದನವಾಗಿದೆ
ಕವಿಗಳ ರಚನೆಯು ಕುಂದದ ಚೆಲುವಿನ ಸ್ನೇಹದ
ಮಮತೆಯ ಮರೆಯದ ಸವಿಹಾಡು

ಒಮ್ಮನದಿಂದಲಿ ಕಂಕಣ ಧರಿಸುವ
ನಮ್ಮಯ ಭಾಷೆಯ ಹಿರಿಮೆಯ ಸಾರುವ
ಹೆಮ್ಮೆಯ ಕೇತನ ಹಾರಿಸಿ ಜಗದಲಿ ಕನ್ನಡ ಮೆರೆಸೋಣ
ಅಮ್ಮನ ಸೇವೆಯು ಸುಮ್ಮನೆ ದೊರೆಯದು ಭಿಮ್ಮನು
ತೋರದೆ ಸೋದರ ಭಾವದಿ
ಹಮ್ಮನು ಬಿಡುತಲಿ ಸಮಾನರೆನ್ನುವ ಜಾಗೃತಿ ತರಿಸೋಣ

***

ಈ ನನ್ನ ಜೀವನ

– ಜಾನಕಿರಾಮ

ಈ ನನ್ನ ಜೀವನ
ಹಗಲುಗನಸು ಅಲ್ಲ
ಅಸಾಧ್ಯ ಸಾಧನೆಗಳಿಲ್ಲ
ಇಲ್ಲದ ಕಲ್ಪನೆಗಳಿಲ್ಲ
ಈ ನನ್ನ ಜೀವನ ಹಗಲುಗನಸು ...ಅಲ್ಲ

ತುಪ್ಪ ಮಾರುವ ಹೆಣ್ಣಲ್ಲ... ನಾ
ಇಟ್ಟಿಗಳು ತಲೆಯ ಮೇಲಣ ಗಿಂಡಿಯಲ್ಲ
ನೂರು ಕಲ್ಪಿತಗಳ ಜಾತ್ರೆಯಾಗಿ
ಇದ್ದ ತುಪ್ಪವನೂ
ಕಳೆದು ಕೊಳ್ಳುವದಲ್ಲ
ಈ ನನ್ನ ಜೀವನ ಹಗಲುಗನಸು ...ಅಲ್ಲ

ಮುರುಕು ಧರ್ಮಶಾಲೆಯಲ್ಲಿಯ ತಿರುಕನ
ಗತಿಯಲ್ಲ... ನನ್ನದು
ಯಾರೋ ನೀಡುವ ಹಾರ ಬೇಕಿಲ್ಲ
ದಾಹಕ್ಕೆ ಬಲಿಯಾಗಿ
ಹೆದರಿಕೆಯಲಿ ಬದುಕಬೇಕಾಗಿಲ್ಲ
ಎಚ್ಚರವಾದಾಗ ಮರುಗಬೇಕಾಗಿಯೂ ಇಲ್ಲ
ಈ ನನ್ನ ಜೀವನ ಹಗಲುಗನಸು ...ಅಲ್ಲ

ಊರೆಲ್ಲ ಸುತ್ತಾಡಿ ಮಡಿಕೆಯಲಿ ತುಂಬಿದ ಸತ್ತುಗದ ಪುಡಿ..
ಸೊಕ್ಕು ಸೋಮಶರ್ಮನ ತಂದೆಯಂತೆ
ಒಡೆದು ಮುಖಕೆರಚಿದಾಗಲೇ ಗೊತ್ತು ನನ್ನದಾವುದು...
ನನ್ನದಲ್ಲದಾವುದೆಂದು
ಅಲ್ಲದರ ಬೆಂಬತ್ತಿ, ಇರುವುದನು ಕಳೆಯುವ
ಹಗಲುಗನಸು ...ಅಲ್ಲ ಈ ನನ್ನ ಜೀವನ

***

ನಗೆಬರಹ

ತಲೆ ಶಿರೋಭಾರ

– ಎಂ.ಎಸ್.ಎನ್.

ವಿಶ್ವನ ಮನೆಗೆ ಬಂದಾಗ ಅಲ್ಲೊಂದು ಆಶ್ಚರ್ಯ ಕಾದಿತ್ತು. ಯಾರೋ ಒಬ್ಬ ವ್ಯಕ್ತಿ ತಲೆಯ ಮೇಲೆ ಹೆಲ್ಮೆಟ್ ಹಾಕಿಕೊಂಡು ಮಂಕಾಗಿ ಫಂಕಾಗಿ ಕುಳಿತಿದ್ದ. ಅದು ಫುಲ್ ಹೆಲ್ಮೆಟ್ ಆದ್ದರಿಂದ ಒಳಗಿದ್ದ ಮುಖದ ಚಹರೆ ತಿಳಿಯಲಿಲ್ಲ.

"ಎಲ್ಲಿ ನಿಮ್ಮೆಜಮಾನ್ರು?" ಎಂದು ವಿಶಾಲೂನ ಕೇಳಿದೆ.

"ಕೂತಿದೆಯಲ್ಲ ಇಲ್ಲೇ" ಎಂದು ಆತನ ತಲೆಯ ಮೇಲೆ ಮೊಟಕಿದಳು. ಹೆಲ್ಮೆಟ್ ಧರಿಸಿದ್ದರಿಂದ ವಿಶ್ವನಿಗೆ ಏಟು ಬೀಳಲಿಲ್ಲ.

"ಮನೆಯಲ್ಲಿ ಕೂಡ ಈತ ಹೆಲ್ಮೆಟ್ ಯಾಕೆ ಹಾಕ್ಕೊಂಡಿದ್ದಾನೆ ?" ಎಂದೆ.

"ನಾನೇ ಹಾಕ್ಸಿದ್ದು. ಅದು ಶಿಕ್ಷೆ !" ಎಂದಳು.

"ನೀವು ಲಟ್ಟಣಿಗೇಲಿ ಹೊಡೆಯೋಕೆ ಬಂದಾಗ ವಿಶ್ವ ತಾನೇ ಹಾಕ್ಕೊಂಡನೇನೋ ಅಂತ ಅನ್ನಿಸ್ತು" ಎಂದೆ. ಹೆಂಡತಿಯ ಆಯುಧಗಳಿಂದ ಗಂಡನ ತಲೆ ಉಳಿಯಲು ಶಿರಸ್ತ್ರಾಣ ತ್ರಾಣ ನೀಡುತ್ತದೆ.

ವಿಶ್ವ ಹೆಲ್ಮೆಟ್ ಒಳಗಿಂದ ಗೊರಗೊರ ಸೌಂಡ್ ಮಾಡಿದಾಗ ಭಾಷೆ ತಿಳಿಯಲಿಲ್ಲ.

"ಇದರ ಹಿಂದಿನ ಕತೆ ಏನು ?" ಎಂದಾಗ ವಿಶಾಲು ಗಂಡನ ಕಡೆ ನೋಡಿದಳು.

"ತೆಗೀರಿ ಹೆಲ್ಮೆಟ್ಟು, ನೀವೇ ಮಾತಾಡ್ರಿ" ಎಂದಳು. ಹೆಲ್ಮೆಟ್ ಕಳಚಿದ ವಿಶ್ವ ದುಃಖದಿಂದ ಹೇಳಿದ.

"ಬೆಳಗಾಗೆದ್ದು ಇವಳಿಂದ ಐನೂರು ರೂಪಾಯಿ ನಷ್ಟ ನನಗೆ. ಒಂದು ಲೀಟರ್ ಎಕ್ಸ್ಟ್ರಾ ಹಾಲು ತರೋಕೆ ಕಳಿಸಿದ್ಲು. ಐನೂರು ರೂಪಾಯಿ ಫೈನ್ ಬಿತ್ತು ಗೆಳೆಯಾ" ಎಂದ.

ಎಕ್ಸ್ಟ್ರಾ ಹಾಲು ಯಾಕೆ ಎಂದು ನಾನು ಕೇಳಬಾರದಿತ್ತು. ಕೇಳಿದ್ದು ರಿವರ್ಸ್ ಗೇರಲ್ಲಿ ನನಗೇ ಅಪ್ಪಳಿಸಿತು.

"ಇವತ್ತು ಭಾನುವಾರ, ಯಾರಾದ್ರೂ ದಿಢೀರ್ ಗೆಸ್ಟುಗಳು ಬರ್ತಾರಲ್ಲ, ನಿಮ್ಮ ಹಾಗೆ! ಮನೆಗೆ ಬರೋ 'ಟಾಮ್ ಡಿಕ್ ಅಂಡ್ ಹ್ಯಾರಿ'ಗಳಿಗೆಲ್ಲ ಕಾಫಿ ಮಾಡಿ ಕುಕ್ಕಲು ವರ್ತನೆ ಹಾಲು ಸಾಲೊಲ್ಲ" ಎಂದು ಎಕ್ಕಿದಳು.

"ಹಾಲು ತಗೊಂಡು ಬಂದ್ರೆ ಫೈನ್ ಹಾಕ್ತಾರಾ ವಿಶ್ವ?"

"ಬೇಡ ಅಂದ್ರೂ ಟೂ ವ್ಹೀಲರ್ ತಗೊಂಡ್ಹೋದ್ರು. ಹೆಲ್ಮೆಟ್ ಹಾಕ್ಕೊಂಡಿರ್ಲಿಲ್ಲ. ವಾಪಸ್ ಬರೋವಾಗ ಪೊಲೀಸ್ ಹಿಡಿದ್ರು, ತಲೆ ಖಾಲಿ ಇರೋದು ನೋಡಿ ಫೈನ್ ಜಡಿದ್ರು" ಎಂದಳು ವಿಶಾಲು.

"ಯಾಕೆ ವಿಶ್ವ, ಹೆಲ್ಮೆಟ್ ಹಾಕ್ಕೋಬಹುದಿತ್ತಲ್ಲ?" ಎಂದೆ.

"ಪಕ್ಕದ ರಸ್ತೇಲೇ ಇದೆ ಹಾಲಿನ ಬೂತು. ಇಷ್ಟು ಹತ್ತಿರಕ್ಕೆ ಯಾರು ಹಾಕ್ಕೋತಾರೆ ಹೆಲ್ಮೆಟ್ಟು?" ಎಂದು ವಾದಿಸಿದ.

"ದೂರದ ಪ್ರಶ್ನೆ ಅಲ್ಲ, ಅದು ನಿನ್ನ ಸೇಫ್ಟಿಗೋಸ್ಕರ ತಾನೇ?" ಎಂದು ಏನೋ ಸಮಜಾಯಿಷಿ ಹೇಳಲು ಹೋದೆ. ವಿಶ್ವನಿಗೆ ಸಿಟ್ಟು ಬಂತು.

"ಮೊನ್ನೆ ಪೇಪರ್ ನೋಡಿದ್ಯಾ? ಬಿಡದಿ ಫಂಕ್ಷನ್ನಿಗೆ ರಾಜಕೀಯ ಪಕ್ಷದವರು ಬೈಕ್ ಯಾತ್ರೆ ಮಾಡಿದ್ದು? ರಾಜಕಾರಣಿಗಳ ದಂಡೇ ಇತ್ತು. ಎಲ್ರೂ ಟೂ ವ್ಹೀಲರ್‌ಗಳಲ್ಲೇ ಬಂದಿದ್ರು. ಒಂದೊಂದು ಗಾಡಿಗೆ ಇಬ್ಬಿಬ್ರು. ಒಬ್ಬ ಮನುಷ್ಯನಾದ್ರೂ ತಲೆಗೆ ಹೆಲ್ಮೆಟ್ ಧರಿಸಿದ್ನಾ? ಮಂತ್ರಿಗಳು ಸಹ ಇದ್ರು. ಅವರ್ದೂ ಖಾಲಿ ತಲೆ. ಹೆಲ್ಮೆಟ್ ರೂಲ್ಸ್ ಇರೋದು ಯಾರಿಗೆ? ತೆಪ್ಪಗಿರೋ, ನಮಗೇನು ತಲೆ ಇಲ್ವಾ ?" ಎಂದು ಕೂಗಾಡಿದ.

ವಿಶಾಲೂ ಅವನ ಮಾತು ತಡೆದಳು. "ನಿಧಾನ.. ನಿಧಾನ.. ತುಂಬಾ ಆವೇಶಕ್ಕೆ ಒಳಗಾಗ್ಬೇಡಿ, ಬಿ.ಪಿ. ಜಾಸ್ತಿ ಆಗುತ್ತೆ"

"ಮತ್ತಿನ್ನೇನೇ? ಹಾಲಿಗೆ ಐವತ್ತು, ಪೊಲೀಸ್‌ಗೆ ಐನೂರು ಕೊಟ್ರೆ ನನ್ ಕತೆ ಏನಾಗ್ಬೇಕು? ನೀನು ಮಾಡೋದು ಸೆವೆನ್ ಸ್ಟಾರ್ ಹೋಟೆಲ್ ಕಾಫೀನಾ?" ಎಂದುಬಿಟ್ಟ.

ವಿಶಾಲೂಗೆ ಸಿಟ್ಟು ಹೆಚ್ಚಾಗಿ ಕಾಫಿ ಮಾಡಲು ಒಳಗಡೆ ಹೋದಳು. ವಿಶ್ವನ ಕಷ್ಟದ ಬಗ್ಗೆ ಕನಿಕರದಿಂದ, "ಯಾಕೆ ವಿಶ್ವ ಟೆಂಪರ್ ಕಳ್ಕೋತೀಯ ?" ಎಂದೆ.

"ಇವಳಿಂದಾಗಿ ನನಗೆ ಫೈನ್ ಬಿತ್ತು"

"ಏನೋ ಗ್ರಹಚಾರ, ಸಿಕ್ಕಿಬಿದ್ದೆ. ಅಷ್ಟಕ್ಕೇ ಸಿಟ್ಟಾ ?"

"ನನ್ನ ಸಿಟ್ಟು ಅದಕ್ಕಲ್ಲ, ಮೊನ್ನೆ ರಾಜಕೀಯ ಪಕ್ಷದ ಕಾರ್ಯಕರ್ತರು ಬಿಡದಿಗೆ ಜಾಥಾ ಮಾಡಿದ್ದನ್ನ ಟೀವೀಲಿ ನೋಡಿದೆ. ಸಾವಿರಾರು ಮಂದಿ ಗಾಡೀಲಿ ಹೋದ್ರಲ್ಲ, ಒಬ್ರಾದ್ರೂ ಹೆಲ್ಮೆಟ್ಟು ಹಾಕಿದ್ರಾ? ಅವರಿಗೆ ಪೊಲೀಸ್ ಎಸ್ಕಾರ್ಟ್ ಬೇರೆ. ನಮ್ಮಂಥ ಜನಸಾಮಾನ್ಯರು ಮಾತ್ರ ಹೆಲ್ಮೆಟ್ ಹಾಕ್ಬೇಕಾ?" ಎಂದು ರಿಪೀಟಿಸಿದ.

"ಅವರು ಮಂತ್ರಿಗಳು ಮತ್ತು ಅವರ ಶಿಷ್ಯರು" ಎಂದೆ.

"ಆದರೇನು ಮಂತ್ರಿಗಳು ಆಕಾಶದಿಂದ ಉದುರಿ ಬಂದವರಾ? ನಮ್ಮನೆ ಬಾಗಿಲಿಗೆ ಬಂದು ಕೈ ಮುಗಿದು, ಕಾಲಿಗೆ ಬಿದ್ದು ಓಟು ತಗೊಂಡು ಗೆದ್ದವರಲ್ವಾ ಅವರು?" ಎಂದ.

"ರೀ, ತಗೊಳ್ಳಿ ಕಾಫಿ. ಕಾಫಿ ಕುಡಿದು ಸಮಾಧಾನವಾಗಿ ಮಾತಾಡಿ" ಎಂದಳು ವಿಶಾಲು. ವಿಶ್ವ ಕಾಫಿ ಕುಡಿಯುತ್ತಾ ಸಮಾಧಾನ ಮಾಡಿಕೊಂಡ.

"ಹ್ಯಾಗಿದೆ ಕಾಫಿ ?" ವಿಶಾಲು ಕೇಳಿದಳು.

“ವೆರಿ ಗುಡ್, ಫ್ರೆಶ್ಶಾಗಿ ಡಿಕಾಕ್ಷನ್ನಾ” ಎಂದು ನಾನು ಉಬ್ಬಿಸಿದೆ.

“ಹೌದು, ಪಾಪ, ನಮ್ಮೆಜಮಾನ್ರಿಗೆ ಇವತ್ತು ಮೊದಲನೇ ಡೋಸ್ ಕಾಫಿ”

“ಅಯ್ಯೋ! ಏನಿದು, ಬೆಳಿಗ್ಗೆ 9 ಗಂಟೆ ಆದ್ರೂ ಮೊದಲನೇ ಡೋಸ್ ಕಾಫಿ ಬಿದ್ದಿಲ್ವಾ ?”

“ಪೊಲೀಸ್ ಕೈಗೆ ಸಿಕ್ಕಿಬಿದ್ದು ಫೈನ್ ಹಾಕಿಸ್ಕೊಂಡು ಈಗ ತಾನೇ ಬಂದ್ರಲ್ಲ, ಆ ಬಗ್ಗೆ ಜಗಳ ಶುರು ಆಗಿತ್ತು. ಕ್ಲೈಮ್ಯಾಕ್ಸಿಗೆ ಹೋಗೋ ಮೊದಲು ನೀವು ಬಂದ್ರಿ” ಎಂದಳು.

“ನೋಡು ವಿಶ್ವಾ, ಅತ್ತೆ ಒಡೆದ ಪಾತ್ರೆಗೆ ಬೆಲೆ ಇಲ್ಲ ಅನ್ನೋ ಗಾದೆ ನಿನಗೆ ಗೊತ್ತಿರ್ಬೇಕಲ್ಲ?”

“ಸರಿಯಾಗಿ ಹೇಳಿದ್ರಿ. ನಮ್ಮತ್ತೆಗೆ ಹೇಳಿ ಮಾಡ್ಸಿದ ಗಾದೆ ಅದು” ಎಂದು ವಿಶಾಲು ಹಳೇ ದಿನಗಳ ಫ್ಲಾಷ್ ಬ್ಯಾಕಿಗೆ ಹೋದಳು.

“ನಾನೊಂದ್ಸಲ ಪಾತ್ರೆ ತೊಳೆಯೋವಾಗ ಗಾಜಿನ ಲೋಟ ಒಡೆದು ಹಾಕ್ದೆ. ನೂರು ರೂಪಾಯಿ ಹಾಳಾಯ್ತು ಅಂತ ಅತ್ತೆ ಕೂಗಾಡಿಬಿಟ್ರು. ಆದ್ರೆ ನಮ್ಮತ್ತೆ ಉಪ್ಪಿನಕಾಯಿ ಜಾಡೀನ ಬಿಸಿಲಲ್ಲಿ ಇಡೋಕೆ ಅಂತ ಟೆರೇಸ್ಗೆ ಹೋಗೋವಾಗ ಜಾಡೀನೂ ಕೆಡವಿದ್ರು, ತಾವೂ ಬಿದ್ರು”

“ಅಯ್ಯೋ ದೇವ್ರೇ! ಆಮೇಲೆ?”

“ಆಮೇಲೇನು? ಅವರ ಕಾಲಿಗೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ರಾಡ್ ಹಾಕ್ಸಿದ್ರು. ಆದ್ರೆ ಜಾಡಿ ಒಡೆದ ಬಗ್ಗೆ ಅತ್ತೆ ಎಂದೂ ಮಾತಾಡಿಲ್ಲ. ನಾನು ಒಡೆದ ಗಾಜಿನ ಲೋಟ 100 ರೂಪಾಯಿ ಅಂತಿರ್ತಾರೆ”

“ಅತ್ತೆ ಅಂದ್ರೆ ಅಧಿಕಾರ. ನಾವು ರಾಜಕಾರಣಿಗೆ ಅಧಿಕಾರ ಕೊಟ್ಮೇಲೆ ಮುಗೀತು ವಿಶ್ವ. ಅವರನ್ನ ನಾವು ಪ್ರಶ್ನೆ ಮಾಡೋಕಾಗೊಲ್ಲ. ಅವರು ಮಾಡಿದ್ದೆಲ್ಲ ಸರಿ ಅನ್ನಬೇಕು. ಅವರು ಸಿಕ್ಕಿಬಿದ್ರೂ ಕೇಸ್ ಆಗೊಲ್ಲ. ಓವರ್ ಸ್ಪೀಡಲ್ಲಿ ಹೋಗಿ ಆ್ಯಕ್ಸಿಡೆಂಟ್ ಮಾಡಿದರೂ ಕೇಸ್ ಆಗೊಲ್ಲ. ಯಾರೋ ಆತ್ಮಹತ್ಯೆ ಮಾಡ್ಕೊಳ್ಳೋಕೆ ಕಾರಣ ಇವರೇ ಆಗಿದ್ರೂ ಅರೆಸ್ಟ್ ಆಗದೆ ತಲೆ ತಪ್ಪಿಸಿಕೊಂಡು ಬೇಲ್ ತಗೋತಾರೆ. ಲೀಡರ್‌ಗಳಿಗೆ ವಿಶೇಷವಾದ ಪ್ರಿವಿಲೇಜ್ಸ್ ಇವೆ” ಎಂದಾಗ ವಿಶ್ವ ಮಿಕಿಮಿಕಿ ನೋಡಿದ.

“ಕಾನೂನು ಮಾಡೋ ರಾಜಕಾರಣಿಗಳು ಪ್ರಶ್ನಾತೀತರು. ಸುಮ್ನೆ ಕುಡೀರಿ ಕಾಫಿ” ಎಂದಳು ವಿಶಾಲು.

“ತಾನೂ ರಾಜಕಾರಣಿ ಆಗಿದ್ರೆ ಎಲ್ಲ ತಪ್ಪುಗಳಿಂದ ವಿನಾಯ್ತಿ ಸಿಕ್ತಿತ್ತು” ಎಂದು ವಿಶ್ವ ಪೇಚಾಡಿದ.

***

ರವಿತೇಜನ ಮುಕ್ತಕಗಳು

– ಬೆಂ.ಶ್ರೀ. ರವೀಂದ್ರ

ಈ ಪಥ್ಯ ಇವಗೆ ಸಲ್ಲ ಆ ಪಥ್ಯ ಅವಗೆ ಸಲ್ಲ
ಪಾಠಕಗೆ ಸ್ವಾರ್ಥ ಜಟಾಪಟಿ ಹೊಲ್ಲ
ಸತ್ಯವಳಿಯದಿರಲಿ – ರವಿತೇಜ //೧//

ಒಪ್ಪು ಸತ್ಯಶಿಖರಕ್ಕೆ ಹಲವು ದಾರಿಗಳೆಂದು
ಇಲ್ಲವಾಗುವುದೆಲ್ಲ ತಲುಪಲಲ್ಲಿ
ನಾನೆಂಬ ಹಠ ಹೊಲ್ಲ- ರವಿತೇಜ //೨//

ಚೆಲುವೆಂದು ನಾಗನ ಅಪ್ಪಿ ಮುದ್ದಿಸುವುದುಂಟೆ
ಚುರುಕೆಂದು ಪಾರದವ ಕುಡಿವುದುಂಟೆ
ವಸ್ತುಗುಣ ಗ್ರಹಿಸು- ರವಿತೇಜ //೩//

ವ್ಯಾಖ್ಯಾನ ಹಲವು ಪರಿಪೂರ್ಣರೆಲ್ಲುಂಟು ಜಗದಿ,
ವಾಲ್ಮೀಕಿ ವ್ಯಾಸರಿಗೂ ಜಿಜ್ಞಾಸುಗಳುಂಟು
ಅಪರಿಪೂರ್ಣತೆಯನೊಪ್ಪು- ರವಿತೇಜ //೪//

ಲಾಲಸೆಯೆಂದು ಹೀನೈಸದಿರು ಆಕರ್ಷಣೆಯನು
ಲಾಲಿಸಿ ಮನ್ನಿಸಿ ಪಾಲಿಸು ಸಹಜವೆಂದು
ಸಹಜವೆ ಸನ್ನಿಧಿಯು – ರವಿತೇಜ //೫//

ಬಿಟ್ಟವಗೆ ಬಿಟ್ಟೆಹೆನೆಂದೆನಿಸದಿರೆ ತ್ಯಾಗಿಯು
ಬಿಟ್ಟೆಹೆನೆಂದೆನಿಸೆ ಅವ ಭೋಗಿಯು
ವಿರಾಗ ನಿಜಕಾಣ್ಕೆಯು – ರವಿತೇಜ //೬//

ಗುರು ದೇವ ತಾಯ್ತಂದೆ ಬಂಧು ಮಿತ್ರರಿಗಿಂತ
ಮಂಡಿಯೂರಿ ನಿನ್ನಾತ್ಮನಲಿ ಯಾಚಿಸು
ಕ್ಷಮೆಯ ಧೃತಿಯಿರಲಿ – ರವಿತೇಜ //೭//

ನೂರಲ್ಲ ಮೂರಾಡಿರೆ ಸಾಕು ಅರ್ಥ ಸ್ಫುರಿಸಲು
ಸಾಗರವೇಕೆ ಉದ್ಧರಣೆಯಲೆ ತೀರ್ಥ –
ಮನವಿದ್ದಲ್ಲಿ ಮಾಧವ – ರವಿತೇಜ //೮//

ತತ್ವ ವಿಚಾರ ಸಿದ್ಧಾಂತಗಳಿರಲಿ ಸಾವಿರಾರು
ಸಹಜವಾಗಿರು ಬುವಿ ಬಾನಿನಂತೆ
ಪ್ರಕೃತಿಯೊಳಗೊಂದಂತೆ – ರವಿತೇಜ//೯//

ನಡೆನುಡಿಗಳಾಗದಿರಲಿ ಕತ್ತಿ ಭರ್ಜಿಗಳು
ವೇಷಭೂಷಣಗಳಲ್ಲ ಗುರಾಣಿಯು
ತೋರುವ ತೊತ್ತಲ್ಲ ಸತ್ಯ – ರವಿತೇಜ //೧೦//

ಕರುಳಾಗೆ ಕೊರಳಾಗುವುದು ಕನ್ನಡದ ತೇಜ
ಮೊಳಗುವುದು ಸಿರಿನುಡಿಯು
ಮನದಲಿರೆ ಮಲ್ಲಿಗೆ – ರವಿತೇಜ//೧೧//

ರಾಜಕೀಯಕೆ ಅರಾಜಕತೆಯೆ ಬಂಡವಾಳ
ಅತಂತ್ರವೇ ತಂತ್ರ ಅಧಿಕಾರ ಮಂತ್ರ
ಜಾಗರವೇ ಜನತಂತ್ರ- ರವಿತೇಜ //೧೨//

***

ಕಾಫಿಗೆ ಹೋಗೋಣ್ವಾ?

– ಕಮಲಾಕ್ಷಿ ಸಿ.ಆರ್.

‘ಕಾಫಿ ಆಯ್ತಾ?’ ಎಂಬ ಮಾತು ಅದೆಷ್ಟೋ ಮಾತುಗಳಿಗೆ ಪೀಠಿಕೆ ಹಾಕುತ್ತದೆ. ಕಾಫಿಯ ನೆಪದಲ್ಲಿ ಸ್ನೇಹವನ್ನು ಸಂರಕ್ಷಿಸಿ, ಹೊಸ ಬಾಂಧವ್ಯವನ್ನು ಬೆಸೆಯಲು ಕಾರಣವಾಗಬಲ್ಲದು. ಒಂದು ಲೋಟ ಕಾಫಿಯಲ್ಲಿ ಬಹಳಷ್ಟು ಬದಲಾವಣೆ ತರಬಹುದು ಎನ್ನುವ 'A lot can happen over a cup of coffee' ಎಂಬ ಹೇಳಿಕೆಯಿದೆ. ಒಂದು ಕಪ್ ಕಾಫಿಯ ಹೆಸರಿನಲ್ಲಿ ವ್ಯವಹಾರದ ಮಾತುಗಳು ನಡೆದು ಯಶಸ್ಸು ಪಡೆದವರೂ ಇದ್ದರೆ. ಕಾಫಿ ಡೇಯಂತಹ ಕೆಫೆಯಲ್ಲಿ ಮೀಟಿಂಗ್ ನಡೆಸುವುದು ಪ್ರತಿಷ್ಠೆಯ ಸಂಗತಿ ಎಂದು ಪರಿಗಣಿಸಲಾಗಿದೆ. ಕಾಫಿ ಹೆಸರಿನಲ್ಲಿ ಜಗತ್ತಿನಾದ್ಯಂತ ವಿಖ್ಯಾತರಾದವರ ಬಗ್ಗೆಯೂ ಕೇಳಿದ್ದೇವೆ.

ಪ್ರತಿ ಅಕ್ಟೋಬರ್ 1ನೇ ದಿನವನ್ನು ವಿಶ್ವಕಾಫಿ ದಿನವೆಂದು ಆಚರಿಸಲಾಗುತ್ತದೆ. ನಾನು ಕಾಫಿ ಕಣಿವೆಯಲ್ಲಿ ಹುಟ್ಟಿದವಳು. ಆದರೆ ಕಾಫಿ ರುಚಿಸಿದ್ದು ಬಾಣಂತನದಲ್ಲಿ. ಅಲ್ಲಿಯವರೆಗೆ ಕಾಫಿಯ ಪರಿಮಳ ಕೂಡ ಸೇರುತ್ತಿರಲಿಲ್ಲ. ಮೂರು ವರ್ಷ ಚಿಕ್ಕವಳಿದ್ದಾಗ ಹಾಲು ಕುಡಿಯುವುದು ಬಿಟ್ಟವಳು ನನಗೆ ಇಪ್ಪತ್ತು ವರ್ಷ ಆಗುವವರೆಗೆ ಹಾಲಿನ ಯಾವುದೇ ಉತ್ಪನ್ನವನ್ನು ಸೇವಿಸಿರಲಿಲ್ಲ. ಪದವಿ ತರಗತಿಯಲ್ಲಿರುವಾಗ ಆತ್ಮೀಯ ಗೆಳತಿಯ ಬಲವಂತದಿಂದ ಹಾರ್ಲಿಕ್ಸ್ ಕುಡಿಯಲು ಪ್ರಾರಂಭಿಸಿದೆ. ಬಾಣಂತನದಲ್ಲಿ ಬಾಯಾರಿದಾಗ ನೀರು ಕೇಳಿದರೆ ಅಮ್ಮ ಹಾರ್ಲಿಕ್ಸ್ ಕುಡಿಯಲು ನೀಡುತ್ತಿದ್ದರು. ಆಗ ಹಾರ್ಲಿಕ್ಸ್ ಬೇಸರವಾಗಿ ಕಾಫಿ ಕುಡಿಯಲಾರಂಭಿಸಿದೆ. ಆಗಿನಿಂದ ಕನಿಷ್ಠ ದಿನಕ್ಕೆ ಎರಡು ಲೋಟ ಕಾಫಿ ಸೇವಿಸುತ್ತಿರುವೆ.

ಕಾಫಿ ಪೇಯವನ್ನು ಹಲವು ವಿಧಾನಗಳಲ್ಲಿ ತಯಾರಿಸಬಹುದು. ಹಾಲಿನೊಂದಿಗೆ ಸ್ವಲ್ಪ ನೀರು ಹಾಕಿ ಕುದಿ ಬರುವಾಗ ಸಕ್ಕರೆ ಹಾಕಿ ಕಾಫಿಪುಡಿ ಬೆರೆಸಿ ಶೋಧಿಸಬೇಕು. ಕಾಫಿ ಫಿಲ್ಟರ್ ಬಳಸಿ ಕಾಫಿಪುಡಿಗೆ ಕುದಿಯುವ ನೀರು ಹಾಕಿದಾಗ ಡಿಕಾಕ್ಷನ್ ಸಿಗುತ್ತದೆ. ಅದಕ್ಕೆ ಬಿಸಿಯಾದ ಹಾಲು ಬೆರೆಸಿ ಸಿಹಿಗೆ ತಕ್ಕಷ್ಟು ಸಕ್ಕರೆ ಬೆರೆಸಿದರೆ ಫಿಲ್ಟರ್ ಕಾಫಿ ಸಿದ್ಧ. ಇದರ ಸವಿ ಉತ್ಕೃಷ್ಟ. ಮೂರನೆಯದು instant coffee.. ಡಿಕಾಕ್ಷನ್ ಸ್ವಾದವಿರುವ, ತಕ್ಷಣ ಕರಗುವಂತಹ ಕಾಫಿ ಪೌಡರಿಗೆ ಬಿಸಿ ಹಾಲಿನೊಡನೆ ಸಕ್ಕರೆ ಬೆರೆಸಿದರೆ ಕಾಫಿ ಸಿದ್ದ. ಈಗಂತೂ ತತ್ ಕ್ಷಣದಲ್ಲಿ ಕಾಫಿ ತಯಾರಿಸಲು instant coffee powder ಹಲವು ಬ್ರಾಂಡ್ ಗಳಲ್ಲಿ ಸಿಗುತ್ತವೆ. ಬಿಸಿ ಹಾಲಿಗೆ ಅಗತ್ಯವಿದ್ದಷ್ಟು ಸಕ್ಕರೆ, ಕಾಫಿ ಬೆರಸಿದರೆ ತತ್ ಕ್ಷಣ ಕಾಫಿ ಸಿದ್ಧ. ಎಷ್ಟೇ ವಿಧದ ಕಾಫಿ ತಯಾರಿಸಬಹುದಾದರೂ ಫಿಲ್ಟರ್ ಕಾಫಿಗೇ ಅಗ್ರಸ್ಥಾನ.

ಈ ಕಾಫಿ 9ನೇ ಶತಮಾನದಲ್ಲಿ ಇಥಿಯೋಪಿಯಾದಿಂದ ಮೊದಲು ಬಳಕೆಗೆ ಬಂದಿತಂತೆ. ಆನಂತರ ಈಜಿಪ್ಟ್ ಮತ್ತು ಯುರೋಪ್ ಮುಖಾಂತರ ಪ್ರಪಂಚದಾದ್ಯಂತ ಹಬ್ಬಿತಂತೆ. ಮೊದಲಿಗೆ ಇಥಿಯೋಪಿಯದ "ಕಾಫ" ಎಂಬ ಪ್ರದೇಶದ ಹೆಸರಿನಲ್ಲಿ ಉತ್ಪನ್ನವಾದ ಪೇಯ ಎಂಬುದರ ದ್ಯೋತಕವಾಗಿ ಕಾಫಿ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.

ಹೆಚ್ಚು ಕಾಫಿ ಬೆಳೆಯುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಆರನೇ ಸ್ಥಾನದಲ್ಲಿದ್ದು ಜಾಗತಿಕ ಉತ್ಪಾದನೆಗೆ ಶೇ 4–5ರಷ್ಟು ಪಾಲು ನೀಡುತ್ತದೆ. ಭಾರತದ ಒಟ್ಟು ಉತ್ಪಾದನೆಯ ಶೇ 70–80ರಷ್ಟು ಕಾಫಿಯನ್ನು ಇಟಲಿ, ರಷ್ಯಾ ಮತ್ತು ಜರ್ಮನಿಗೆ ರಫ್ತು ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಕೊಡಗು, ಚಿಕ್ಕಮಗಳೂರು, ಹಾಸನ ಅತಿ ಹೆಚ್ಚು ಕಾಫಿ ಬೆಳೆಯುವ ಜಿಲ್ಲೆಗಳಾಗಿವೆ.

ಕಾಫಿಯ ಮಿತ ಸೇವನೆಯಿಂದ ಆರೋಗ್ಯಕ್ಕೆ ಹಲವು ಉಪಯೋಗಗಳಿವೆ.

- ಕಾಫಿಯಲ್ಲಿರುವ ಕೆಫೀನ್ ಅಂಶವು ಕೇಂದ್ರ ನರಮಂಡಲವನ್ನು ಚುರುಕುಗೊಳಿಸುತ್ತದೆ. ಮೆದುಳಿನಲ್ಲಿ ಚಯಾಪಚಯ ಶಕ್ತಿ ಹೆಚ್ಚಾಗುತ್ತದೆ. ಮನಸ್ಥಿತಿ ಹಾಗೂ ಮೆದುಳಿನ ಕ್ರಿಯೆಯನ್ನು ಚುರುಕುಗೊಳಿಸುತ್ತದೆ.

- ಸೆರೊಟೋನಿನ್, ಡೊಪಮೈನ್ ಮತ್ತು ನೊರಾಡ್ರಿನಾಲಿನ್ ಎನ್ನುವ ನರಪ್ರೇಕ್ಷಕಗಳನ್ನು ಉತ್ಪತ್ತಿ ಮಾಡಲು ನೆರವಾಗುವುದು. ಇದರಿಂದ ಖಿನ್ನತೆ ನಿವಾರಿಸಲು ಸಹಕಾರಿ.
- ದಿನಕ್ಕೆ 3 ಕಪ್‌ಗಳಿಗಿಂತ ಹೆಚ್ಚು ಕಾಫಿ ಕುಡಿಯುವುದರಿಂದ ಟೈಪ್ 2 ಡಯಾಬಿಟಿಸ್ ಬರುವ ಸಂಭವ ಶೇ. 42ರಷ್ಟು ಕಡಿಮೆಯಾಗುತ್ತದಂತೆ. ಕಾಫಿಯಲ್ಲಿ ಕೆಲವೊಂದು ಪ್ರಮುಖ ಖನಿಜಾಂಶಗಳಾಗಿರುವಂತಹ ಮೆಗ್ನಿಶಿಯಂ ಮತ್ತು ಪೊಟಾಶಿಯಂ ಇವೆ. ಇವು ದೇಹವು ಇನ್ಸುಲಿನ್ ಉಪಯೋಗಿಸಲು ನೆರವಾಗುವುದು. ರಕ್ತದಲ್ಲಿ ಸಕ್ಕರೆ ಮಟ್ಟ ನಿಯಂತ್ರಿಸುವುದರಿಂದ ಸಿಹಿ ಹಾಗೂ ಇತರೆ ತಿಂಡಿಗೆ ಬಯಕೆ ಕಡಿಮೆ ಮಾಡುವುದು. ಕಾಫಿಯಲ್ಲಿ ಇರುವಂತಹ ಕೆಫಿನ್ ಕೊಬ್ಬಿನ ಅಂಗಾಂಶಗಳನ್ನು ವಿಘಟಿಸುವುದು ಮತ್ತು ತೂಕ ಕಳೆದುಕೊಳ್ಳಲು ಇದು ನೆರವಾಗುವುದು.
- ದಿನಕ್ಕೆ ಒಂದು ಕಪ್ ಕಾಫಿ ಕುಡಿದರೆ ಲಿವರ್ ಸಿರೋಸಿಸ್ ಕಾಯಿಲೆಯನ್ನು ಶೇ. 22ರಷ್ಟು ಕಡಿಮೆ ಮಾಡಬಹುದು. ಎರಡು ಹಾಗೂ ಮೂರು ಕಪ್ ಕಾಫಿ ಕುಡಿದರೆ ತಲಾ ಶೇ. 43ರಷ್ಟು ಹಾಗೂ ಶೇ. 57ರಷ್ಟು ಕಾಯಿಲೆ ಕಡಿಮೆ ಮಾಡಬಹುದು ಎಂದು ಸೌತ್‌ಆ್ಯಂಪ್ಟನ್ ವಿವಿಯ ಅಧ್ಯಯನದಲ್ಲಿ ತಿಳಿದುಬಂದಿದೆ.
- ಕಾಫಿಯಲ್ಲಿ ಆಂಟಿಆಕ್ಸಿಡೆಂಟ್ ಅಂಶವು ಸಮೃದ್ಧವಾಗಿದ್ದು, ದಿನದಲ್ಲಿ 2–3 ಲೋಟ ಕಾಫಿ ಸೇವನೆ ಕ್ಯಾನ್ಸರ್ ತಡೆಯಲು ನೆರವಾಗುವುದು.

ಕಾಫಿಯನ್ನು ಬಿಸಿಯಾಗಿಯೂ ತಂಪಾಗಿಯೂ ಸೇವಿಸಬಹುದು. ಚಾಕಲೇಟ್ ರೂಪದಲ್ಲಿ ಕಾಫಿಬೈಟ್ ಪ್ರಸಿದ್ಧವಾಗಿದೆ. ಬಾಲರಿಂದ ವೃದ್ಧರವರೆಗೆ ಕಾಫಿ ಜನಪ್ರಿಯ ಪೇಯ. ಅತಿಯಾದರೆ ಅಮೃತವೂ ವಿಷ ಎಂಬಂತೆ ಅತಿಯಾದ ಕಾಫಿ ಸೇವನೆಯೂ ಆರೋಗ್ಯಕ್ಕೆ ಒಳ್ಳೆಯದಲ್ಲ.

ಬೆಳಗಿನಿಂದ ಸಂಜೆಯವರೆಗೂ ಮನಸ್ಸಿನ ಒತ್ತಡ ನಿವಾರಣೆಗೆ ಕಾಫಿ ಕುಡಿದರೂ ರಾತ್ರಿಯ ಸಮಯದಲ್ಲಿ ಕಾಫಿ ಕುಡಿಯುವ ಅಭ್ಯಾಸ ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತದೆ. ಅಂದರೆ ಕಾಫಿಯಲ್ಲಿರುವ ಕೆಫಿನ್ ಅಂಶ ರಾತ್ರಿಯ ಸಮಯದಲ್ಲಿ ನಿಮಗೆ ಊಟವಾದ ತಕ್ಷಣ ನಿದ್ರೆ ಬರುವುದನ್ನೇ ತಪ್ಪಿಸುತ್ತದೆ. ಹೆಚ್ಚು ಪ್ರಮಾಣದ ಕಾಫಿ ಸೇವನೆಯು ಆಮ್ಲೀಯತೆಯನ್ನು ಹೆಚ್ಚಿಸಿ ಅಲ್ಸರಿಗೂ ಕಾರಣವಾಗಬಹುದು. ಅತಿಯಾದ ಸೇವನೆ ಅಧಿಕ ರಕ್ತದೊತ್ತಡ ಹಾಗೂ ಮಲಬದ್ಧತೆ ಸಮಸ್ಯೆಗಳನ್ನು ತರಬಲ್ಲದು.

ಕಛೇರಿಗಳಲ್ಲಿ ಯಾವಾಗೆಂದರೆ ಆವಾಗ ಕಾಫಿ ಹೆಸರಿನಲ್ಲಿ ಕೆಲಸ ಮಾಡುವ ಸಮಯದಲ್ಲಿ ಹೊರಗೆ ಕಾಲ ಕಳೆಯಲು ನೆಪ ಹೂಡುವ ಅಭ್ಯಾಸ ಅಂದಿನಿಂದ ಇಂದಿನವರೆಗೂ ಇದ್ದೇ ಇದೆ. ಬಹುತೇಕ ಕಂಪನಿಗಳಲ್ಲಿ, ಕಛೇರಿಗಳಲ್ಲಿ ಕಾಫಿಗೆಂದೇ ಸಮಯ ನಿಗದಿಗೊಳಿಸಿ 10–15 ನಿಮಿಷ ಮೀಸಲಿಡುವಷ್ಟು ಕಾಫಿ ಪ್ರಭಾವಶಾಲಿ.

ದಕ್ಷಿಣ ಭಾರತದಲ್ಲಿ ಹೆಚ್ಚು ಜನಪ್ರಿಯ ಪೇಯ ಕಾಫಿಯೇ. ಎಂಟಿಆರ್ ಹೋಟೆಲಿನಲ್ಲಿ ಕೊಡುವ ಬೆಳ್ಳಿ ಲೋಟದಲ್ಲಿ ಕಾಫಿ ಕುಡಿವುದೇ ಹಿಗ್ಗು. ಚುಮುಚುಮು ಚಳಿ, ಮಳೆಯಲ್ಲಿ ನೆನದಾಗ ತಲೆ ಒರೆಸಿ, ಕೂದಲು ಹರಡಿಕೊಂಡು ಬಿಸಿಯಾದ ಕಾಫಿ ಹೀರುವ ಅನುಭವವೇ ವಿಶಿಷ್ಟ. ಇತಿಮಿತಿಯಲ್ಲಿ ಕಾಫಿಯ ಸವಿ ಹೀರುವುದರಲ್ಲಿ ಅಪ್ಯಾಯಮಾನತೆ ಇದೆ. ಹಾಗಾಗಿ ಕಾಫಿಗೆ ಹೋಗೋಣ್ವಾ ಎಂದು ಕೇಳುವುದರಲ್ಲಿ ತಪ್ಪಿಲ್ಲ ಅಲ್ಲವೆ?

***

ರಾಮ ರಮಣಿ

– ಸಿಂಧು ಹರಿಥಸ್

ನವಜಾತೆಯಾಗಿ ಜನಕನಿಗೆ ಭೂಮಡಿಲಲ್ಲಿ ಸಿಕ್ಕಿದೆ,
ಮಿಥಿಲಾ ನಗರಿಯ ರಾಜಕುಮಾರಿಯಾಗಿ ಬೆಳೆದೆ.
ಸ್ವೇಚ್ಛೆಯಿಂದ ಸ್ವಯಂವರದಿ ನಿನ್ನ ಕೈ ಹಿಡಿದೆ,
ಯುವರಾಜನ ಮಡದಿಯಾಗಿ ಅಯೋಧ್ಯೆ ತಲುಪಿದೆ.

ತುಂಬಿದ ಮನೆಯದುವೆ, ನನಗೆ ಹೊಸ ಜಾಗ,
ತಂಗಿಯರೇ ವಾರಗಿತ್ತಿಯರಾದ್ದರಿಂದ ಹೊಂದಿಕೆ ಸರಾಗ.
ನಾಲ್ವರಿಗೂ ದೊರಕಿತು ಮೂರು ಅತ್ತೆಯರ ಯೋಗ,
ಭೇದ ಮಾಡಲಿಲ್ಲ ಯಾರ ಅತ್ತೆ ಯಾರ ಸೊಸೆಗೂ ಆಗ.

ನಿನ್ನ ಪಟ್ಟಾಭಿಷೇಕಕ್ಕೆ ಸಂಭ್ರಮಿಸಿತು ರಾಜ್ಯವೆಲ್ಲಾ,
ಆದರೆ ಅತ್ತೆ ಕೈಕೇಯಿಯ ಮುಖ ಏಕೋ ಸಪ್ಪಗಿತ್ತಲ್ಲ.
ಹಿಂದೆ ಮಾವನವರು ನೀಡಿದ ವಚನ ಈಗ ನೆನಪಾಯಿತಲ್ಲ,
ಪಟ್ಟ ಭಾರತನಿಗೇ ಇರಲಿ. ನಿನಗೆ ವನವಾಸ ಸಲ್ಲ!

ಪಿತೃವಾಕ್ಯ ಪರಿಪಾಲಿಸಲು ನೀನು ನಡೆದಾಗ,
ನಿನ್ನ ಜೊತೆ ಹೆಜ್ಜೆ ಇಟ್ಟ ಸಂಗಾತಿ ನಾನಾಗ.
ಮುನ್ನ ನಾ ಕಂಡಿರಲಿಲ್ಲ ಕಾಡು ಮೇಡುಗಳ ಮಾರ್ಗ,
ನಿನ್ನ ಕೂಡಿ ನಡೆದಿದ್ದು, ನನಗೆ ಅದೇ ಸ್ವರ್ಗ.

ಗಂಡನ ಪ್ರೀತಿ, ಮೈದುನನ ಸ್ನೇಹ, ಇದೇ ನನ್ನ ಲೋಕ,
ಹೊಸ ಜಾಗಗಳಲಿ, ಕಟ್ಟಿದ ಗುಡಿಸಲಲಿ, ತಿಂದದ್ದೇ ರಸಪಾಕ.
ನನ್ನನ್ನು ಕರೆತಂದದ್ದರ ಬಗ್ಗೆ ಪಡಬೇಡ ಮರುಕ,
ನಿನ್ನ ಸನಿಯದಲ್ಲಿ ಸಾಗುವುದೇ ನನಗೆ ನಾಕ.

ಅಯ್ಯೋ! ಬಿದ್ದಿತೆ ರಾಕ್ಷಸಿಯ ಕಣ್ಣು ನಿನ್ನ ಕಡೆಗೆ!
ಏಕೆ ದೂಡಿದೆ ಅವಳನ್ನು ಲಕ್ಷ್ಮಣನ ಪಾಲಿಗೆ?
ಅವನ ಕೋಪದ ತೀವ್ರತೆ ತಿಳಿಯದೆ ನಿನಗೆ?
ಛೆ! ಮೂಗು ಕಿತ್ತನಲ್ಲ ಅವನು ಶೂರ್ಪನಖಿಗೆ!

ತಿಳಿದಿತ್ತೇ ನಿನಗೆ? ಅವಳು ರಾವಣನ ಸೋದರಿ!
ದಾಳಿ ಮಾಡುವನೇನೋ ಮಾಡಿ ಯುದ್ಧ ತಯಾರಿ.
ಆಹಾ! ಅಗೋ ಚಿನ್ನದ ಜಿಂಕೆ ಬರುತಿದೆ ಜಿಗಿದು, ಹಾರಿ.
ನನಗದು ಬೇಕು. ಹಿಡಿದುಕೊಡು, ಓ ಕೋದಂಡಧಾರಿ!

... 2..

– 2 –

ಅಪಾಯದಲ್ಲಿ ನೀ ಚೀರಿದರೂ ನಿನ್ನ ತಮ್ಮ ಓಡಲಿಲ್ಲ.
ರೇಖೆಯನ್ನೆಳೆದು ಹೋದ, ಲಕ್ಷ್ಮಣ ಕಾಪಾಡುವುದ ಬಲ್ಲ.
ಸಾಧು ಭಿಕ್ಷೆಗೆ ಬಂದ, ಹಿಡಿದು ಜೋಳಿಗೆ, ಜಪಮಲಾ,
ದಾನಕ್ಕಾಗಿ ಗೆರೆ ದಾಟಿದೆ. ಇದು ರಾವಣನ ಜಾಲ!

ಕಿರುಚಿದೆ. ಹೋರಾಡಿದೆ. ಬಿಡಿಸಲಾಗಲಿಲ್ಲ ಅವನ ಬಂಧನ.
ಎಳೆದೋಯ್ದು ಏರಿದ ಅವನ ಪುಷ್ಪಕ ವಿಮಾನ.
ಒಡವೆ ಬಿಚ್ಚಿ ಎಸೆದೆ. ತಿಳಿಯದಿನ್ನಾವ ವಿಧಾನ,
ಗುರುತಿಸಿ ಅನುಸರಿಸು. ಸೇರಲದೊಂದೇ ಸಾಧನ.

ಮರುಗುತ್ತಿರುವೆ ನಿನಗೇಕೆ ಹೇಳಿದೆ ತರಲು ಚಿನ್ನದ ಜಿಂಕೆ,
ನನ್ನ ಕಾವಲಿಗೆ ನಿಂತಿದ್ದ ಲಕ್ಷ್ಮಣನ ಮೇಲೂ ಪಟ್ಟೆ ಶಂಕೆ.
ನೀನಿಲ್ಲದ ಹೊತ್ತಲ್ಲಿ ಬಂಧಿಯಾಗಿ ತಲುಪಿದೆ ಲಂಕೆ,
ನನ್ನ ಆಸೆಯೇ ಕಾರಣವಾಯ್ತು, ನನ್ನ ಸುಖದ ಇಂಕೆ.

ಸುವರ್ಣನಗರಿಯಂತೆ! ಎಲ್ಲೆಲ್ಲೂ ಕಾಂಚನ!
ನನ್ನನ್ನು ಇರಿಸಿರುವ ಜಾಗ ಅಶೋಕಮರದ ಉದ್ಯಾನವನ.
ಇಲ್ಲಿ ದೈತ್ಯರೆಲ್ಲರೂ ಪಾಲಿಸುವರು ರಾವಣನ ವಚನ,
ಆದರೆ ತ್ರಿಜಾತಾ ಒಬ್ಬಳೇ ಮಾಡುತಿಹಳು ನನ್ನ ಸಾಂತ್ವನ.

ಕಾಡುತಿಹುದೆನಗೆ ದಿನವೆಲ್ಲ ನಿನದೇ ನೆನಪು.
ರಾವಣನ ಬಂಧಿಯಾಗಿದ್ದರೂ ನಾನು ನಿನಗಷ್ಟೇ ಮುಡಿಪು.
ಎಲ್ಲಿಂದಲೋ ಬಿದ್ದ ಉಂಗುರದಿ ಕಂಡೆ ನಿನ್ನ ಛಾಪು,
ಸಂತಸದಿ ಇಮ್ಮಡಿಯಾಯಿತು ಎನ್ನೆದೆಯ ಹುರುಪು.

ತಲೆಯೆತ್ತಿ ನೋಡಿದರೆ ಕಂಡನೊಬ್ಬ ವಾನರ.
ರಾಮನಾಮ ಜಪಿಸುತ್ತ ಮರದಲಿದ್ದ ಪುಟ್ಟ ಆಕಾರ.
ನಿನ್ನ ಗುರುತು ತಂದಿದ್ದ ಇವನಿರಬೇಕು ನಿನ್ನ ಮಿತ್ರ,
ನಮಸ್ಕರಿಸಿ ಪರಿಚಯಿಸಿಕೊಂಡ, ಅವನಂತೆ ವಾಯುಪುತ್ರ.

ಅವನೆಂದ, ಸೊರಗಿರುವೆ ನೀ ನನ್ನ ವಿರಹದಲ್ಲಿ,
ನನ್ನ ನಿನ್ನ ಭೇಟಿ ಇನ್ನು ಸಾಧ್ಯ ಶೀಘ್ರದಲ್ಲಿ.
ಅವನನ್ನು ಬಂಧಿಸಲು ಸೈನ್ಯ ಸೇರಿತು ಉದ್ಯಾನದಲ್ಲಿ,
ಅವರೆಲ್ಲರ ಕೈತಪ್ಪಿಸಿ ಹಾರತೊಡಗಿದ ಅಲ್ಲಿಇಲ್ಲಿ.

... 3..

– 3 –

ರಾವಣನ ಆಸ್ಥಾನ ತಲುಪಿದನವನು ಠೀವಿಯಲ್ಲಿ,
ದಶಮುಖನ ಆದೇಶವು ಸುಡಲವನನ್ನು ಬೆಂಕಿಯಲ್ಲಿ.
ಬಾಲಕ್ಕೆ ಹಚ್ಚಿದರೂ ಬೆಂಕಿ, ನಕ್ಕನವನು ಕುಟಿಲದಿಂದ,
ಛಂಗನೆ ಹಾರಿ ಬೆಂಕಿಯಿಟ್ಟ ಪೂರ್ತಿ ಲಂಕೆಗೆ ಬಾಲದಿಂದ.

ಸಧ್ಯದಲ್ಲೇ ತಲುಪಿದೆ ನೀ ಲಂಕಾ ತೀರಕೆ.
ಚಿಮ್ಮುತಿದೆ ಮನದಲ್ಲಿ, ನಿನ್ನ ಸೇರುವ ಬಯಕೆ.
ಏಕೋ ಮನದಲ್ಲಿ ನಿಲ್ಲದ ಚಡಪಡಿಕೆ.
ಹೋ! ನಿರಾಕರಿಸಿದನೆ ರಾವಣ ನನ್ನ ಮರಳಿಸುವ ಕೋರಿಕೆ!

ಇನ್ನು ನಿನ್ನ – ರಾವಣನ ಯುದ್ಧ ನಿಶ್ಚಯ,
ರಾವಣನ ಬಳಿ ಮೇಘನಾದ, ಕುಂಭಕರ್ಣ, ಅತಿಕಾಯ,
ನಿನ್ನ ಕಡೆಯ ವಾನರಸೇನೆಯ ಬಲವೂ ಅತಿಶಯ.
ಮಾಡಿಸಿದರೆಲ್ಲಾ ವೀರರೂ ಅವರವರ ಶಕ್ತಿ ಪರಿಚಯ.

ನಿನ್ನ ಪಕ್ಷ ಸೇರಿದಂನಂತೆ ರಾವಣಾನುಜ ವೀಭೀಷಣ,
ಕೇಲ್ಪಟ್ಟೆ, ಸಂಜೀವಿನಿ ದೆಸೆಯಿಂದ ಸಾವು ಗೆದ್ದನಂತೆ ಲಕ್ಷ್ಮಣ,
ನಂತರ ಕಂಡಿತು ರಾವಣಸೇನೆಯ ಸಾಲು ಮರಣ,
ನಿನ್ನ ಹೃದಯ ಸೇರಿತಂತೆ ಅವರೆಲ್ಲರ ಆತ್ಮಕಿರಣ!

ಸೌಭಾಗ್ಯ ಕಳೆದುಕೊಂಡಳು, ಪಾಪ ಸಾಧ್ವಿ, ಮಂಡೋದರಿ,
ಕಣ್ಣಿಗೇ ಕಾಣದಂತೆ ಪರಾರಿಯಾದಳು ರಾವಣ ಸಹೋದರಿ,
ಮುಂದೆ ರಾಜನಾದನು ವಿಭೀಷಣ ಪಟ್ಟಕ್ಕೇರಿ,
ಬೋಧಿಸು ಅವನಿಗೆ ರಾಜ್ಯವಾಳುವ ಉತ್ತಮ ದಾರಿ.

ನನ್ನದೊಂದು ಗುಟ್ಟಿದೆ, ಕೇಳು ನೀ ಇನಿಯ!
ಅಗ್ನಿದೇವನ ಆಶ್ರಯದಲ್ಲಿ ಕಳೆದೆ ನಾನಿಷ್ಟು ಸಮಯ.
ನನ್ನ ಬದಲು ವೇದವತಿ ಸೇರಿದ್ದಳು ರಾವಣನ ಸೆರೆಯ,
ಅವನಿಗೆ ಬುದ್ಧಿ ಕಲಿಸಲು ಇದು ಅವಳದ್ದೇ ಉಪಾಯ.

... 4..

– 4 –

ನನ್ನ ಮಾತು ಸತ್ಯ. ನಡಿಯಲಿ ಅಗ್ನಿಪರೀಕ್ಷೆ!
ಇನ್ನು ನಮ್ಮ ಸೌಭಾಗ್ಯದಲ್ಲಿ "ರಾಜ ರಾಣಿ" ದೀಕ್ಷೆ.
ಅಗಸನ ಕಟುಮಾತಿಗೆ ದೊರಕಿತೆನಗೆ ಶಿಕ್ಷೆ,
ತುಂಬು ಗರ್ಭಿಣಿ ನಾನು! ಆದರೂ ಇಲ್ಲ ಪತಿರಕ್ಷೆ.

ವಾಲ್ಮೀಕಿ ಆಶ್ರಮದಿ ಹುಟ್ಟಿದರು ಲವ ಕುಶರು.
ಎಂತಹ ನಿಷ್ಠೆ! ಗುರುಗಳ ಪ್ರಿಯ ಶಿಷ್ಯರು.
ನಿನ್ನನೇ ಹೋಲುವರು, ಇಬ್ಬರೂ ಅತಿಬಲರು,
ತಂದೆ ನೀನೆಂದು ಅರಿಯದ ಅವರಿನ್ನೂ ಮುಗ್ಧರು.

ಹಿಡಿದೇಬಿಟ್ಟರು ನಿನ್ನ ಅಶ್ವಮೇಧದ ಕುದುರೆ,
ಅಶ್ವ ಬಿಟ್ಟುಬಿಡಲು ಕಾರಣ ನಾ ಹೇಳಲಾರೆ.
ಒಂದು ವೇಳೆ ಅವರನ್ನು ನಿನ್ನ ಸೈನ್ಯ ಎದುರಾದರೆ?
ಮುಂದೇನಾಗುವುದೋ! ಪರಮಾತ್ಮನೇ ಆಸರೆ!

ನಿನ್ನ ಸೋದರರನ್ನೇ ಸೋಲಿಸಿದರು ನಿನ್ನ ಪುತ್ರರು!
ಅನಾಹುತಕೆ ಮುನ್ನವೇ ಶಸ್ತ್ರ ತ್ಯಜಿಸಲು ಗುರುಗಳು ಆದೇಶವಿತ್ತರು.
ನಂತರ ನಿನ್ನ ಕಥೆ ಹಾಡಲು ಅಯೋಧ್ಯೆಗೆ ಕರೆದೊಯ್ದರು,
ನನ್ನ ನಿನ್ನ ಭೇಟಿಗೆ ಗುರುಗಳೇ ದಾರಿ ಮಾಡಿದರು.

ಮುಗಿಯಿತು ನಿನ್ನನ್ನು ಸಂಧಿಸುವ ನಿರೀಕ್ಷೆ.
ಇದೇನು! ಮತ್ತೆ ನಡೆಯಬೇಕೆ ನನ್ನ ಸತ್ವಪರೀಕ್ಷೆ!
ಉಳಿದಿಲ್ಲ ನನ್ನಲಿನ್ನು ನಿನ್ನ ಪ್ರೀತಿಯ ಅಪೇಕ್ಷೆ.
ನನಗಿನ್ನು ಸಾಕು ಭೂಗರ್ಭದ ರಕ್ಷೆ!

***

ಜಾರವಾಗಳು

– ಗೌರಿ ಭಟ್ಟ



ನಾನು ಈಗ ಹೇಳಲು ಹೊರಟಿರುವುದು ೨೦೧೦ ಅಂದರೆ ಹದಿನಾಲ್ಕು ವರುಷಗಳ ಹಿಂದೆ ಅಂಡಮಾನಿನ ಬಾರಾಟಂಗ್ ನಲ್ಲಿ ಜಾರವಾ ಮೂಲನಿವಾಸಿಗಳನ್ನು ನೋಡಿದ ಅನುಭವ. ಅದನ್ನು ನೆನಪಿಸಿಕೊಂಡರೆ ಈಗಲೂ ಮೈ ಜುಂ ಅನ್ನಿಸುತ್ತದೆ. ಸೆರೆದಿಟ್ಟುಕೊಳ್ಳಲು ಆಗ ನನ್ನ ಹತ್ತಿರ ಕ್ಯಾಮೆರಾ ಆಗಲೀ ಮೊಬೈಲ್ ಫೋನ್ ಆಗಲೀ ಇರಲಿಲ್ಲ. ಇದ್ದರೂ ಹತ್ತಿರದಿಂದ ಅವರ ಫೋಟೋಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ನನ್ನ ಯಜಮಾನರಿಗೆ ಅಂಡಮಾನಿಗೆ ವರ್ಗವಾಗಿತ್ತು. ಅದು ತುಂಬಾ ಸುಂದರವಾದ ನಡುಗಡ್ಡೆ. ಅದನ್ನು ಭಾರತದ ಒಂದು ಭಾಗವೆಂದು ಊಹಿಸಿಕೊಳ್ಳಲು ಕಷ್ಟ. ಯಜಮಾನರ ಕ್ವಾರ್ಟರ್ಸ್ ಪೋರ್ಟ್‌ಬ್ಲೇರಿನ ಮರಿನಾ ಪಾರ್ಕಿಗೆ ಹತ್ತಿರದಲ್ಲೇ ಇತ್ತು ಹಾಗಾಗಿ ನಾವು ಪದೇಪದೇ ಅಲ್ಲಿಗೆ ಹೋಗುತ್ತಿದ್ದೆವು. ಅಲ್ಲಿಯ ಸಮುದ್ರವೂ ತುಂಬಾ ಸುಂದರ ಹಾಗೂ ತೀರವೂ ಬಹಳ ಸ್ವಚ್ಛ, ಯಾವುದೇ ಕಾರಣಕ್ಕೂ ಗಲೀಜು ಮಾಡಲು ಬಿಡುತ್ತಿರಲಿಲ್ಲ. ನಮಗೆ ಅಲ್ಲಿಯ ಪಾರ್ಕಿನ ಉಸ್ತುವಾರಿ ನೋಡಿಕೊಳ್ಳುವವರೊಬ್ಬರ ಪರಿಚಯವಾಯಿತು. ನಾವು ಕರ್ನಾಟಕದಿಂದ ಬಂದವರೆಂದು ಅವರಿಗೆ ಹೇಳಿದೆವು. ಹಾಗೇ ಅಲ್ಲಿನ ಕೆಲವು ಹತ್ತಿರದ ನೋಡುವ ಜಾಗಗಳು, ಅಲ್ಲಿಯ ಮೂಲನಿವಾಸಿಗಳ ಬಗ್ಗೆ ಹೇಳಿದರು. ವಿಶೇಷವಾಗಿ ಜಾಡ್ವಾಸ್ ಅಥವಾ ಜಾರ್ವಾಸ್ ಗಳ ವಿಶಿಷ್ಟವಾದ ನೋಟ, ನಡೆ, ನುಡಿ, ಆಕಾರ, ಆಚಾರಗಳ ಬಗ್ಗೆ ತುಂಬಾ ಚನ್ನಾಗಿ ವಿವರಗಳನ್ನು ಕೊಟ್ಟರು.

ಜಾರವಾ ಜನರನ್ನು ಒಮ್ಮೆ ನೋಡಲೇಬೇಕೆಂಬ ನನ್ನ ಕುತೂಹಲ ಹೆಚ್ಚಾಯಿತು. ಪೋರ್ಟ್ ಬ್ಲೇರಿನಿಂದ ಬಾರಾಟಂಗಿಗೆ ಹೋಗುವ ದಾರಿಯ ರಕ್ಷಿತ ಕಾಡಿನಲ್ಲಿ ಆ ಮೂಲನಿವಾಸಿಗಳು ಇರುವುದು. ಜಾರವಾಗಳು ಬಾರಾಟಂಗಿಗೆ ಹೋಗುವ ದಾರಿಯಲ್ಲಿ ನೋಡಲು ಸಿಗುತ್ತಾರೆಂದು ಪಾರ್ಕಿನ ಸಿಬ್ಬಂದಿ ಹೇಳಿದರು. ಆದ್ದರಿಂದ ಬಾರಾಟಂಗಿಗೆ ಹೋಗಲು ಕಾತುರದಿಂದ ಕಾಯುತ್ತಾ ಇದ್ದೆ.

೨೦೦೪ರ ಸುನಾಮಿಯ ನಂತರ ಅಲ್ಲಿ ಪ್ರವಾಸಿಗಳು ಜಾಸ್ತಿ ಸಂಖ್ಯೆಯಲ್ಲಿ ಬರುತ್ತಾರಂತೆ. ಅಲ್ಲಿಯವರೆಗೆ ಅಂಡಮಾನಿಗೆ ಬ್ಯಾಂಕ್ ಉದ್ಯೋಗಿಗಳು ಹಾಗೂ ಸರ್ಕಾರಿ ನೌಕರರು ಮಾತ್ರ ಕರಿನೀರಿನ ಶಿಕ್ಷೆಯಂತೇ ಅನಿವಾರ್ಯವಾಗಿ ಹೋಗುತ್ತಿದ್ದರು.


ನಾನೂ, ನನ್ನ ಯಜಮಾನರೂ ಉತ್ತರ ಅಂಡಮಾನಿಗೆ ಪ್ರವಾಸ ಹೋಗಲು ಸಜ್ಜಾದೆವು. ಆಗ ಬಾರಾಟಂಗ್ ನೋಡಬಹುದು. ಆನಂದ ಅಂತ ನಮ್ಮ ಟ್ಯಾಕ್ಸಿ ಡ್ರೈವರ್. ನಮ್ಮವರಿಗೆ ಪರಿಚಯ. ಪಾಸ್ ತೆಗೆದುಕೊಂಡು ಬಂದರು. ನಮ್ಮೊಟ್ಟಿಗೆ ಬೇರೆ ಒಂದು ಕುಟುಂಬದವರೂ ಇದ್ದರು. ನಾವು ಬಿಸ್ಕಿಟ್ಸ್, ಚಿಪ್ಸ್, ಹಣ್ಣು ಹಾಗೂ ನೀರುಬಾಟಲಿಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಿದ್ದೆವು. ಬಾರಾಟಂಗಿಗೆ ಹೋಗುವಾಗ ರಕ್ಷಿತಾರಣ್ಯ ಪ್ರದೇಶವನ್ನು ಪೊಲೀಸ್ ಎಸ್ಕಾರ್ಟನಲ್ಲಿ ದಾಟಬೇಕು. ನಮ್ಮ ಗಾಡಿಯ ಹಿಂದೆ ಮುಂದೆ ಪೊಲೀಸ್ ಬಸ್ಸು ಇರುತ್ತದೆ. ಎಲ್ಲಾ ಪ್ರವಾಸಿ ಗಾಡಿಗಳೂ ಒಟ್ಟಿಗೇ ಹೋಗಬೇಕು. ನಾನು ಅಂದುಕೊಂಡಂತೇ ಮೂಲನಿವಾಸಿಗಳಿಂದ ನಮ್ಮ ರಕ್ಷಣೆಗೆ ಈ ತರಹದ ವ್ಯವಸ್ಥೆ ಇರುವುದು ಅಲ್ಲ. ನಾಗರಿಕರಾದ ನಮ್ಮಿಂದ



ಅವರ ರಕ್ಷಣೆಗೆ ಸರ್ಕಾರದ ವ್ಯವಸ್ಥೆ. ಈ ಅವಸ್ಥೆಗೆ ನಿಜಕ್ಕೂ ನಾಚಿಕೆ ಆಯಿತು. ಅಲ್ಲಿ ಜಾರವಾ ಮೂಲನಿವಾಸಿಗಳು ಕಾಣಸಿಗುತ್ತಾರೆ. ಅವರನ್ನು ನೋಡಿದ ಪ್ರವಾಸಿಗರು ಹುಚ್ಚರಂತೆ ಆಡುತ್ತಾರೆ. ಚಿಪ್ಸ್, ಬಿಸ್ಕಿಟ್ ಅವರಿಗೆ ತಿನ್ನಲು ಕೊಡುತ್ತಾರೆ. ಫೋಟೋ ಕ್ಲಿಕ್ಕಿಸುತ್ತಾರೆ. ಉಪ್ಪಿಗಿಂತ ರುಚಿಯಿಲ್ಲ. ಉಪ್ಪು, ಖಾರ, ಸಕ್ಕರೆ ಎಲ್ಲಾ ಅವರಿಗೆ ಒಗ್ಗಿ ಬರೋದಿಲ್ಲವಂತೆ. ಪ್ರವಾಸಿಗಳು ಕೊಡುವ ತಿಂಡಿಗಳಿಗೆ ಇತ್ತೀಚೆಗೆ ಅವರು ಆ ಸಮಯದಲ್ಲಿ ಕಾಯ್ತಾ ಇರುತ್ತಾರಂತೆ. ತಿಂದರೆ ಅವರಿಗೆ ಆರೋಗ್ಯ ತಪ್ಪುತ್ತದೆ. ಇದೆಲ್ಲಾ ತಿಳಿಸುತ್ತಿದ್ದರೂ ಕೆಲವರು ವಿದ್ಯಾವಂತ ನಾಗರಿಕರು ವಿಪರೀತ ಆಡುತ್ತಾರೆ. ಚೇಷ್ಟೆ ಮಾಡಿ ಮಜಾ ತೆಗೆದುಕೊಳ್ಳುತ್ತಾರೆ. ನಮ್ಮ ಟ್ಯಾಕ್ಸಿಗೂ ಒಬ್ಬ ಜಾರವಾ ಕೈ ಅಡ್ಡ ಹಾಕಿದ. ನಮ್ಮ ಡ್ರೈವರ್ ಕಾರಿನ ಗ್ಲಾಸ್ ತೆಗೆದು ಅವನ ಕೈಗೆ ಏನೋ ಕೊಟ್ಟು ಕೂಡಲೇ ಗ್ಲಾಸ್ ಹಾಕಿದರು. ಆದಿವಾಸಿಗೆ ಕಲ್ಕತ್ತಾ ಪಾನ್ ಬೀಡಾ ತುಂಬಾ ಇಷ್ಟವಂತೆ. ಅದಕ್ಕೇ ಕೈ ಅಡ್ಡ ಮಾಡಿದ್ದಂತೆ.

ಆ ಜಾರವಾ ಹಿಡಿದ ನಮ್ಮ ಡ್ರೈವರ್ ಕೈ ರಕ್ತ ಹೆಪ್ಪುಗಟ್ಟಿ ಕಪ್ಪಾಗಿತ್ತು. "ಜಾರವಾನ ಕೈ ಬಲಿಷ್ಟ ಕಪಿಮುಷ್ಟಿಯಂತಿತ್ತು. ಕೈ ಮುರಿದ ಅನುಭವವೇ ಆಯಿತು" ಅಂತ ಹೇಳಿದರು ಆನಂದ. ಆನಂದ ಅವರಿಗೂ ಕೆಲವರು ಜಾರವಾಗಳ ಪರಿಚಯ ಇದೆಯಂತೆ. ಅವರು ಕಾಡಿನ ತಾಜಾ ಜೇನುತುಪ್ಪ ತಂದುಕೊಡ್ತಾರಂತೆ. ಅವರಿಗೆ ಕೆಂಪು ಬಟ್ಟೆ ಅಥವಾ ತಿನ್ನಲು ಕೊಲ್ಕತಾ ಬೀಡಾ ಕೊಡ್ತಾರಂತೆ.

ಬಾರಾಟಂಗಿನಲ್ಲಿ ಗಾಡಿ ನಿಲ್ಲಿಸಿ ಬೇರೆ ಪ್ರವಾಸಿ ಸ್ಥಳಕ್ಕೆ ಹೋಗಬೇಕು. ಅಲ್ಲಿ ನಮ್ಮ ಟ್ಯಾಕ್ಸಿ ನಿಲ್ಲಿಸುತ್ತಿದ್ದಂತೆಯೇ ಒಬ್ಬ ಜಾರವಾ ಕಾರಿನ ಬಾಗಿಲು ಹಿಡಿದುಕೊಂಡು ನಿಂತಿದ್ದಾನೆ. ಮರಿನಾ ಪಾರ್ಕಿನ ಸಿಬ್ಬಂದಿ ವಿವರಿಸಿದಂತೆ ಆರಡಿಗಿಂತಲೂ ಎತ್ತರದ, ಕಟ್ಟು ಮಸ್ತಾದ ಆಳು. ತೊಳೆದಿಟ್ಟ ಸಾಲಿಗ್ರಾಮದಂತೇ ಕಪ್ಪಾದ ಹೊಳೆಯುವ ಬಣ್ಣ, ಕೆಂಪಾದ ಹೊಳೆಯುವ ಕಣ್ಣುಗಳು, ನೇರ ದಿಟ್ಟ ದೃಷ್ಟಿ. ಕೈಯಲ್ಲಿ ಚೂಪಾದ ಭರ್ಜಿ, ಬಿಲ್ಲು, ಬಾಣ, ತಲೆಗೆ ಕೆಂಪು ನೂಲಿನಿಂದ ನೇಯ್ದ ಟೊಪ್ಪಿ, ಸೊಂಟಕ್ಕೆ ಅದೇ ಬಣ್ಣದ ನೂಲಿನ ಉಡುಗೆ. ಅಬ್ಬಾ!ಮೈ ಜುಂ ಆಯಿತು. ಅವನ ತೀಕ್ಷ್ಣ ನೋಟಕ್ಕೆ ನಲುಗಿಹೋದೆ. ಕಥೆ, ಪುರಾಣಗಳಲ್ಲಿ ಓದಿದ ರಾಕ್ಷಸರ ನೆನಪಾಯಿತು. ಅಷ್ಟು ಹತ್ತಿರದಿಂದ ನಾನು ನೋಡಲೇಬೇಕೆಂದುಕೊಂಡ ವ್ಯಕ್ತಿ ನಿಂತಿದ್ದಾನೆ. ಭಯದಿಂದ ಅವನ ಕಡೆ ನೋಡಲಾಗುತ್ತಿಲ್ಲ.ನ ನ್ನ ಉಸಿರು ನನಗೇ ಕೇಳುತ್ತಿದೆ. ನಾವು ಕಾರಿನಲ್ಲಿ ಇಟ್ಟಿರುವ ಚಿಪ್ಸ್, ಬಿಸ್ಕಿಟ್ ನೋಡುತ್ತಿದ್ದಾನೆ. ನಾನು



ಸ್ವಲ್ಪ ಬಿಸ್ಕಿಟ್ ತೆಗೆದುಕೊಟ್ಟರೆ, ಇಡೀ ಬ್ಯಾಗನ್ನೇ ಕಸಿದುಕೊಂಡು ಓಡಿದ. ನಾವೆಲ್ಲರೂ ಓಡುತ್ತಿರುವ ಆವನನ್ನೇ ನೋಡುತ್ತಾ ಇದ್ದೆವು. ನನಗೆ ನಿಡುದಾದ ನಿಟ್ಟುಸಿರು ಬಂತು. ಕಾರಿನ ಬಾಗಿಲು ಹಾಕಲೂ ಕೈ,ಕಾಲು ನಡುಗುತ್ತಿತ್ತು.

ಅಲ್ಲಿಂದ ಮುಂದಕ್ಕೆ ಮಡ್ ವಾಲ್ಕೆನೋ, ಲೈಮ್ಸ್ ಸ್ಟೋನ್ ಕೇವ್ ಮುಂತಾದ ಸ್ಥಳಗಳನ್ನು ನೋಡಿ, ಬಾರಾಟಾಂಗಿನಿಂದ ಪೋರ್ಟ್ ಬ್ಲೇರಿಗೆ ವಾಪಸ್ಸು ಬರುವಾಗ ಒಂದು ಜಾರವಾ ಕುಟುಂಬವನ್ನು ನೋಡಿದೆವು. ಕಾರಿಗೆ ಕೈ ಅಡ್ಡ ಮಾಡಲು ವೇಗವಾಗಿ ಬರುತ್ತಾ ಇದ್ದರು. ಒಬ್ಬ ಗಂಡಸು ಹಾಗೂ ಹೆಂಗಸಿನ ಬಗಲಲ್ಲಿ ಒಂದು ಮಗು, ಇನ್ನೊಂದು ಮಗುವನ್ನು ಕೈಹಿಡಿದು ನಡೆಸಿಕೊಂಡು ಬರುತ್ತಿದ್ದರು. ಯಾರ ಮೈಮೇಲೂ ಬಟ್ಟೆಗಳೇ ಇಲ್ಲ. ಮನುಷ್ಯ ಬಟ್ಟೆಗಳಿಲ್ಲದಿದ್ದರೆ ಎಷ್ಟು ಬೀಭತ್ಸ ಹಾಗೂ ಭೀಕರ. ಒಂದು ಭಯಂಕರವಾದ ದೃಶ್ಯ.ನಮ್ಮ ಡ್ರೈವರ್ ಹೇಳಿದರು. ಕೆಲವರಿಗೆ ಬಟ್ಟೆ ಕೊಟ್ಟರೂ ಧರಿಸುವುದಿಲ್ಲವಂತೆ. ಅದೊಂದು ಕಿರಿ,ಕಿರಿ ಅವರಿಗೆ. ಕಪ್ಪು ಬಣ್ಣ, ಕೆಂಪು ಕಣ್ಣು, ಆರಡಿಗಿಂತಲೂ ಎತ್ತರ, ಕಟ್ಟುಮಸ್ತಾದ ಮೈಕಟ್ಟು. ಅವರಿಗೆ ಕೆಂಪು ಬಣ್ಣವೆಂದರೆ ಬಹಳ ಇಷ್ಟ. ಕೈಯಲ್ಲಿ ಒಂದು ಭರ್ಚಿ ಇದ್ದೇ ಇರುತ್ತದೆ. ಸಮುದ್ರ ಹತ್ತಿರ ಇರುವುದರಿಂದ ಒಳ್ಳೆಯ ಈಜುಗಾರರು. ಹಸಿ ಮೀನನ್ನೂ, ಹಸಿ ಪ್ರಾಣಿಗಳನ್ನೂ ತಿನ್ನುತ್ತಾರೆ. ಅರಣ್ಯದಲ್ಲಿ ಹೇರಳವಾಗಿ ಜೇನು ಸಿಗುವುದರಿಂದ ಜೇನುತುಪ್ಪ ಜಾಸ್ತಿ ತಿನ್ನುತ್ತಾರೆ. ಅವರು ಕಾಡುಹಂದಿ ಸಾಕುತ್ತಾರೆ. ಅದರ ರಕ್ತ ಕುಡಿಯುತ್ತಾರಂತೆ. ಕಲ್ಲಿಗೇ ಹೂಗಳನ್ನು ಹಾಕಿ ಸಾಮೂಹಿಕವಾಗಿ ಪೂಜೆ, ನೃತ್ಯ ಮಾಡಿ ದೇವರಪೂಜೆ, ಹಬ್ಬ ಮಾಡುತ್ತಾರಂತೆ.

ಆನಂದ ಅವರ ಬಗ್ಗೆ ಹೇಳುತ್ತಾ ಇದ್ದರು. ಅದನ್ನು ಕೇಳುತ್ತಿದ್ದಂತೆಯೇ ಮೈಯ್ಯಲ್ಲಿ ರೋಮಾಂಚನ, ವಿಪರೀತ ಭಯದಿಂದ ಕೈ, ಕಾಲುಗಳು ಸಣ್ಣದಾಗಿ ನಡುಗುತ್ತಿದ್ದವು. ಅಂತೂ ಅಲ್ಲಿಗೆ ಜಾರವಾ ಮೂಲನಿವಾಸಿಗಳನ್ನು ನೋಡುವ ನನ್ನ ಮಹದಾಸೆ ನೆರವೇರಿತು. ಈಗಲೂ ಆ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ.

ಇನ್ನೊಮ್ಮೆ ಅಂಡಮಾನಿಗೆ ಪ್ರವಾಸಕ್ಕೆ ಹೋಗಬೇಕು, ಜಾರವಾಗಳ ಜೊತೆಗೆ ಒಂದು ಅಪರೂಪದ ಫೋಟೋ ಕ್ಲಿಕ್ಕಿಸಿ ಕೊಳ್ಳಬೇಕು. ಎಲ್ಲರಿಗೂ ತೋರಿಸಬೇಕು.

***

ಸೊಳ್ಳೆ ಪುರಾಣ

- ವಿಠ್ಠಲ. ಇಜೇರಿ

ಸಿದ್ದಣ್ಣನ ಮನೆಗೆ ಸಂಜೆ ಮುದ್ದಣ್ಣ ಬಂದು ಕೂಗಿದಾಗ ಸಿದ್ದಣ್ಣ "ಬಾರಯ್ಯ, ಏನು ಈ ವೇಳೆಯಲ್ಲಿ ಬರೋಣವಾಯಿತು'' ಎಂದು ಒಳಗಿನಿಂದ ಕೈಯಲ್ಲಿ ರಾಕೇಟ್ ಹಿಡಿದುಕೊಂಡು ಬಂದ.

ಮುದ್ದಣ್ಣ, "ಸಿದ್ದಣ್ಣ, ಅಡುಗೆ ಮನೆಯಲ್ಲಿ ಟೆನಿಸ್ ಆಡ್ತಾ ಇದ್ದೀಯಾ?" ಅಂದ.

"ಇಲ್ಲ ಮಾರಾಯಾ, ದಿನಾಲು ಸಂಜೆ ಕಾರ್ಯಕ್ರಮ, ಮಳೆಗಾಲ, ಚಳಿಗಾಲ ಬಂದರೆ ತಪ್ಪದೇ ಬ್ಯಾಟ್ ಬೀಸುತ್ತೇನೆ. ಇದರಲ್ಲಿ ಎರಡು ರೀತಿಯ ಪ್ರಯೋಜನಗಳಿವೆ. ಒಂದು, ಸೊಳ್ಳೆ ನಾಶ. ತತ್ಪರಿಣಾಮವಾಗಿ ಚಿಕನ್ ಗುನ್ಯಾ, ಡೆಂಗ್ಯು ರೋಗಗಳಿಂದ ಮುಕ್ತಿ. ಎರಡನೇ ಪ್ರಯೋಜನವೆಂದರೆ ಮನೆಯಲ್ಲಿಯೇ ಮಸ್ತ್ ವ್ಯಾಯಾಮ. ನೋಡು ನನ್ನ ರಟ್ಟೆಗಳೆಷ್ಟು ಬಲವಾಗಿವೆ" ಎಂದು ಹೇಳಿದ ಸಿದ್ದಣ್ಣ ತನ್ನ ಬನಿಯನ್ನು ಮೇಲೆ ಸರಿಸಿ ಬೈಸೆಪ್ಸ ತೋರಿಸಿದ.

ಮುದ್ದಣ್ಣ: ಯಾವಾಗಿನಿಂದ ಈ ಹೊಸ ವ್ಯಾಯಾಮ ಪ್ರಾರಂಭ ಮಾಡಿದೆ.

ಸಿದ್ದಣ್ಣ: ಸೊಳ್ಳೆಗಳ ಹುಟ್ಟು, ಬೆಳವಣಿಗೆ ಮತ್ತು ಅವುಗಳ ಕಾರ್ಯತತ್ಪರತೆ ಬಗ್ಗೆ ಸೊಳ್ಳೆ ಪುರಾಣ ಕೇಳಿದಮೇಲೆ ನಾನೂ ಈ ಸೊಳ್ಳೆ ವಿಮೋಚನಾ ಯಜ್ಞ ಕೈಗೊಳ್ಳುವ ಸಂಕಲ್ಪ ಮಾಡಿದೆ, ಅದೆಲ್ಲ ಇರಲಿ ಈಗ ಏನು ಬಂದಿದ್ದು.

ಮುದ್ದಣ್ಣ: ನಾನು ಏನೋ ಮಾತಾಡೋಣ ಅಂತಾ ಬಂದೆ. ಆದರೆ ಈಗ ನಿನ್ನ ಕರ್ತವ್ಯ ನಿಷ್ಠೆ ನೋಡಿ, ಸೊಳ್ಳೆ ಪುರಾಣ ಕೇಳೋಣ ಅನಿಸುತ್ತಿದೆ, ದಯಮಾಡಿ ಹೇಳೋಣವಾಗಲಿ.

ಸಿದ್ದಣ್ಣ : ಮುದ್ದಣ್ಣ ಈಗ ಪುರಾಣಗಳನ್ನು ನಂಬುವವರು, ಓದುವವರು ಮತ್ತು ಆಸಕ್ತಿಯಿಂದ ಕೇಳುವವರು ಬಹಳ ಕಡಿಮೆ, ನೀನು ಆಸಕ್ತಿವಹಿಸಿ ಕೇಳುವಾಗ ನಾನು ಹೇಳದೇ ಇದ್ದರೆ ಆದೀತೇ?. ನಾನು ಓದಿದ ಈ ಮಶಕ ಪುರಾಣವನ್ನು ಸಂಸ್ಕೃತದಲ್ಲಿ ಬರೆದವರು ಡಾ. ರಾಘವೇಂದ್ರ ಭಟ್ ಎಂಬ ಶೃಂಗೇರಿ ಸಂಸ್ಕೃತ ವಿದ್ಯಾಪೀಠದಲ್ಲಿಯ ಸಾಹಿತ್ಯ ವಿಭಾಗದ ಅಧ್ಯಕ್ಷರು. ಅದರ ಕನ್ನಡ ರೂಪಾಂತರವನ್ನು ನಿನ್ನ ಹಿತೈಷಿಯಾಗಿ ಹೇಳುವೆ ಕೇಳು,

ಮಶಕ ಪುರಾಣವು ನಾನಾ ಛನ್ದಸ್ಸು, ಚಮತ್ಕಾರ ಮತ್ತು ಅಲಂಕಾರಗಳಿಂದ ಕೂಡಿದ್ದು ಮನುಜ ಕುಲ ನಿತ್ಯವೂ ಅನುಭವಿಸುವ ಸೊಳ್ಳೆ ಕಾಟದ ಮೇಲೆ ಬೆಳಕು ಚೆಲ್ಲುತ್ತದೆ. ಮೂಲದಲ್ಲಿ ಅದು ಕೃಷಿಕ ಮತ್ತು ಆರೋಗ್ಯ ಮಂತ್ರಿಗಳ ಸಂಭಾಷಣೆಯಾಗಿದೆ.

ಏಕದಾ ಮಷಕೈರ್ಧಷ್ಟ: ಕೃಷಿಕ:
ಖಿನ್ನ ಮಾನಸ: !!
ತದ್ರಕ್ಷಯೋಪಾಯ ಮಾ ಪ್ರಾಕ್ಷಿತ್ ಲೋಕ ನಿರೋಗ ಮಂತ್ರಿಣಂ !!

ಒಮ್ಮೆ ಸೊಳ್ಳೆ ಕಾಟದಿಂದ ಖಿನ್ನಗೊಂಡ ರೈತನು ಅವುಗಳಿಂದ ರಕ್ಷಣೆಯ ಬಗ್ಗೆ ಆರೋಗ್ಯ ಮಂತ್ರಿಗಳಲ್ಲಿ ಸಲಹೆ ಕೇಳಿದಾಗ ಈ ಸೊಳ್ಳೆ ಪುರಾಣವನ್ನು ಮಂತ್ರಿಗಳು ಹೇಳಿದುದಾಗಿ ಐತಿಹ್ಯಗಳಿಂದ ತಿಳಿದುಬರುತ್ತದೆ.

ಭಯಭೀತನಾದ ಆತನನ್ನು ಸಮಾಧಾನಗೊಳಿಸಿದ ಮಂತ್ರಿಗಳು ಹೀಗೆ ಹೇಳಿದರು:

ಸಮಾಶ್ವಾಸ್ಯ ತದಾಮಾತ್ಯೋ ಮಾಬೈಶೀರಿತಿ ತಂ ಜನಮ್ !
ಪುರಾಣಂ ಶ್ರಾವಯಾಮಾಸ ಲೋಕಸಂಕಟ ನಾಶಕಮ್ !!

ಮತ್ತೆ ಹೇಳಿದರು :
ಪ್ರಣಮ್ಯ ಕ್ರಿಮಿಕೀಟಾತ್ಮ ವಿಶ್ವೋತ್ಪತ್ತಿಕರಮ್ ವಿಭುಮ್!
ಪುರಾಣಂ ಮಾಶಕಂ ವಚ್ಮಿ ದಂಶಕ್ಲೇಶ ವಿನಾಶಕಮ್ !!

"ಸಮಸ್ತ ಕ್ರಿಮಿ ಕೀಟಾದಿ ಸಹಿತ ವಿಶ್ವದ ಉತ್ಪತ್ತಿಗೆ ಕಾರಣನಾದ ಪರಮಾತ್ಮನಿಗೆ ವಂದಿಸಿ ಮಶಕ ಪುರಾಣವನ್ನು ಹೇಳುವೆ ಕೇಳು " ಎಂದು ಮಂತ್ರಿಗಳು ಹೇಳಿದರು.

ನಗರೇ ಜನಸಂಘತೇ ಕುಲ್ಯಾಯಾಮ್, ಮಾರ್ಗಪಾರ್ಶ್ವಯೋ: !
ಶಾಕವಿಕ್ರಯಣಸ್ಥಾನೇ ಮಲಿನೇಷು ಚ ವಸ್ತುಷು!!

ಕಾಲಭೇದಂ ವಿನಾ ಯಸ್ತು ಜಾಯತೇ
ಮಾಷಕಾಯ :!
ದಿನಾನಿ ಕಾನಿಚಿಜ್ಜೀವನ್ ಕ್ರಾಂತಿಮ್ ಕೃತ್ವಾ ವಿನಶ್ಯತಿ!!

ನಗರಗಳಲ್ಲಿ, ಜನದಟ್ಟಣೆ ಇರುವಲ್ಲಿ, ತರಕಾರಿ ಮಾರುಕಟ್ಟೆಗಳಲ್ಲಿ, ಚರಂಡಿಯಲ್ಲಿ, ಮಲಿನವಾದ ವಸ್ತುಗಳಲ್ಲೆಲ್ಲ, ಕಾಲಬೇಧವಿಲ್ಲದೆ ಎಲ್ಲ ಕಾಲದಲ್ಲಿಯೂ ಹುಟ್ಟಿಕೊಳ್ಳುವ ಈ ಮಾಶ ಕಾಯ (ಮಾಶ ಅಂದರೆ ಉದ್ದಿನ ಬೇಳೆ, ಕಾಯ ಅಂದರೆ ಉದ್ದಿನ ಗಾತ್ರದ್ದು) ಜೀವ ಇರುವಷ್ಟು ದಿನ ಕ್ರಾಂತಿಯನ್ನು ಮಾಡಿ ಒಂದು ದಿನ ಹುತಾತ್ಮನಾಗಿ ಬಿಡುತ್ತದೆ.

ಶ್ವೇತಂ ವಾ ಶ್ವೇತಕೃಷ್ಣಂ ವಾ ಕೃಷ್ಣಂ
ವಾ ರಕ್ತ ವರ್ಣಕಮ್ !!
ಪ್ರಿಯಮ್ ಸ ಮನುತೇ ಭೂಮ್ಯಾಮ್ ರಕ್ತಪುಷ್ಟ ಶರೀರಿಣಂ !!

ಅದು ಹೇಗೆ ಕಚ್ಚುತ್ತೆ ಅಂದರೆ :
ದಂಶೋ ಗಾಮಿವ ಸಂಪ್ರಕ್ತ : ಸೇವತೇ ಮಕ್ಷಕೋ
ನರಮ್!
ದಂಶನೇ ರಕ್ತಪಾನೇಸ್ಯ ವಸು ಕುಟುಂಬಕಮ್!
ಯಥಾ ಯಥಾ ಹ್ಯಸ್ತಮೇತಿ ಸವಿತಾ ಪಶ್ಚಿಮಾಬ್ಯುಸಿದೌ !
ತಥಾ ತಥಾ ಬಲಂ ಚಾಸ್ಯ ದಾನವಸ್ಯೇವ
ಪೀಡನೇ !!

ಈ ಮಾಶಕವು ವರ್ಣಬೇಧ ನೀತಿಯಿಂದ ಮುಕ್ತವಾಗಿದ್ದು ಜನ ಬೆಳ್ಳಗೆ ಇರಲಿ, ಕಪ್ಪು ಇರಲಿ, ಕೆಂಪಿರಲಿ ಒಟ್ಟಿನಲ್ಲಿ ದಷ್ಟಪುಷ್ಟ ಶರೀರಗಳನ್ನೆಲ್ಲ ಎಲ್ಲರೂ ತನ್ನವರೆಂಬ ಆತ್ಮೀಯತೆಯಿಂದ ಪ್ರೀತಿಯಿಂದ ಕಚ್ಚುತ್ತದೆ. ಅಷ್ಟೇ ಅಲ್ಲ ಕಚ್ಚುವ ವಿಷಯದಲ್ಲಿ ರಕ್ತಪಾನದ ವಿಷಯದಲ್ಲಿ ಇದರದು ವಸುದೇವ ಕುಟುಂಬಕಮ್ ಎಂಬ ನೀತಿ.

ಮಾನವಾನಾಂ ಯದಾ ನಿದ್ರಾ ತದಾಸೌ ಚೇಷ್ಟತೇಶನ್ಯೈ :!!
ಉತ್ತಿಷ್ಟಂತಿ ಯದಾ ತೇ ತು ದದಾ ಸಂಯಮಿನೋ ನಿಶಾ !!

ಇದರ ವಿಷಯದಲ್ಲಿ ಭಗವದ್ಗೀತೆಯಲ್ಲಿ ಕೃಷ್ಣನು ಹೇಳಿದ ಯೋಗಿಯ ಲಕ್ಷಣ (ಯಾ ನಿಶಾ ಸರ್ವ ಭೂತಾನಾಂ ತಸ್ಯಾ ಜಾಗರ್ತಿ ಸಂಯಮಿ) ಅಂದರೆ ಮಾನವರಿಗೆ ಯಾವುದು ರಾತ್ರಿಯೋ ಅದು ಸೊಳ್ಳೆಗಳಿಗೆ ಹಗಲು ಎಂಬುದು ಸರಿಯಾಗಿ ಹೊಂದುತ್ತದೆ.

ಚಾಲಿತೇ ವ್ಯಜನೇ ಪೂರ್ವಂ ಜಾಲೇ ಸಂಸ್ಥಾಪಿತೇಪಿ ವಾ!
ಗಚ್ಚತಿ ಸ್ಮ್ ಕ್ಷಣೇ ದೂರಂ ಭೇಷಜೇನೇವ ಮೂಶಕ:!
ಗುಡ್ ನೈಟ್, ಆಲೌಟ, ಓಡುಮಾಸ್ ಚ ಪುರಾಸನ್ ಪ್ರತಿಬಂಧಕಾ:!
ಕಾಲೇನ ಗಚ್ಚತಾ ವ್ಯಾಪ್ತಿರೇತೆಷಾಂ ಮಶಕೈ : ಸಹ!!
ಸಾಂಪ್ರತಂ ತು ಸಮಾಲಿಂಗ್ಯ ಮೃದುಚರ್ಮ ದೃಢಂ
ನೃಣಾಮ್ !!
ಚಂಚು ಸೂಚಿ ಪ್ರಸಾಯತ್ರ ರಕ್ತಮ್ ಪಿಬತಿ ಲೀಲಯಾ

ಮೊದಲು ಫ್ಯಾನು ಹಾಕಿಕೊಂಡರೆ, ಸೊಳ್ಳೆಪರದೆ ಬಿಡಿಸಿಕೊಂಡರೆ, ಗುಡ್ ನೈಟ್, ಆಲ್ ಔಟ್ ಗಳಿಗೆ ಗೆಟ್ ಔಟ್ ಆಗುತ್ತಿದ್ದ ಸೊಳ್ಳೆಗಳು, ಇಲ್ಲವೇ ದೂರ ಓಡುತ್ತಿದ್ದ ಸೊಳ್ಳೆಗಳಿಗೆ ಈಗ ಇವೆಲ್ಲ ಮಾಮೂಲು, ನಮಗೇನೂ ಮಾಡಲಾರವು ಎನ್ನುವ ಸ್ಥಿತಿಗೆ ತಲುಪಿ ಮನುಷ್ಯರ ಮೃದು ಚರ್ಮವನ್ನು ಗಟ್ಟಿಯಾಗಿ ಆಲಂಗಿಸಿಕೊಂಡು ತನ್ನ ಚಂಚು ಸೂಜಿಯಿಂದ ಲೀಲಾಜಾಲವಾಗಿ ರಕ್ತವನ್ನು ಹೀರುತ್ತವೆ.

ಪಠನೇ ಪಾಠನೇ ವಾಪಿ ಚಿಂತನೇ ಸರ್ವ ಕರ್ಮಣಿ!.
ಚಿತೈಕಾಗ್ರಸ್ಯ ಭಂಗಸ್ಯ ಹೇತು : ಮಶಕ ಗಾಯನ :!
ನಿರ್ಭಯಂ ಸಮುಪಾಗತ್ಯ ಶರೀರಮಧಿತಿಷ್ಠತಿ ,
ಹಸ್ತೇನ ತಾಡಿತೇ ತತ್ರ ಕೇವಲಂ ವೇದನಾ ಫಲಮ್!!

ಪಠನ, ಪಾಠನ ಸೇರಿದಂತೆ ಎಲ್ಲ ಕಾರ್ಯಗಳಲ್ಲಿ ಇವುಗಳ ಗಾಯನವು ವಿಘ್ನಕಾರಿಯಾಗಿದ್ದು, ಇವುಗಳನ್ನು ಕೊಲ್ಲಲು ಎರಡೂ ಕೈಗಳ ಮಧ್ಯೆ ಹೊಸಕಿ ಹಾಕಲು ಯತ್ನಿಸಿದರೆ ಬರೀ ನೋವೇ ಹೊರತು ಸೊಳ್ಳೆಗಳು ಸಾವಿಗೆ ಸಿಕ್ಕುವುದಿಲ್ಲ. ಅವುಗಳ ನಾಶಕ್ಕೆ ಈಗ ಹೊಸ ಉಪಾಯ ಕಡಿಮೆ ಬೆಲೆಯಲ್ಲಿ ದೊರೆಯುವ ಚೀನಾದ ಸೊಳ್ಳೆ ಬೇಟೆಯ ಬ್ಯಾಟು ಸುಲಭ ಸಾಧನವಾಗಿದ್ದು ಇದರ ಉಪಯೋಗದಿಂದ ಸೊಳ್ಳೆಗಳು ಚಟ್ ಚಟ್ ಎಂದು ಸದ್ದು ಮಾಡಿ ಸತ್ತು ಹೋಗುತ್ತವೆ. ಆದರೂ ಮಾನುಷ ಕುಲಕ್ಕೆ ದಿವ್ಯ ಉಪದೇಶವೇನೆಂದರೆ,

ಏವಮ್ ದೋಷ ಸಹಸ್ರಸ್ಯ ಮಶಕಷ್ಯ ನೀವಾರಿಣೇ,
ಮೂಲೇ ಕುಠಾರ: ಕರ್ತವ್ಯೋ ಮಾಲಿನ್ಯಂ ಪರಿಮಾರ್ಜತಾಮ್ !!

ಯಾವುದೇ ಉಪಾಯ ಕೈಗೊಂಡರೂ ಹತ್ತು ಹಲವಾರು ದೋಷಗಳಿಗೆ ಕಾರಣವಾಗುವ ಈ ಸೊಳ್ಳೆಗಳ ನಿವಾರಣೆಗೆ ಒಂದು ಉತ್ತಮ ಉಪಾಯ ಮಾಲಿನ್ಯ ನಿವಾರಣೆ ಮತ್ತು ಪರಿಸರದ ಸ್ವಚ್ಛತೆ.

ಮುದ್ದಣ್ಣ : ಬಲವಾದ ಭುಜಗಳೆನೋ ಸರಿ ಆದರೆ ನಿನ್ನ ಹೊಟ್ಟೆ ನೋಡು ಗುಡಾಣವಾಗಿದೆ, ಅದಕ್ಕೆ ವ್ಯಾಯಾಮ ಬೇಡವೇ?

ಸಿದ್ದಣ್ಣ : ಹೌದು, ಅದಕ್ಕಾಗಿ ಬೆಳಿಗ್ಗೆ ಪಾರ್ಕಿನಲ್ಲಿಯ ಜಿಮ್ ನಲ್ಲಿ ಸಾಕಷ್ಟು ಶ್ರಮ ಹಾಕುತ್ತೇನೆ, ಆದರೆ ತಿನ್ನಲು ಯಾವ ಶ್ರಮವೂ ಬೇಡ. ಸಾಕಷ್ಟು ತಿಂದುಬಿಡುತ್ತೇನೆ, ಹೀಗಾಗಿ ರಿಸಲ್ಟ್ ನಿಲ್ ಆಗಿದೆ. ಅದಕ್ಕೂ ಯಾವುದಾದರೂ ಪುರಾಣ ಹುಡುಕಬೇಕಿದೆ. ಯಾವುದಾದರೂ ಪುರಾಣ ಹುಡುಕಬೇಕು.

***

ಧರೆಗಿಳಿದ ದೇವಿಯರು

– ನಾಗರತ್ನ ಚಂದ್ರಶೇಖರ

ಎಂದಿನಂತೆ ಭೂಲೋಕದ ವಾರ್ಷಿಕ ಪ್ರವಾಸದ ಬಗ್ಗೆ ಚರ್ಚೆ ಮಾಡಲು ತ್ರಿಮೂರ್ತಿಗಳ ಸತಿಯರು ತ್ರಿಲೋಕ ಭವನದಲ್ಲಿ ಸೇರಿದ್ದರು. ಮೊದಲಿಗೆ ಪಾರ್ವತಿ ಮಾತು. ‘‘ಭೂಲೋಕಕ್ಕೆ ಹೋಗುವವರಾದ್ದರಿಂದ ಹಿಂದಿನ ನಿಮ್ಮ ಅನುಭವವನ್ನು ಮೊದಲು ಹೇಳಲು ಪ್ರಾರಂಭಿಸಿ" ಎಂದಳು.

"ಅದೇನೋ ಹೌದು ಮೂರು ವರ್ಷದ ಹಿಂದೆ ನಾವು ಪ್ರವಾಸ ಮಾಡಿದ ಅನುಭವ ನೆನೆಸಿಕೊಂಡರೆ ಭಯವಾಗುತ್ತದೆ. "ಸಾವು ನೋವಿನಿಂದ ಜನ ಒದ್ದಾಡುತ್ತಿದ್ದ ಕರೋನ ರಾಕ್ಷಸನ ಹಾವಳಿಯದಲ್ಲವೆ ಅದು" ಲಕ್ಷ್ಮಿ ಹೇಳಿದಾಗ, ಅವರೆಲ್ಲರ ನೆನಪು ಹಿಂದಕ್ಕೋಡಿತು.

ಗೌರಿ ಮುಂದುವರಿಸಿದಳು, "ಆಗ ಅಲ್ಲಿ ಹಬ್ಬ ಹರಿದಿನಗಳನ್ನು ಮಾಡುವ ಉತ್ಸಾಹವೇ ಯಾರಲ್ಲೂ ಉಳಿದಿರಲಿಲ್ಲ. ಮದುವೆಗಳನ್ನು ಮುಂದೂಡಿದ್ದರು. ಇನ್ನೂ ಹೊಸ ವರ್ಷ ಗೌರಿ ಬಾಗಿನದ ಮಾತೆಲ್ಲಿಯದು? ಯಾರನ್ನು ಮುಟ್ಟಲೂ, ಯಾವುದನ್ನು ತಿನ್ನಲೂ ಜನರಿಗೆ ಭಯ. ಕ್ವಾರಂಟೈನಲ್ಲಿ ನಾನು, ಗಣೇಶ ಸಿಕ್ಕಿಬಿದ್ದರೇನು ಗತಿ ಎಂದು ಅನಿಸಿತ್ತು. ದೇವಸ್ಥಾನಗಳಲ್ಲಿ ದೇವರಗಳನ್ನೇ ಕೂಡಿ ಹಾಕಿದ್ದಾರಲ್ಲ! ಗಣೇಶನಿಗಂತೂ ತುಂಬಾ ನಿರಾಶೆಯಾಯಿತು. ಹಾಡು, ಕುಣಿತ, ಮೆರವಣಿಗೆ ಎಲ್ಲಾ ಕಡಿತ. ಆದರೆ ಈ ಭೂಲೋಕದ, ಅದರಲ್ಲೂ ಭಾರತದ ಮಹಿಳೆಯರು ಈ ಸಾರಿ ಮೈಬಗ್ಗಿಸಿ ಹೋಳಿಗೆ, ಕಡಬು ಅಂತ ಮನೆಯಲ್ಲೇ ಶುಚಿಯಾಗಿ ತಯಾರಿಸಿದ್ದು ನೋಡಿ ತುಂಬಾ ಖುಷಿಯಾಯಿತು. ಅದೇನೋ ಸ್ಯಾನಿಟೈಸರ್ ಅಂತ ನಮ್ಮ ಮೈಗೆಲ್ಲಾ ಹಾಕುತ್ತಿದ್ದ ದ್ರವದ ವಾಸನೆ ಅಂತೂ ಮೂರು ವರ್ಷವಾದರೂ ಇನ್ನೂ ಹೋಗಿಲ್ಲ ಅನಿಸುತ್ತಿದೆ ನನಗೆ" ಪಾರ್ವತಿಯ ಮಾತಿಗೆ ಲಕ್ಷ್ಮಿ ಸರಸ್ವತಿಯರು ಮನಸಾರೆ ನಕ್ಕರು.

‘‘ಅಯ್ಯೋ.. ಅಕ್ಕ ನಿಮಗಾದ ಅನುಭವವೇ ನಮಗೂ ಆಗಿದೆಯಲ್ಲವೇ’’ ಎಂದು ಸರಸ್ವತಿ ಮಾತಿಗೆ ತೊಡಗಿಕೊಳ್ಳುತ್ತಾ, "ಪಾರ್ವತಿ ಬಂದಮೇಲಷ್ಟೇ ನನ್ನ ಸರದಿಯಲ್ಲವೇ? ಯಥಾಪ್ರಕಾರ ಜನ ಕೈ ತೊಳೆದೂ ತೊಳೆದೂ ಸುಸ್ತಾಗುತ್ತಿದ್ದರು. ಅವರೆಲ್ಲ ಮೂಗಿಗೆ, ಬಾಯಿಗೆ, ಬಟ್ಟೆ ಕಟ್ಟಿಕೊಂಡು ಓಡಾಡುತ್ತಿದ್ದರೆ ನನಗಂತೂ ನಗುವೋ ನಗು. ಅಬ್ಬ, ಅವರಲ್ಲಿ ಯಾರನ್ನೂ ಕಂಡುಹಿಡಿಯಲಾಗದಂತಿತ್ತು. ಅಂತೂ ಅವರೆಲ್ಲರ ಬಿಡುವಿಲ್ಲದ ಬಾಯಿಗೆ ಬ್ರೇಕ್ ಹಾಕೋಕೆ ಕರೋನ ರಾಕ್ಷಸನೇ ಬರಬೇಕಾಯಿತು ಪಾಪ ಅಂತ ಅನಿಸಿತು. ವಿದ್ಯೆ ನೈವೇದ್ಯವಾಗಿತ್ತು. ಅದೇನೋ ವೆಬಿನಾರು, ಗೂಗಲ್ ಮೀಟ್ ಅಂತೆ. ಮದುವೆ ಮುಂಜಿ ಇರಲಿ ಕಡೆಗೆ ತಿಥಿನೂ ಅದರಲ್ಲೇ ಅದರ ಮೂಲಕನೇ ಆಗ್ತಾ ಇತ್ತು. ಹಿಂದೆ ಮಕ್ಕಳೆಲ್ಲ ಸ್ಕೂಲಿಗೆ ಮೂಟೆ ಹೊತ್ತು ಹೊತ್ತು ಸುಸ್ತಾಗ್ತಿದ್ರಲ್ಲ. ಆಗ ಮನೆಯಲ್ಲಿ ಕಂಪ್ಯೂಟರಿನಲ್ಲಿ ಓದು ಬರಹ ಅಂತೆ. ಪರೀಕ್ಷೆಗಳೇ ಇಲ್ಲದೆ ಪಾಸ್ ಆಗುವ ಭರವಸೆ ಇದ್ದಾಗ ಈ ವಿದ್ಯಾದೇವತೆಯನ್ನು ಯಾರು ಭಕ್ತಿಯಿಂದ ವರ ಕೇಳುತ್ತಾರೆ ಹೇಳು. ಅಂತೂ ಮಸ್ತಕವೇ ಪುಸ್ತಕವಾದ ಮೇಲೆ ನಾನೂ ಸ್ವಲ್ಪ ಕಂಪ್ಯೂಟರ್ ಜ್ಞಾನ ಕಲಿತೇ ಬಂದೆ" ಸರಸ್ವತಿಯ ಮಾತಿಗೆ ಮತ್ತೊಮ್ಮೆ ಎಲ್ಲರೂ ನಕ್ಕರು.

ಈಗ ಲಕ್ಷ್ಮಿಯ ಸರದಿ. "ನಾನಂತೂ ಪ್ರತಿ ವರ್ಷ ತುಪ್ಪದ ಕಜ್ಜಾಯದ ಆಸೆಗಾಗಿ ಹೋಗುವುದು ಭಾರತಕ್ಕೆ. ಅಲ್ಲಿ ಬಿಸಿಬಿಸಿ ಕಜ್ಜಾಯ ಮಾಡುತ್ತಿದ್ದ ಅಜ್ಜಿಯರ ಸಂಖ್ಯೆಯೇ ಕಡಿಮೆಯಾಗತೊಡಗಿತ್ತು ಕರೋನಾದಿಂದಾಗಿ. ಈಗಿನ ಪೀಳಿಗೆಯವರಿಗೆ ಪಿಜ್ಜಾ ಬೇಕಾದರೆ ಮಾಡಲು ಬರುತ್ತದೆ ಕಜ್ಜಾಯ ಅಂದರೆ ಹೌಹಾರುತ್ತಾರೆ. ನನ್ನನ್ನು ಸ್ವಾಗತಿಸಲು ಸಂಭ್ರಮಿಸಲು ಪಾಪ ಹಣದ ಅಡಚಣೆ ಬೇರೆ. ಪ್ರತಿಸಾರಿ ನಾನು ಹೋದಾಗ ಬ್ಯೂಟಿ ಪಾರ್ಲರಿಗೆ ಹೋಗುತ್ತೇನೆ ಅಂತ ಹೇಳಿದ್ದೆ ಅಲ್ವೇ? ಆ ಸಾರಿ ಅಂತೂ ಅವೆಲ್ಲಾ ಕದ ಮುಚ್ಚಿ ಕೂತಿದ್ದವು. ನನ್ನ ಸುಣ್ಣಬಣ್ಣ ಮಾಡಿಸ್ಕೋಬೇಕು ಅನ್ನೋ ಆಸೆಗೆ ಕಲ್ಲು ಬಿತ್ತು. ಇನ್ನು ಪಟಾಕಿಗಳ ಸದ್ದೇ ಅಡಗಿಹೋಗಿತ್ತು. ಹಿಂದಿನ ದಿನಗಳಲ್ಲಿ ಚೈನಾ ದೇಶದಿಂದ ಪಟಾಕಿ, ದೀಪ, ಧೂಪ ಇಂಥದ್ದನ್ನೆಲ್ಲಾ ತರಿಸಿಕೊಳ್ಳುತ್ತಿದ್ದರಂತೆ. ಈ ಸಾರಿ ಕರೋನ ಭೂತ ಕಳಿಸಿದ್ದು ಚೀನಾನೆ ಅಂತ ಎಲ್ಲರೂ ಆ ದೇಶದ ಮೇಲೆ ಮುಗ್ಗಿ ಬಿದ್ದಿದ್ದು ಬ್ಯಾನ್ ಮಾಡಿದ್ದರು. ಇನ್ನು

ಸೀರೆ ಒಡವೆ ಅಂತ ಹೆಣ್ಣುಮಕ್ಕಳೆಲ್ಲ ಉಟ್ಟು, ತೊಟ್ಟು, ಹೊರಗಡೆ ಓಡಾಡಕ್ಕೆ ಭಯಪಡುತ್ತಾ ಇದ್ದಿದ್ರಿಂದ ನೈಟಿ ಹಾಕ್ಕೊಂಡೇ ಮನೇಲೆ ನನ್ನ ಪೂಜೆ ಮಾಡೋದು ನೋಡಿ ನನಗೆ ತುಂಬಾ ಅಳು ಬಂತಮ್ಮ. ಕರೋನ ಹೀಗೇ ಇದ್ದರೆ ಮುಂದಿನ ವರ್ಷಕ್ಕೂ ನನಗೂ ನೈಟಿ ಹಾಕಬಹುದೇನೋ ಅನ್ನಿಸ್ತಿತ್ತು. ಕೈಯಿಂದ ಹಣ ಮುಟ್ಟಕ್ಕೂ ಹೆದರ್ತಾರೆ, ಅದಕ್ಕೂ ಅದೇನು ಸ್ಪ್ರೇ ಹೊಡೆಯುತ್ತಾರೆ ಪಾಪ. ಕರೋನ ರಾಕ್ಷಸನ ಕೊಲ್ಲೋಕೆ ಬ್ರಹ್ಮಾಸ್ತ್ರ ಹುಡುಕುತ್ತಾ ಇದ್ದಾರು" ಲಕ್ಷ್ಮಿಯ ಮಾತಿಗೆ ಮತ್ತೆ ಎಲ್ಲರೂ ನಕ್ಕರು.

"ಈಗ ಭೂಲೋಕದಲ್ಲಿ ಅಧಿಕಾರಕ್ಕಾಗಿ ಕಿತ್ತಾಟ, ಯುದ್ಧ, ಪ್ರವಾಹಗಳದೇ ದೊಡ್ಡ ಸುದ್ದಿ. ಇಂತಹ ಸಮಯದಲ್ಲಿ ಜನರಿಗೆ ಹಬ್ಬ ಮಾಡಲು ಆಸಕ್ತಿ ಇದೆಯೋ ಇಲ್ಲವೋ ಅನ್ನೋದೇ ನನಗೆ ಅನುಮಾನ ಆಗ್ತಾ ಇದೆ. ಏನಾದರೂ ಹೋಳಿಗೆ, ಕಡುಬಿನ ಔತಣವಂತೂ ಇದ್ದೇ ಇರಬಹುದು ಅಂತ ಭಾವಿಸ್ತೀನಿ" ಪಾರ್ವತಿಯು ಮಾತಿಗೆ ಮುಕ್ತಾಯ ಹಾಕಿ ಸಭೆ ವಸರ್ಜಿಸಿದಳು.

***

ತನಿ ಎರೆಯೋಣ

– ಅನ್ನಪೂರ್ಣ ಸುಬ್ಬರಾವ್

ಹುತ್ತಕ್ಕೆ ಹೋಗಿ ತನಿಯೆರೆದು ಬರುವ
ಅಮ್ಮ ಹೇಳಿದಳು ಮಗಳನ್ನು ಕೂಗಿ ....

ಹುತ್ತಕ್ಕೆ ಯಾಕಮ್ಮ ಹಾಲು ಸುರಿಯುವುದು
ಹಾಲೆಲ್ಲ ಮಣ್ಣಲ್ಲಿ ಬೆರೆತು ಹೋಗುವುದು....

ನಿಜದ ಹಾವಿಗೆ ಹಾಲು ಕುಡಿಸಲಾಗುವುದೆ
ಕಚ್ಚುವುದು ಎಂದೆಲ್ಲರು ಹೆದರಿ ಓಡದಿರುವರೆ ...

ಮನುಜನಿಗಿಂತ ದುಷ್ಟರು ಯಾರಿಹರು ಹೇಳಮ್ಮ
ಕಲ್ಲು ದೊಣ್ಣೆಗಳಿಂದ ಹೊಡೆದು ಕೊಲ್ಲುವರಲ್ಲಮ್ಮ....

ನಮಗಿಂತ ಅದಕೆ ಹೆಚ್ಚು ಭಯವಿಹುದು
ಹಾಗಾಗೇ ಹುತ್ತದಲಿ ವಾಸ ಮಾಡುವುದು....

ನಮ್ಮಮ್ಮ ನಮ್ಮತ್ತೆ ನಡೆದು ಬಂದಿರೋ ಹಾದಿ
ಸಂಪ್ರದಾಯವು ಇದನೆ ನಾನು ಪಾಲಿಸುವುದು.

ಮುಂಜಾನೆ ಎದ್ದು ಒದ್ದೆ ಮಡಿಯನ್ನುಟ್ಟು
ಹಸಿಹಾಲು ಕಾಸಿದ ತುಪ್ಪವನು ತನಿಯೆರೆದು....

ಕರಿ ಎಳ್ಳಿನ ಚಿಗಳಿ, ಹಸಿ ಅಕ್ಕಿ ತಂಬಿಟ್ಟನು
ನೆನೆಸಿದ ಹಸಿಕಡಲೆ, ಉಪ್ಪಿಲ್ಲದ ಹೆಸರನು ...

ನೈವೇದ್ಯ ಮಾಡುವೆ ಕೈ ಮುಗಿದು ಬೇಡುವೆ
ಕೈ ಕಾಲು ಕಣ್ಣು ಕಿವಿ ಊನವಿಲ್ಲದೆ ನೀಡು....

ಅಣ್ಣ ತಮ್ಮಂದಿರು ತಣ್ಣಗಿರಲಿ ಎಂದರಸಿ
ಬೆನ್ನು ತೊಳೆಯುವೆನು ನಿನ್ನ ಬೇಡುವೆನು ....

ಉಸುರಿನ ಕಡುಬು ಹಸನಾದ ಪಾಯಸವ
ಮನೆಮಂದಿ ಸೇರಿ ಹಬ್ಬದೂಟವ ಸವಿದು.

ಮರದ ಕೊಂಬೆಗೆ ಉಯ್ಯಾಲೆ ತೂಗುವುದು
ನಾರಿಯರು ನಲಿದು ಮನಸಾರೆ ಜೀಕುವುದು...

ನಾಗರ ಪಂಚಮಿ ಹಬ್ಬವನು ಮಾಡೋಣ
ಎಲ್ಲರೂ ಸೆರೋಣ ಉಯ್ಯಾಲೆ ಆಡೋಣ
ಎಲ್ಲರು ಸೇರೋಣ ಉಯ್ಯಾಲೆ ಆಡೋಣ...

***

ಜಯವರ್ಮನು ಆಳಿದ ನಾಡಿನ ಅಪ್ಸರೆಯರೊಂದಿಗೆ ಒಂದು ಸಂಜೆ

ಕಾಂಬೋಡಿಯಾದ ಅಪ್ಸರ ನೃತ್ಯ

– ಶ್ರೀಧರ ಬಾಣಾವರ

ನಾವು ಕೈಗೊಳ್ಳುವ ಹೆಚ್ಚಿನ ಪ್ರವಾಸಗಳಲ್ಲಿ ಸಮಯದ ಅಭಾವದಿಂದ ಆ ದೇಶ ಪ್ರದೇಶದ ಸಾಂಸ್ಕೃತಿಕ ವೈವಿಧ್ಯಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಹಲವೊಮ್ಮೆ ಇಂತಹ ಅವಕಾಶಗಳು ಆಕಸ್ಮಿಕವಾಗಿ ದಕ್ಕಿ, ಒಂದು ಮರೆಯಲಾಗದ ಮ್ಯಾಜಿಕಲ್ ಅನುಭವವನ್ನು ಒದಗಿಸಿಬಿಡುತ್ತವೆ. ಹೀಗೊಂದು ಮ್ಯಾಜಿಕಲ್ ಅನುಭವ ನಮಗೆ ದಕ್ಕಿದ್ದು, ನಮ್ಮ ಹಲವು ವರ್ಷಗಳ ಹಿಂದಿನ ಕಾಂಬೋಡಿಯಾ, ವಿಯೆಟ್ನಾಂ ಪ್ರವಾಸದಲ್ಲಿ. ಕಾಂಬೋಡಿಯಾದ ಸಿಯಾಮ್ ರೀಫ್ ನಲ್ಲಿನ ಅಂಕರ್ ವಾಟ್ ದೇವಾಲಯದ ಸಂಕೀರ್ಣದಲ್ಲಿ ಇನ್ನೂ ಹಾಳಾಗದೆ ಉಳಿದ ವಿಗ್ರಹಗಳ ಜೊತೆಯಲ್ಲಿ ಅನೇಕ ಅಪ್ಸರೆಯರ ಶಿಲ್ಪಕೃತಿಗಳು ಕಂಡುಬಂದವು. ನಿರ್ಜೀವ ವಿಗ್ರಹಗಳೇ ಅಲ್ಲದೆ ಆ ಸಮುಚ್ಛಯದಲ್ಲಿ ಅಪ್ಸರೆಯರ ವೇಷ ಧರಿಸಿದ ಬಾಲೆಯರ ಜೊತೆ ನಮ್ಮ ಹೆಣ್ಣು – ಸಹಪ್ರವಾಸಿಗರು, ಚಿತ್ರ ತೆಗೆಸಿಕೊಳ್ಳುವ ಅವಕಾಶ ಸಹ ಗಿಟ್ಟಿಸಿಕೊಂಡರು. ನಂತರ ನಮಗೆ ದೊರೆತ ಮಾಹಿತಿಯ ಪ್ರಕಾರ ಕಾಂಬೋಡಿಯಾ ನಾಡಿನಲ್ಲಿ ಇಂದಿಗೂ ಅಪ್ಸರ ನೃತ್ಯವೆಂಬ ಕಲಾಪ್ರಕಾರ ಪ್ರಚಲಿತವಿರುವುದು ತಿಳಿಯಿತು.

ಏಳನೇ ಶತಮಾನದಿಂದ ಆರಂಭಿಸಿ ಸುಮಾರು ಆರು ನೂರು ವರ್ಷಗಳ ಕಾಲ ಹಿಂದೂ ದೊರೆಗಳ ಆಡಳಿತದಲ್ಲಿದ್ದು, ಹಿಂದೂ ಸಂಸ್ಕೃತಿ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿ ಅಲ್ಲಿದ್ದ ಪರಿಣಾಮವಾಗಿ ದೇವಾಲಯ ಸಮಚ್ಛಯಗಳು, ಕಲಾಪ್ರಕಾರಗಳು ಅಲ್ಲಿ ಮೇಳೈಸಿದ್ದವು. ಹಿಂದೂ ದೇವತೆಗಳ ಜೊತೆ ಯಕ್ಷ ಕಿನ್ನರರು, ಗಂಧರ್ವರು, ಅಪ್ಸರೆಯರು ಮುಂತಾದ ಕಲ್ಪನೆಗಳು ಅಲ್ಲಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಳೆದಿದ್ದವು, ಈ ಸಂಸ್ಕೃತಿಯ ಒಂದು ಭಾಗವಾಗಿ ಹುಟ್ಟಿಕೊಂಡದ್ದೇ ಅಪ್ಸರ ನೃತ್ಯ.

ಕಾಂಬೋಡಿಯ ದೇಶ, ನಂತರದಲ್ಲಿ ಹಿಂದೂ ರಾಜರ ಆಳ್ವಿಕೆ ಕೊನೆಗೊಳ್ಳುವುದನ್ನು ಕಂಡು ರಾಜಕೀಯವಾಗಿ ಸಾಂಸ್ಕೃತಿಕವಾಗಿ ಅನೇಕ ಏರುಪೇರುಗಳನ್ನು ಅನುಭವಿಸಿತ್ತು. ಈ ಎಲ್ಲಾ ವಿಪ್ಲವಗಳ ನಡುವೆಯೂ ಅಪ್ಸರ ನೃತ್ಯ ಪ್ರಕಾರ ಏಳುಬೀಳುಗಳನ್ನು ಕಂಡು ಇಂದಿಗೂ ಜೀವಂತವಾಗಿ ಉಳಿದಿರುವುದು ನಮ್ಮ ಪುಣ್ಯ. ನಮ್ಮ ಪ್ರವಾಸದ ಪಟ್ಟಿಯಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ವೀಕ್ಷಿಸಲು ಅವಕಾಶವಿರಲಿಲ್ಲ. ಆದರೆ ನಾವಿದ್ದ ವಸತಿಯ ಪಕ್ಕದಲ್ಲೇ ಪ್ರತಿದಿನ ಸಂಜೆ ಈ ನೃತ್ಯ ಕಾರ್ಯಕ್ರಮವಿರುವುದನ್ನು ಗುರುತಿಸಿದ ಮೇಲೆ ಅದರ ಅನುಭವವನ್ನು ಪಡೆಯಲು ತೀರ್ಮಾನಿಸಿದೆವು. ಪ್ರವಾಸದ ಆಯೋಜಕ ನಮ್ಮ ಕೋರಿಕೆಯ ಮೇಲೆ ಇದಕ್ಕೆ ಅನುವುಮಾಡಿಕೊಟ್ಟ. ಅಲ್ಲಿ ನಾವು ಕಂಡ ಸುಮಾರು ಎರಡು ಗಂಟೆಗಳ ಪ್ರದರ್ಶನ ನಮ್ಮನ್ನು ಒಂದು ರೀತಿಯ ಮಾಯಾಲೋಕಕ್ಕೆ ಕೊಂಡೊಯ್ದಿತ್ತು.



ಈ ನೃತ್ಯದ ವೇಷಭೂಷಣಗಳು, ಮುಖ್ಯವಾಗಿ ಅಂಕರ್ ವಾಟ್ ನ ದೇವಸ್ಥಾನದಲ್ಲಿರುವ ಮಾದರಿಗಳನ್ನು ಅನುಸರಿಸಿದೆ. ತಲೆಯ ಮೇಲಿನ ಕಿರೀಟಗಳು, ಉಡುಗೆತೊಡುಗೆಗಳು, ಆಭರಣಗಳು ರಂಗದ ಬೆಳಕಿನಲ್ಲಿ ಪ್ರಜ್ವಲಿಸಿ ನೋಡುಗನಿಗೆ ಒಂದು



ವೈಭವೋಪೇತ ವಾತಾವರಣವನ್ನು ಸೃಷ್ಟಿಸುತ್ತವೆ. ಕೊರಳು, ಕಿವಿ, ಮುಂಗೈ, ತೋಳು, ಪಾದ, ಕಾಲು, ಸೊಂಟ ಎಲ್ಲ ಕಡೆ ಸಾಂಪ್ರಾದಾಯಿಕ ಆಭರಣಗಳು ಕಂಡುಬಂದವು. ಚಿನ್ನದ ಹೂಗಳು, ಮಣಿಗಳು, ರೇಷ್ಮೆ ವಸ್ತ್ರಗಳು ಅತ್ಯಂತ ಆಕರ್ಷಕ ರೀತಿಯಲ್ಲಿ ಗೋಚರವಾಗುತ್ತಿದ್ದವು.

ನೃತ್ಯ ಪ್ರದರ್ಶನದಲ್ಲಿನ ಹೆಚ್ಚಿನ ಪಾತ್ರಗಳು ಹಿಂದೂ ಹಾಗೂ ಬೌದ್ಧ ಮೈಥಾಲಜಿಯಲ್ಲಿನವೇ ಆಗಿದ್ದು. ದೇವತೆಗಳು, ರಾಕ್ಷಸರು, ಕೋತಿ ಮೊದಲಾದ ಪ್ರಾಣಿಗಳು, ಅಪ್ಸರೆಯರು, ರಾಜರಾಣಿಯರು ಎಲ್ಲರೂ ನೃತ್ಯದ ಭಾಗವಾಗಿರುತ್ತಾರೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಮುಂತಾದ ವಿಷಯಗಳನ್ನು ಆಧರಿಸಿದ ನೃತ್ಯಗಳು ಬಿಡಿಬಿಡಿಯಾಗಿ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತವೆ. ಹಿನ್ನೆಲೆ ಸಂಗೀತಕ್ಕಾಗಿ ಬೊಂಬಿನಲ್ಲಿ ಮಾಡಿದ ಕ್ಸೈಲೋಫೋನ್ ಮಾದರಿಯ ವಾದ್ಯವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಹಾಡುಗಳು, ಮಾತುಗಳು ಕನಿಷ್ಟ ಮಟ್ಟದಲ್ಲಿರುತ್ತವೆ. ಹಿನ್ನಲೆಯಲ್ಲಿ ಕಾಡು, ದೇವಾಲಯಗಳು ಆಂಕರ್ ವಾಟ್‌ನ ಪ್ರಮುಖ ಶಿಲ್ಪಗಳಾದ ಬೃಹದಾಕಾರದ ಮಾನವ ಮುಖಗಳು ಕಂಡುಬರುತ್ತವೆ. ನಟರ ಮುಖಭಾವ ಹೆಚ್ಚಾಗಿ ಪ್ರದರ್ಶಿತವಾಗುವುದು ನಮಗೆ ಕಂಡು ಬರಲಿಲ್ಲ. ಹಸ್ತಮುದ್ರೆಗಳು ನಮ್ಮ ದೇಶದ ನೃತ್ಯ ಪ್ರಕಾರಗಳಂತೆಯೇ ಪ್ರಮುಖ ಪಾತ್ರವಹಿಸುತ್ತವೆ. ನಿರ್ದಿಷ್ಟ ಅರ್ಥರೂಪಿಸುವ



ಮುದ್ರೆಗಳು ಬಳಸಲ್ಪಡುತ್ತವೆ. ಸೊಂಟ ಮತ್ತು ಕೆಳಗಿನ ಭಾಗದ ವಿವಿಧ ರೀತಿಯ ಬಾಗುವಿಕೆಯಿಂದ ವಿಶಿಷ್ಟವಾದ ಭಂಗಿಗಳು, ರೂಪುಗೊಂಡಿದ್ದು ಮನಮೋಹಕ ವಾಗಿತ್ತು. ನಮ್ಮ ಭರತನಾಟ್ಯ, ಕೂಚುಪುಡಿಗೆ ಹೋಲಿಸಿದರೆ ಈ ನೃತ್ಯ ಪ್ರಕಾರ ಸ್ವಲ್ಪ ನಿಧಾನ ಗತಿಯದು ಎನಿಸಿತು. ಸಣ್ಣ ಸಣ್ಣ ಗುಂಪುಗಳ ನೃತ್ಯಗಳೇ ಇದ್ದು ಏಕವ್ಯಕ್ತಿ ಪ್ರದರ್ಶನಕ್ಕೆ ಅವಕಾಶ ಕಂಡುಬರಲಿಲ್ಲ. ಅಂದಿನ ಪ್ರದರ್ಶನದಲ್ಲಿ ಸಾಂಪ್ರದಾಯಿಕ ವಿಷಯಾಧಾರಿತ, ಅಪ್ಸರ ಕೇಂದ್ರಿತ ನೃತ್ಯಗಳ ಜೊತೆಗೆ, ಹಿಂದಿನ ಹಾಗೂ ಈಗಿನ ಜೀವನ ಕ್ರಮವನ್ನು ಪ್ರತಿನಿಧಿಸುವ ಹಲವು ಭಾಗಗಳು, ಉದಾಹರಣೆಗೆ, ಮೀನುಗಾರ ಹಾಗೂ ಅವನ ಪ್ರಿಯೆಯೊಡನೆ ಜರುಗುವ ಪ್ರೇಮ, ಅಲ್ಲಿನ ವ್ಯವಸಾಯ, ನಾಗರಿಕ ಜೀವನದ ಭಾಗಗಳಿದ್ದು ಅದೊಂದು ಅವಿಸ್ಮರಣೀಯ ಮ್ಯಾಜಿಕಲ್ ಅನುಭವವಾಗಿ ನಮ್ಮ ಮನದಲ್ಲುಳಿದಿದೆ.

***

ಮುಕ್ತಕಗಳು

ರಹಸ್ಯ

– ಪೂರ್ಣಿಮ ಭಗವಾನ್

ಸಂಪನ್ನತೆಯ ಬಗೆಗೆ ಕೇಂದ್ರೀಕರಿಸಿ ಮನವ
ಸಂಪತ್ತು ಜೊತೆಯಾಗಿಹುದೆಂಬ ಕನಸು
ಸಂಪನ್ನಗೊಳಿಸುವುದು ಸಿರಿತನದ ಬದುಕನ್ನು
ಕಂಪನವು ಇಲ್ಲದಲೆ ನೇತ್ರತನಯೆ. //೦೧//

ಧನ್ಯವಾದವ ಹೇಳಿ ಪಡೆದಿರುವ ಎಲ್ಲದಕು
ಅನ್ಯ ಸಂಗತಿ ಬಿಡಿರಿ ಯೋಚನೆಯ ಜೊತೆಗೆ
ಮನ್ಯವನು ಮಾಡುವುದು ಅದೃಶ್ಯ ಶಕ್ತಿಯದು
ಧನ್ಯತೆಯು ಬಳಿಸಾರಿ ನೇತ್ರತನಯೆ. //೦೨//

ದಕ್ಕುವುದು ಸಂತಸವು ನಿಖರತೆಯು ಬಳಿಯಿರಲು
ಫಕ್ಕನೇ ಬಿಡಬೇಡಿ ಫಲವು ದೊರಕದಿರೆ
ಚಿಕ್ಕದೋ ದೊಡ್ಡದೋ ಗಳಿಕೆಯಲಿ ಮನವಿರಲಿ
ಹಕ್ಕಿ ಹಾರಾಟವದು ನೇತ್ರತನಯೆ. //೦೩//

ನಮ್ಮಲ್ಲಿ ವಿಶ್ವಾಸ ಅಧಿಕವಾಗಿರೆ ಒಳಿತು
ಬಿಮ್ಮನದೆ ಬಳಿಬರುವ ಖುಷಿಯ ಅನುಭವವು
ಹಮ್ಮುಬಿಮ್ಮನು ತೊಡೆವ ಸಂಪನ್ನ ಮನವಿರಲು
ಸಮ್ಮಾನ ಬೇರಿರದು ನೇತ್ರತನಯೆ. //೦೪//

ಸಫಲತೆಯು ಹೊರಗಿಲ್ಲ ಒಳಗಿಂದ ಬರಬೇಕು
ವಿಫಲತೆಯ ಮರೆತು ಹೊಸಹಾದಿ ಹುಡುಕಿ
ತಪನೆಯದು ಗುರಿಯ ಕೇಂದ್ರೀಕರಿಸಿ ಸಾಗಿರಲು
ವಿಫುಲತೆಯ ಸಂಪತ್ತು ನೇತ್ರತನಯೆ. //೦೫//

ದಾನ ಮಾಡುವ ಆಸ್ಥೆ ಆಧಿಕ್ಯ ತೋರುವುದು
ದಾನಗುಣ ತುಂಬುವುದು ಸುಖಮಯದ ಭಾವ
ಜೇನಹೊಳೆಯಂತೆ ಹರಿಯುತ ಬರುವ ಸಮೃದ್ಧಿ
ಬಾನಿನಾಚೆಗು ಕಂಪು ನೇತ್ರತನಯೆ. //೦೬//

ಕೀಲಿಕೈ ಬಳಿಯಲಿರೆ ಕದ ತೆರೆಯಲೇಕೆ ತಡ
ಆಲಿಸಿರಿ ಒಳಮನದ ಇಂಗಿತವ ಸತತ
ಪಾಲಿಸಲು ಆಕರ್ಷಣೆಯ ನಿಯಮ ಧೃಡವಾಗಿ
ಸೋಲೆಂದು ಬಳಿಬರದು ನೇತ್ರತನಯೆ. //೦೭//

ಚುಂಬಕದ ಶಕ್ತಿಯಲಿ ನಂಬುಗೆಯ ಇರಿಸುತ್ತ
ಅಂಬರದ ಏಣಿಯನು ಬರಸೆಳೆದು ಅಪ್ಪಿ
ತುಂಬಿಸಿರಿ ಆಂತರ್ಯ ಒಳಿತಿನಾ ಭಾವದಲಿ
ಬೆಂಬಲವು ಇಹುದಲ್ಲಿ ನೇತ್ರತನಯೆ. //೦೮//

ನೋಟವನು ಬದಲಿಸುವ ಚತುರತೆಯು ಮೇಳೈಸೆ
ಆಟವನು ಆಡಿದೊಲು ಒಲಿಯುವುದು ಗೆಲುವು
ಮಾಟಮಂತ್ರದ ತೆರದಿ ಕರಗತವು ಬಯಕೆಗಳು
ಪಾಟ ಕಲಿಯುವ ಸಮಯ ನೇತ್ರತನಯೆ. //೦೯//

ಖುಷಿಯಲ್ಲಿ ಭಾಗಿಗಳು ಹಲವರಿರಬಹುದಲ್ಲ
ಖುಷಿಯ ಸೂತ್ರವಡಗಿದೆ ನಿಮ್ಮ ಮನದೊಳಗೆ
ವಿಷಯಗಳ ಹರಿವಿನಲಿ ಸಂತಸವು ಅಡಗಿರಲು
ವಿಷಮಕೆಡೆ ಇನ್ನೆಲ್ಲಿ ನೇತ್ರತನಯೆ. //೧೦//

ಧ್ಯಾನವದು ಕೇಂದ್ರಿತವು ಗುಣಶೀಲತೆಯ ಮೇಲೆ
ಜ್ಞಾನವನು ಗಳಿಸುವುದು ಸುಲಭವಾಗುವುದು
ತಾನಾಗಿ ಲಭಿಸುವುದು ಹೇರಳದ ಸಂಪತ್ತು
ಮೌನವೇತಕೆ ಇನ್ನು ನೇತ್ರತನಯೆ. //೧೧//

ಪ್ಲಾಸಿಬೋ ಪರಿಣಾಮ ಬಲ್ಲವರು ವೈದ್ಯರೂ
ಆಸೆಯದು ನೆರವೇರಿ ಉಳಿಸುವರು ಜೀವ
ಮೂಸೆಯಲಿ ನಂಬುಗೆಯ ಜೀವಾಳ ತುಂಬಿರಲು
ಮೋಸವಲ್ಲವು ಅದುವೆ ನೇತ್ರತನಯೆ. //೧೨//

ಸ್ವಾಸ್ಥ್ಯದೆಡೆ ಸಂಪೂರ್ಣ ಗಮನವನು ಇರಿಸಿರಲು
ಸ್ವಸ್ಥ ಮನ ಔಷಧಕೆ ಸಹಕಾರ ನೀಡಿ
ವ್ಯಸ್ತತೆಯು ದೂರಾಗಿ ಆರೋಗ್ಯಭರಿತನವ
ಆಸ್ಥೆ ಮುಖ್ಯವು ಅಲ್ಲಿ ನೇತ್ರತನಯೆ. //೧೩//

ಬ್ರಹ್ಮಾಂಡದುತ್ಕೃಷ್ಟ ಅನುಭವದ ಸಾಕಾರ
ಬ್ರಹ್ಮಾಂಡದಾ ಹರಿವು ಮನದ ಕದ ತೆರೆಯೆ
ಬ್ರಹ್ಮಕಿರದು ಆದಿ ಅಂತ್ಯಗಳ ಸೀಮಿತವು
ಬ್ರಹ್ಮವದು ಬ್ರಹ್ಮವೇ ನೇತ್ರತನಯೆ. //೧೪//

***

ಭಾರತೀಯತೆಯ ಗರಿಮೆ

– ಶೃತಿ ಕಟ್ಟಿ

"ಉತ್ತರಂ ಯತ್ಸಮುದ್ರಶ್ಚ ಹಿಮಾದ್ರೇಶ್ಚಯಿವ ದಕ್ಷಿಣಮ್ ॥
ವರ್ಷಮ್ತದ್ಭಾರತಮ್ ನಾಮ ಭಾರತೀ ಯತ್ರ ಸಂತತಿ ॥ "

ಮೇಲೋಚ್ಚಾರಿತ ಶ್ಲೋಕದಲ್ಲಿ ತಿಳಿಸುವಂತೆ ಸಮುದ್ರದ ಉತ್ತರಕ್ಕೂ ಹಿಮವತ್ಪರ್ವತದ ದಕ್ಷಿಣಕ್ಕೂ ಇರುವ ನಾಡು ಭಾರತವರ್ಷ ಮತ್ತು ಅಲ್ಲಿ ಇರುವವರು ಭಾರತೀಯರು. ಜಗತ್ತಿನ ಅತ್ಯಂತ ಪ್ರಾಚೀನ ಸಭ್ಯತೆ, ಪ್ರಾಚೀನ ಐತಿಹಾಸಿಕ ಗರಿಮೆ ಇರುವ ಸುವರ್ಣಭೂಮಿ. ಇಲ್ಲಿನ ವೈಚಾರಿಕ ಸಮೃದ್ಧತೆ ಉಳಿದವರಿಗೆ ಹೊಟ್ಟೆಕಿಚ್ಚಿನ ವಿಷಯವಾದದ್ದು ಸರ್ವವೇದ್ಯ. ಕೆಲ ಸಾಮಾಜಿಕ ವೈಚಾರಿಕ ಕೀಳರಿಮೆಯ ರೋಗಗಳು ನಮ್ಮನ್ನು ತಾತ್ಕಾಲಿಕವಾಗಿ ಹಿಮ್ಮೆಟ್ಟಿಸಿವೆಯಾದರೂ ಮತ್ತೆ ಎದ್ದೇಳುವ ಶಕ್ತಿ ನಮ್ಮಲ್ಲಿ ಇಲ್ಲವೆಂದೇನಲ್ಲ. ಆದರೆ ಅದನ್ನು ಹನುಮಂತನಂತೆ ಮತ್ತೆ ಮತ್ತೆ ನೆನಪಿಸಲೇಬೇಕು. ಭಾರತೀಯನೆಂಬ ಗೌರವಾನ್ವಿತ ಗರಿಮೆ ತುಂಬಿಸಲೇಬೇಕು.

ಐತಿಹಾಸಿಕ ಗರಿಮೆ

ಇತಿಹಾಸದ ಮೂಲ ವ್ಯಾಖ್ಯೆಯನ್ನೇ ಕೊಟ್ಟವರು ನಾವು. ಇತಿಹಾಸಗಳು ಎಂದೇ ಪ್ರಸಿದ್ಧವಾದವುಗಳಾದ ರಾಮಾಯಣ ಮತ್ತು ಮಹಾಭಾರತಗಳ ನೈಜ ಕಾಲಗಣನೆ ಇದಮಿತ್ಥಂ ಎಂದು ಹೇಳಲಾಗಿಲ್ಲ. ಆದ್ದರಿಂದ ನಮ್ಮ ಇತಿಹಾಸ ಇಂತಿಷ್ಟು ಹಳೆಯದೆಂದು ಹೇಳಲಾಗದು. ಆದರೆ ಸಮೃದ್ಧವಾದ ಅಷ್ಟೇ ದಯನೀಯವಾದ ಇತಿಹಾಸ ನಮ್ಮದು. ಸರಸ್ವತಿ ನದಿ ನಾಗರಿಕತೆಯ ಉತ್ತಮ ನಾಗರೀ ನಿರ್ಮಾಣ, ನಾಡಿನ ಎಲ್ಲೆಡೆ ಕಾಣಸಿಗುವ ಸುಂದರ ಕೆತ್ತನೆಯ ಸ್ಮಾರಕಗಳು, ರಾಮ ಕೃಷ್ಣರಿಂದ ಹಿಡಿದು ಉದ್ಧಮಸಿಂಗರಂಥವರು ಎಲ್ಲರೂ ಎಲ್ಲವೂ ನಮ್ಮ ಇತಿಹಾಸದ ಗರಿಮೆ ಸಾರುವ ಅಣುಗಳೇ. ಇಂಥ ಇತಿಹಾಸ ಬೇರೊಬ್ಬರಿಗಿಲ್ಲ. ಇತಿಹಾಸದಿಂದ ತಿದ್ದಿಕೊಳ್ಳಬೇಕಾದದ್ದು ಸಾಮಾಜಿಕ ಏಕೋಭಾವದ ಕೊರತೆಯೊಂದು ಬಿಟ್ಟರೆ ಹೆಮ್ಮೆಪಡುವ ವಿಷಯಗಳೇ ಅಧಿಕ.

ಸಾಹಿತ್ಯಿಕ ಗರಿಮೆ

ಶ್ರುತಿ ಮತ್ತು ಸ್ಮೃತಿ ರೂಪದಲ್ಲಿ ಭಾರತದ ಸಾಹಿತ್ಯ ಕೃಷಿ ಅತಿ ಪ್ರಾಚೀನ. ಋಗ್ವೇದ ಕಾಲದಿಂದಲೂ ಭಾರತ ಕಾವ್ಯ ಮತ್ತು ಗದ್ಯದ ಬಲಿಷ್ಠ ಪರಂಪರೆಯನ್ನು ಹೊಂದಿದೆ. ಕುರುಕ್ಷೇತ್ರ ಯುದ್ಧದ ಸಚಿತ್ರ ವಿವರಣೆ ೭೪೦೦೦ಕ್ಕೂ ಹೆಚ್ಚಿನ ಸಾಲುಗಳು, ಉದ್ದನೆಯ ಗದ್ಯ ಭಾಗಗಳು ಮತ್ತು ಒಟ್ಟು ಸುಮಾರು ೧.೮ ದಶಲಕ್ಷ ಪದಗಳಿರುವ ಮಹಾಭಾರತ ವಿಶ್ವದ ಅತ್ಯಂತ ಬೃಹತ್ ಮಹಾಕಾವ್ಯ. ಭಾರತದ ಇತರ ಭಾಷಾ ವೈವಿಧ್ಯಗಳಲ್ಲಿಯೂ ಅತ್ಯಂತ ಉತ್ಕೃಷ್ಟ ಸಾಹಿತ್ಯವನ್ನು ನಾವು ಕಾಣಬಹುದು. ಇನ್ನೂ ಹೆಚ್ಚಿನ ಗರಿಮೆ ಎಂದರೆ ಸಾಹಿತ್ಯದಲ್ಲಿ ನೊಬೆಲ್ ಪಡೆದವರು ನಾವು.

ಕಲೆಯ ಗರಿಮೆ

ಭಾರತೀಯ ಕಲೆಯ ಮೂಲವನ್ನು ೩ನೇ ಸಹಸ್ರಮಾನದ ಇತಿಹಾಸಪೂರ್ವ ನೆಲೆಗಳಲ್ಲಿ ಗುರುತಿಸಬಹುದು. ಕಲೆಗಳೆಂದರೆ ವರ್ಣಚಿತ್ರಗಳು, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ನೃತ್ಯ, ಭಾಷೆಗಳು ಮತ್ತು ಸಿನಿಮಾವನ್ನು ಉಲ್ಲೇಖಿಸಬಹುದು. ಎಲ್ಲ ಪ್ರಮುಖ ರಾಜರುಗಳು ಕಲೆ ಮತ್ತು ಸಾಹಿತ್ಯವನ್ನು ತಮ್ಮ ಪ್ರಜೆಗಳಂತೆಯೇ ಪ್ರೋತ್ಸಾಹಿಸಿ ಸಲುಹಿದರು. ಚಿತ್ರಕಲೆಯಲ್ಲಿ ರಾಜಾ ರವಿವರ್ಮ, ವಾಸ್ತುಶಿಲ್ಪದಲ್ಲಿ ಜಕ್ಕಣ, ಸಂಗೀತದಲ್ಲಿ ತಾನಸೇನ್, ಭೀಮಸೇನ ಜೋಶಿ ಇತ್ಯಾದಿ ಹೀಗೆ ಗರ್ವಪಡಲು ಸಾವಿರ ಕಾರಣಗಳುಂಟು.

ಇವನ್ನೂ ಮತ್ತು ಇನ್ನೂ ಅನೇಕ ಭಾವಗಳನ್ನು ಇಲ್ಲಿ ಒಬ್ಬ ಕವಿಯ ಕವನದಲ್ಲಿ ಅಸ್ವಾದಿಸುವ :

ಕವಿ ಜಾನಕಿರಾಮರ ಕವನ ''ಭಾರತಿ''

ನಿಧಿಧ್ಯಾಸ್ಯಮುನಿಮಾಶ್ರಿತ ಫಲದೇ ನೈಕರೂಪ ಪೂಜನ ಸಹನಿ
ಛಂದಕ ಛಂದನ ಲೀಲಾ ಸಾಕ್ಷಿನ್ ಛಂದಸ್ಫಂದಿತ ನದ ವಹನಿ
ನತಕಂಧರ ಜನ ಪಾಲಿತವನ್ತೆ ಸದಾ ಹರ್ಷದಾ ದಯಶೀಲೆ ॥

ಸದಾ ಅಧ್ಯಯನದಲ್ಲಿ ಮುಳುಗಿದ ಮುನಿಗಳು ಇರುವ ಈ ನಾಡಲ್ಲಿ ಅನೇಕ ರೂಪಗಳಲ್ಲಿ ಪೂಜೆ ಮಾಡಲಾಗುತ್ತದೆ ಮತ್ತು ಅದನ್ನು ಸಹಿಸಿಕೊಳ್ಳಲಾಗುತ್ತದೆ. ಇಲ್ಲಿ ಧರ್ಮ ಸಹಿಷ್ಣುತೆಯ ಪರಂಪರೆಯಿದೆ. ಇಲ್ಲಿ ಜಾಬಾಲಿಯಂಥ ನಾಸ್ತಿಕರ ಇತಿಹಾಸವೂ ಇದೆ. ದೇವರ ಲೀಲೆಗಳಿಗೆ ಸಾಕ್ಷಿಯಾದ ಭೂಮಿ ಇದು. ರಾಮ ಹನುಮ ಕೃಷ್ಣರನ್ನು ಪಡೆದು ಸಲುಹಿದ ಸ್ವರ್ಗವಿದು. ಛಂದಸ್ಫುರಿತ ಕಾವ್ಯಗಳ ಭೂಮಿ ಅಲ್ಲದೇ ಕಾಲ ಕಾಲಕ್ಕೆ ಶಿರಬಾಗಿ ಬಂದವರ ಪಾಲನಹಾರಿ ನಾಡು ಭಾರತ ಎಂದು ಗರಿಮೆಯನ್ನು ಇಲ್ಲಿ ತಿಳಿಸುತ್ತಾರೆ.

ಹರಿತಾವೃತ ವನ-ಕಾನನ ವಸನೆ ಗಂಗಾ-ಸೈಂಧವ ಜಲಜನನಿ
ಹಿಮಮಯ ಶೀತಲ ಮುಕುಟ ಧಾರಿಣಿ ನಾನಾವಿಧ ವಾಙ್ಮಯ ವಚನಿ
ನಯನ ಮನೋಹರ ಶಿಲ್ಪಕಲಾನಿಧಿ ಶಾಂತಪ್ರಸನ್ನೆ ಬಲಶೀಲೆ ॥

ಉತ್ತಮ ಮಟ್ಟದ ಕಾಡಿನ ಸೌಂದರ್ಯ ಹೊಂದಿದ ಹರಿತ ಭೂಮಿ ಭಾರತ. ಗಂಗಾ ಮತ್ತು ಸಿಂಧೂ ನದಿಗಳ ಉಗಮ ಭೂಮಿಯೂ ಭಾರತವೇ. ಹಿಮಮಯವಾದ ಹಿಮಾಲಯವನ್ನು ಮುಕುಟದಂತೆ ಧರಿಸಿದ ಮಾತೆಯೂ ಎಷ್ಟೊಂದು ರೀತಿಯ ವಾಙ್ಮಯ ಹೊಂದಿದವಳು ಎಂದು ಹೇಳಲಸದಳ. ಬೇಲೂರು ಹಳೇಬೀಡು ಅಜಂತಾ ಎಲಿಫೆಂಟಾ ಇಂಥ ಅನೇಕ ಕಡೆಗಳಲ್ಲಿ ನಯನ ಮನೋಹರ ಶಿಲ್ಪ ಕಲೆಯನ್ನು ನಾವು ಕಾಣಬಹುದು. ಇಂಥ ಭಾರತಿಯು ಶಾಂತಿಪ್ರಿಯಳಾದರೂ ಬಲಶೀಲಳು.

ನಡುವಳಿಕೆಯ ಗರಿಮೆ

ಸಹಿಷ್ಣುತೆ, ಸೌಮ್ಯ ನಡವಳಿಕೆ, ಆಳವಾದ ಆಶಾವಾದ ಮತ್ತು ಸಮಯದ ಗೀಳಿನ ಕೊರತೆ ಭಾರತೀಯ ಮನಸ್ಥಿತಿ ಮತ್ತು ನಡವಳಿಕೆಯ ಮುಖ್ಯ ಲಕ್ಷಣಗಳಾಗಿವೆ. ಇಂಥ ಸಹಿಷ್ಣು ನಡುವಳಿಕೆಯ ಹಿರಿತನ ಬೇರೆ ದೇಶಗಳಲ್ಲಿ ಕಾಣಸಿಗದು.

"ಯಾವ ಆಕಾಶದ ಕೆಳಗೆ ಮಾನವನ ಮನಸ್ಸು ತನ್ನ ಅತ್ಯುತ್ತಮವಾದ ಕೆಲವು ಉಡುಗೊರೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದೆ, ಜೀವನದ ದೊಡ್ಡ ಸಮಸ್ಯೆಗಳ ಬಗ್ಗೆ ಹೆಚ್ಚು ಆಳವಾಗಿ ಯೋಚಿಸಿದೆ ಮತ್ತು ಪರಿಹಾರಗಳನ್ನು ಕಂಡುಕೊಂಡಿದೆ ಎಂದು ನನ್ನನ್ನು ಕೇಳಿದರೆ, ನಾನು ಭಾರತವನ್ನು ತೋರಿಸಬೇಕು." -ಮ್ಯಾಕ್ಸ್ ಮುಲ್ಲರ್.

ಇಂಥ ಭಾರತವು ಇಂದು ೭%ಕ್ಕಿಂತ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ಇಲ್ಲಿಯವರೆಗೆ, ಕಣ್ಣರಳಿಸಿ ನೋಡುವಂಥ ಸಾಧನೆ ಭಾರತದಲ್ಲಿ ಇಂದು ಕಾಣುತ್ತಿದ್ದೇವೆ. ಆದರೆ ಭಾರತವು ಶ್ರೇಷ್ಠವಾಗಿ ಉಳಿಯುವುದು ಮಾತ್ರವಲ್ಲದೆ ಇನ್ನೂ ಹೆಚ್ಚಿನ ಶ್ರೇಷ್ಠತೆಯನ್ನು ಪಡೆಯುವುದು ಹೇಗೆ ಎಂಬುದು ಪ್ರಶ್ನೆ. ಭಾರತದ ಶ್ರೇಷ್ಠತೆಯ ವೇಗವನ್ನು ಉಳಿಸಿಕೊಳ್ಳುವ ಏಕೈಕ ವಿಷಯವೆಂದರೆ ಜನರ ಏಕತೆ ಮತ್ತು ರಾಷ್ಟ್ರದ ಬದ್ಧತೆ. ಆ ಗರಿಮೆಯ ಗರಿಯನ್ನು ಸದಾ ಶಿರಸಿಧಾರಣ ಮಾಡಿ ಮೆರೆಸೋಣ.

ಜೈ ಭಾರತಿ

***

ವಿಭಿನ್ನ ನೋಟ

– ರೇಣುಕಾ ದೇಸಾಯಿ

'ಮಾವಿನ ಹಣ್ಣೋ, ಮಾವನ ಹೇಣ್ಣೋ...' ನಾಟಕ ವರ್ಲ್ಡ್ ಫೇಮಸ್ @ ಸಸಕಸ ವೇದಿಕೆಯಾಗಿರುವುದು ನಿಮಗೆಲ್ಲಾ ಗೊತ್ತು, ಅದರಲ್ಲಿ ನಾವುಗಳು ಮಾಡಿದ ಹುಡುಗಾಟದ ಬಗೆಗೆ ನಾನೀಗ ಹೇಳಹೊರಟಿಲ್ಲ. ಆದರೆ ಆ ನಾಟಕ ನೋಡಿದವರಿಗೆಲ್ಲ ಅದು ಯಾಕೆ ಖುಷಿ ಕೊಟ್ಟಿತು? ಮತ್ತೊಮ್ಮೆ ಎಸ್ ಬಿ ಐ ಆಫೀಸರ್ಸ್ ಕಾಲೋನಿ, ಬಸವೇಶ್ವರ ನಗರದಲ್ಲಿ ನೂರಾರು ಸಹೋದ್ಯೋಗಿಗಳ ಮತ್ತು ಕುಟುಂಬವರ್ಗದ ಮುಂದೆ ಮರುಪ್ರದರ್ಶನಗೊಂಡಾಗ ಅವರೆಲ್ಲ ಆನಂದಿಸಿದ ರೀತಿ ನೋಡಿ ನಾಟಕದ ಬಗೆಗೆ ಪ್ರೇಕ್ಷಕರ ವಿಭಿನ್ನ ನೋಟ ಹೇಗಿರುತ್ತೆ? ಜನತೆಗೆ ಯಾವುದು ಖುಷಿ ಕೊಡುತ್ತದೆ, ಬಾಲ್ಯವಾ, ಇಲ್ಲ ನಿತ್ಯಜೀವನದಲ್ಲಿ ನಡೆಯುವ ಸಣ್ಣಸಣ್ಣ ಘಟನೆಗಳನ್ನು ಪೂರ್ತಿ ಕುಟುಂಬ ಸೇರಿ ಸಂತಸಪಟ್ಟರೆ ಅದೆಷ್ಟು ಸಡಗರ ಅಲ್ಲಿ ಪ್ರತಿಫಲಿಸುತ್ತದೆ ಎನ್ನುವ ಸಂದೇಶವಾ?

ಸರಿ, 'ಎಚ್ಚೆಸ್ಕೆ ಬೆಳಕು-9' –ಒಂದು ದಿನದ ಕಾರ್ಯಕ್ರಮಕ್ಕೆ ಏನಾದರೂ ಹೊಸ ಮೆರಗು ಕೊಡಬೇಕು, ವೇದಿಕೆ ಹೊಸ ಹೊಸ ಸಾಹಿತ್ಯಿಕ ಚಟುವಟಿಕೆಯಿಂದ ನಳನಳಿಸಬೇಕೆಂದು ಸದಾ ಚಿಂತಿಸುವ ಬೆಂ.ಶ್ರೀ.ರವೀಂದ್ರ ಮತ್ತು ಸಂಚಾಲಕ ಸಮಿತಿಯ ಆಶಯದಂತೆ ಈ ಸಲ ನಾಟಕವಾಡುವುದು ಎಂದು ನಿರ್ಧರಿಸಲಾಯಿತು. ಅದರ ಪೂರ್ತಿ ಜವಾಬ್ದಾರಿ ಧೀರೇಂದ್ರರ ಹೆಗಲೇರಿತು. ಧೀರೇಂದ್ರರೆಂದರೆ ದಕ್ಷತೆ, ಕುಶಲತೆ, ವೃತ್ತಿಪರತೆ. ಅವರ ಈ ಗುಣಗಳನ್ನು ನಾಟಕದ ತಾಲೀಮಿನಿಂದ ಹಿಡಿದು ಎರಡೆರಡು ಪ್ರದರ್ಶನದವರೆಗೂ ಕಂಡಿದ್ದೇನೆ. ಅವರು ನಾಟಕ ಇನ್ನೂ ಹೊಸತನದಿಂದ ಕೂಡಿರಲಿ, ಹೇಗೂ ಎಚ್ಚೆಸ್ಕೆ ಅವರ ಸ್ಮರಣೆಯ ಕಾರ್ಯಕ್ರಮ, ಅವರ ಕೃತಿಗಳೇ ರಂಗದ ಮೇಲೆ ವಿಜೃಂಭಿಸಲಿ ಎಂದುಕೊಂಡರು. ಇಲ್ಲಿ ಇನ್ನೂ ಒಂದು ಕುತೂಹಲ. ಎಚ್ಚೆಸ್ಕೆ ಅವರು ನಾಟಕಗಳನ್ನು ಬರೆದಿದ್ದಾರೆ. ಆದರೆ ಅವನ್ನೆಲ್ಲ ಪಕ್ಕಕ್ಕಿಟ್ಟು, ಅವರ ಲೇಖನಗಳೆರಡನ್ನು ನಾಟಕಕ್ಕೆ ರೂಪಾಂತರಿಸಬೇಕು ಎನ್ನುವ ಹೊಸ ವಿಚಾರ ಧೀರೇಂದ್ರರಿಗೆ ಹೊಳೆದು, ಎಚ್ಚೆಸ್ಕೆಯವರ ಲೇಖನಗಳನ್ನು ನಾಟಕವನ್ನಾಗಿ ಪರಿವರ್ತಿಸಿದರು. ಏಕವ್ಯಕ್ತಿಯ ಸ್ವಗತವನ್ನು ಪಾತ್ರಗಳಾಗಿ ವಿಂಗಡಿಸಿ, ಪಾತ್ರಗಳನ್ನು ಸೃಷ್ಟಿಸಿ ಹೊಸತನ ಮೆರೆದದ್ದು ಒಂದು ದಾಖಲೆ.



ಸರಿ, ಧೀರೇಂದ್ರರು ನಮ್ಮನ್ನು ತಮ್ಮ ಮನೆಗೆ ಕರೆದರು, ಪಾತ್ರ ಹಂಚಿದರು. ನನಗೆ ಎರಡು ನಾಟಕಗಳಲ್ಲೂ ಪಾತ್ರವಿತ್ತು. ಒಂದೆಡೆ ನಾಟಕದಲ್ಲಿ ಅಭಿನಯಿಸುತ್ತೇನೆ ಎನ್ನುವ ಹಿಗ್ಗಿದ್ದರೂ ಭಯವೇ ಜಾಸ್ತಿ, ಕಾರಣ ರಂಗದಿಗ್ಗಜರ ಜೊತೆ ನಾಟಕ ಮಾಡುವ, ಮೊದಲನೇ ಸಲ ಅಭಿನಯಿಸುವ ಭಯ ಬೇರೆ. ಎಲ್ಲರ ಕೈಯಲ್ಲೂ ನಾಟಕದ ಸ್ಕ್ರಿಪ್ಟ್. ನಾಟಕದ ತಾಲೀಮು ಪ್ರಾರಂಭ ವಾಯಿತು. ಎರಡು ನಾಟಕಗಳನ್ನೂ ಒಟ್ಟಿಗೇ ಮಾಡುತ್ತಿದ್ದೆವು 'ಖುಕ್ಕಮ್ಮನ ಸಮೇಸಾರ'ವೇನೋ ಒಂದಿಷ್ಟು ಕನ್ನಡ ವರ್ಣಮಾಲೆಯ ಕಣ್ಮರೆಯ ಬಗೆಗೆ ಹೇಳುತ್ತದೆ. ಅದೇನೋ ಸರಿ, ಆದರೆ ಈ 'ಮಾವಿನ ಹಣ್ಣೋ...' ನಾಟಕ ಏನು ಹೇಳುತ್ತದೆ ಎನ್ನುವ ಪ್ರಶ್ನೆ ಸದಾ ನನಗೆ.

ಹೀಗೆ ಒಂದು ದಿನ ನಾಟಕದ ತಾಲೀಮು ನಡೆಯುತ್ತಿರುವಾಗ ದೊಡ್ಡವರ ಪಾತ್ರದವರು ಉದ್ದುದ್ದ ಸಂಭಾಷಣೆಯಲ್ಲಿ ನಿರತರಾಗಿದ್ದಾಗ ನಾವು ಚಿಕ್ಕವರ ಪಾತ್ರಧಾರಿಗಳು ಹಿಂದೆ ಕುಳಿತು ಮಾವಿನ ಹಣ್ಣು ಮೆಲ್ಲುವುದು, ಕಿತ್ತಾಡುವವದಷ್ಟೇ ಕೆಲಸ, ಆವಾಗಲೇ ನಾಟಕ ರಂಗದಲ್ಲಿ ನಟನಾಗಿ ಹೆಸರು ಮಾಡಿದ ಸತೀಶ್ ತುಂಗ ಮತ್ತು ನಾಟಕ ಬರೆದು ನಾಟಕ ಮಾಡಿಸಿದ



ಸಕಲಕಲಾವಲ್ಲಭ ಗುರುರಾಜ ಶಾಸ್ತ್ರಿಯವರ ಎದುರಿಗೆ ಕೇಳಿಯೇಬಿಟ್ಟೆ, “ಈ ನಾಟಕದಲ್ಲಿ ಅಂತದ್ದೇನಿದೆ?” ಅದಕ್ಕೆ ಅವರು ಅಷ್ಟೇ ಕುಶಾಲಿಯಿಂದ “ಏನೂ ಇಲ್ಲ. ಪ್ರೇಕ್ಷಕರು, ನಾವು ಮಾವಿನ ಮರಕ್ಕೆ ಎಸೆದು ಬಿಟ್ಟ ಕಲ್ಲನ್ನು ನಮಗೆ ಎಸೆಯುತ್ತಾರೆ” ಎಂದು ನಕ್ಕರು. ಹಾಗಿದ್ರೆ ಧೀರೇಂದ್ರ ಅವರಿಗೆ ಹೇಳಿ ಬೇರೆ ವಿಷಯಾಧಾರಿತ ನಾಟಕ ಮಾಡೋಣ ಎಂದೆ. “ಇಲ್ಲಪ್ಪ ಧೀರೇಂದ್ರರಿಗಾಗಲಿ, ರವೀಂದ್ರರಿಗಾಗಲಿ ಯಾರು ಹೇಳುತ್ತಾರೆ” ಎಂದು ಭಯಪಡುವವರಂತೆ ಹೇಳಿದರು.

ಒಂದು ದಿನ ರವೀಂದ್ರ ಅವರು ನಮ್ಮ ನಾಟಕದ ತಾಲೀಮು ನೋಡಲು ಬಂದರು, ಪ್ರೇಕ್ಷಕರಾಗಿ ಕುಳಿತಿದ್ದರು. ಪಕ್ಕದಲ್ಲಿ ಧೀರೇಂದ್ರ ಅವರೂ ಕುಳಿತಿದ್ದರು. ನಮ್ಮ ನಾಟಕ ‘ಖುಕ್ಕಮ್ಮನ ಸಮೇಸಾರ’ ತಾಲೀಮು ಮುಗೀತು, ಆಗ ನಾನು ಧೈರ್ಯಮಾಡಿ ಇಬ್ಬರನ್ನೂ ಕೇಳಿಯೇಬಿಟ್ಟೆ, “ಖುಕ್ಕಮ್ಮನ.. ಸಮಾಚಾರವೇನೋ ಸರಿ, ಈ ಮಾವಿನ ಹಣ್ಣೋ... ಏನು ಸಂದೇಶ ಕೊಡುತ್ತದೆ, ಯಾಕೆ ಆ ನಾಟಕ ಆಡಬೇಕು?” ಆಗ ತಕ್ಷಣ ಇಬ್ಬರೂ ಒಕ್ಕೊರಲಿನಿಂದ ಹೇಳಿದರು, “ಇಲ್ಲ... ಇಲ್ಲ, ಆಗಿನ ದಿನಗಳಲ್ಲಿ ಸಣ್ಣ ಸಣ್ಣ ವಿಷಯಗಳನ್ನು ನಿತ್ಯ ಜೀವನದಲ್ಲಿ ಹೇಗೆ ಸಂಭ್ರಮಿಸುತ್ತಿದ್ದರು. ಒಂದು ಮಾವಿನ ಹಣ್ಣನ್ನು ಗೋರಿಗೋರಿ ತಿಂದರೆ ಅದರಲ್ಲಿರುವ ಮಜಾ, ಖುಷಿ ಈಗ ಊಟದ ಮೇಜಿನ ಮೇಲಿರುವ ಬುಟ್ಟಿಯ ತುಂಬಾ ಹಣ್ಣಿದ್ದರೂ ಬರುವುದಿಲ್ಲ ಯಾಕೆ? ಇದು ಒಂದು ಪರಿಣಾಮಕಾರಿ ಸಂದೇಶ ಹಾಗೂ ಆಗಿನ ಬಾಲಕರ, ದೊಡ್ಡವರ, ಒತ್ತಡವಿಲ್ಲದ ಜೀವನಶೈಲಿ ಎಲ್ಲಾ ಹೇಳುತ್ತೆ ಈ ನಾಟಕ”. ಆಮೇಲಷ್ಟೇ ನನಗೂ ಈ ನಾಟಕದಲ್ಲಿ ವಿಶೇಷತೆ ಕಾಣತೊಡಗಿತು. “ಅತ್ಯುತ್ತಮವಾದ ನಮ್ಮ ಬಾಲ್ಯದ ನಿತ್ಯಜೀವನವು ಪ್ರತಿಬಿಂಬಿಸುವಂತೆ ನಟನೆ ಮಾಡಿದರೆ ಸೈ” ಎಂದರು. ನನಗೂ ಹಿಗ್ಗಾಯ್ತು.

ಈ ನಾಟಕಗಳು ಪ್ರದರ್ಶನಗೊಂಡ ಎರಡೂಕಡೆ ಎಲ್ಲರ ಚಪ್ಪಾಳೆ ಗಿಟ್ಟಿಸಿದೆ. ಚಿಕ್ಕಪ್ಪನೆಂದಾಗ “ಹೊಟ್ಟೆ ತುಂಬಾ ತಿಂಡಿ ಕತ್ತರಿಸಿದ ಮೇಲೂ ಈ ಹುಡುಗರು ಸಿಕ್ಕ ಎಲ್ಲಾ ಹೂವು, ಹೀಚು, ಪೀಚು ಕಾಯಿ ಕಿತ್ತು ಧ್ವಂಸ ಮಾಡುತ್ತಾರೆ ಎಂದು ಬೈಯುತ್ತಾ ಮನೆಯ ದೊಡ್ಡವರು ಬಂದರೆ ನಾವು ತಪ್ಪಿಸಿ ಪರಾರಿ. ಪಾಪ ಅವರಾದರೂ ಏನು ಮಾಡಿಯಾರು? ಅವರ ಮನೆ ಮಕ್ಕಳು ನಮ್ಮ ಗುಂಪಿನಲ್ಲಿ ಇರುತ್ತಿದ್ದರಲ್ಲಾ?” ಎಂದು ಹೇಳಿದಾಗ ಜನ ಸ್ಪಂದಿಸಿದ ರೀತಿ. ಅಪ್ಪ, ಚಿಕ್ಕಪ್ಪರ ಸಂಭಾಷಣೆಯಲ್ಲಿ ಅವರ ಬಾಲ್ಯ, ಹಳ್ಳಿ ಚಿತ್ರಣ, ತರಾವರಿ ಹಣ್ಣುಗಳ ಹುಡುಕಾಟ, ಚಳ್ಳೆಹಣ್ಣು ತಿನ್ನಿಸಿ ಗಸ್ತು ಬೀಳಿಸುವುದು, ಅದರಲ್ಲೂ ರಾಮಸ್ವಾಮಿ ಅವರಂತೂ ನಟ ಭಯಂಕರರು!! ಓ!! ಅನೇಕ ಜಾತಿಯ ಮಾವಿನ ಹಣ್ಣಿನ ಹೆಸರನ್ನು ಹೇಳುತ್ತಿದ್ದರೆ, ಪ್ರೇಕ್ಷಕರಿಂದ ಚಪ್ಪಾಳೆ, ಬಾಯಲ್ಲಿ ಬರುತ್ತಿರುವ ನೀರು!! ಜೊತೆಗೆ ಅಮ್ಮ ಮಾವಿನ ಹಣ್ಣು ಮತ್ತು ಕಾಯಿಯ ತರಾವರಿ ತಿನಿಸು ಪಟ್ಟಿ ಮಾಡುತ್ತಿದ್ದರೆ, ಜನ ಅದಕ್ಕೆ ತಮ್ಮ ಎರಡು ತಿನಿಸು ಸೇರಿಸಿ ನಾಟಕದೊಂದಿಗೆ ಭಾಗಿಯಾಗಿದ್ದು. ಅಪ್ಪ ನಾಟಕದ ಕೊನೆಯಲ್ಲಿ ನಿಮಗೆ ಮಾವಿನ ಹಣ್ಣು ಇಷ್ಟಾನೋ? ಮಾವನ ಹೆಣ್ಣು ಇಷ್ಟಾನೋ? ಎಂದು ಪರಿಣಾಮಕಾರಿ ಪ್ರಶ್ನೆ ಹಾಕಿದಾಗ ಪ್ರೇಕ್ಷಕರು ಮೋಜಿಗಾಗಿ ಮಾವನ ಹೆಣ್ಣು ಎಂದು ಕೂಗಿ ಆನಂದಿಸಿದ್ದು, ಅದರಲ್ಲೂ ನಾವು ಮೂವರು ಚಿಕ್ಕವರ ಪಾತ್ರದಲ್ಲಿ ಹಣ್ಣಿಗಾಗಿ ಮಾಡಿದ ನಮ್ಮ ಎಲ್ಲಾ ಕಸರತ್ತು ತುಂಟತನದಿಂದ ಕೂಡಿತ್ತು ಎನ್ನುವ ಅನಿಸಿಕೆ, ಎಲ್ಲಾ ಹಿಗ್ಗೋ ಹಿಗ್ಗು. ಅಂದು ಅವರಿಬ್ಬರು ಇಂದ್ರರು ಹೇಳಿದ ಮಾತು ನೂರಕ್ಕೆ ನೂರರಷ್ಟು ಸತ್ಯ ಅನ್ನಿಸಿತು. ಪ್ರೇಕ್ಷಕರು ತಮ್ಮ ಬಾಲ್ಯಕ್ಕೆ ಮರಳಿದರು, ಹಳ್ಳಿಯ ಮನೆಯಲ್ಲಿ ಅಪ್ಪ-ಅಮ್ಮ, ಅಜ್ಜ-ಅಜ್ಜಿ, ಚಿಕ್ಕಪ್ಪ-ಚಿಕ್ಕಮ್ಮ ಅವರೊಂದಿಗೆ ಸೇರಿ ಸವಿದ ನೆನಪುಗಳನ್ನು ಸ್ಮರಿಸಿ ಸಂತಸದಿಂದ ಸ್ಪಂದಿಸಿದರು, ಚಪ್ಪಾಳೆ ತಟ್ಟಿದರು, ನಾಟಕ ಗೆದ್ದಿತು, ಧೀರೇಂದ್ರರಿಗೆ ಫಲಕ ದೊರೆಯಿತು.

***

ಲಲಿತ ಪ್ರಬಂಧ

ಒತ್ತಡವಿರಬೇಕು

– ಶೀಲಾ ಅರಕಲಗೂಡು

ಒತ್ತಡವಿರಬೇಕು ಬದುಕಲಿ
ಒತ್ತಡವಿರಬೇಕು
ಒಳಗಿನ ಚೇತನ ಬಡಿದೆಬ್ಬಿಸಲು
ಒತ್ತಡವಿರಬೇಕು ಬದುಕಲಿ
ಒತ್ತಡವಿರಬೇಕು
ಕಾರಂಜಿಯ ಪರಿ ನೀರದು ಚಿಮ್ಮಲು
ಒತ್ತಡವಿರಬೇಕು ಭೂಮಿಗು
ಒತ್ತಡವಿರಬೇಕು
ಒತ್ತಡವಿರಬೇಕು ಇರದಿರೆ
ಬಾಯ್ ಬಾಯ್ ಬಿಡಬೇಕು

ಒತ್ತಡ ಬೇಕು, ಒತ್ತಡ ಬೇಕು ಅಂತ ಹೀಗೆ ಹಾಡ್ತಿದ್ದೀನಲ್ಲ, 'ಯಾರಾದ್ರೂ ತಲೆ ಇರೋರು ಹೀಗೆಲ್ಲಾ ಒತ್ತಡ ಬೇಕು ಅಂತ ಹೇಳ್ತಾರ್ಯೇ? ಇನ್ನೂ, ಬಿಟ್ಟಿ ಭಾಗ್ಯ ಬೇಕು ಅಂದ್ರೆ ಸರಿ, ಒಳ್ಳೆ ಭೋಜನ ಬೇಕು ಅಂದ್ರೆ ಸರಿ, ಐಶ್ವರ್ಯ ಬೇಕು ಅಂದ್ರೂ ಸರಿ, ಜೊತೆಗೆ ಉತ್ತಮ ಆರೋಗ್ಯ. ವಿದ್ಯೆ, ಬುದ್ಧಿ ಇವೆಲ್ಲ ಬೇಕು ಅಂದ್ರೆ ಸರಿಯಪ್ಪ. ಆದ್ರೆ ಇದೇನಿದು ಒತ್ತಡ ಬೇಕು ಅನ್ನುವಂಥದ್ದು? ಯಾಕೋ ಸರಿಯಾಗಿ ಮಾತಾಡ್ತಿಲ್ಲ' ಅಂತೀರಾ? ನಾನು ಹೇಳೋದನ್ನು ಸ್ವಲ್ಪ ಸರಿಯಾಗಿ ಕೇಳಿಸ್ಕೊಳ್ಳಿ. ಒತ್ತಡ ಅದೇಕೆ ಬೇಕು ಅನ್ನೋದನ್ನ ಸ್ವಲ್ಪ ವಿಚಾರ ಮಾಡೋಣ ಬನ್ನಿ.

ಒತ್ತಡದಲ್ಲಿ ಎರಡು ಬಗೆ ಇದೆಯಂತೆ. ಆಂಗ್ಲ ಭಾಷೆಯಲ್ಲೇನೋ ಅವನ್ನು ಡಿಸ್ಟ್ರೆಸ್ (Distress) ಹಾಗೂ ಯೂಸ್ಟ್ರೆಸ್ (Eustress) ಅಂತಾರೆ. ಕನ್ನಡದಲ್ಲಿ ನಾವು ಅದನ್ನು ಕ್ರಮವಾಗಿ ಋಣಾತ್ಮಕ ಒತ್ತಡ ಹಾಗೂ ಧನಾತ್ಮಕ ಒತ್ತಡ ಎನ್ನಬಹುದು. ನಾನೀಗ ಮಾತಾಡ್ತಾ ಇರೋದು ಧನಾತ್ಮಕ ಒತ್ತಡದ ಬಗ್ಗೆ.

ಒತ್ತಡವೇ ಇಲ್ಲದೆ ಬದುಕುತ್ತಿರುವ ಒಬ್ಬರಾದರೂ ವ್ಯಕ್ತಿ ಈ ಪ್ರಪಂಚದಲ್ಲಿ ಸಿಕ್ತಾರಾ ನೀವೇ ಹೇಳಿ? ಖಂಡಿತ ಇಲ್ಲ. ಸಾವಿಲ್ಲದ ಮನೆಯ ಸಾಸಿವೆಯ ಹುಡುಕುವಂತೆ ಅದು. ಅಂದ್ರೆ, ಬದುಕಿರುವ ಪ್ರತಿ ವ್ಯಕ್ತಿಯೂ, ಮಕ್ಕಳಿಂದ ಹಿಡಿದು ಮುದುಕರವರೆಗೆ, ಎಲ್ಲರೂ ಒಂದಲ್ಲ ಒಂದು ಒತ್ತಡದಿಂದ ಬದುಕುತ್ತಿರುತ್ತಾರೆ. ಆದರೆ ಅದು ಎಂಥ ಒತ್ತಡ ಅನ್ನೋದು ಮುಖ್ಯ. ಋಣಾತ್ಮಕ ಒತ್ತಡಗಳು ಮನುಷ್ಯನ ಸೃಜನಾತ್ಮಕ ಶಕ್ತಿಯನ್ನು ಹೊಸಕಿ ಹಾಕಿದರೆ ತನ್ಮೂಲಕ ಬದುಕೇ ಹಾಳಾಗಬಹುದು. ಆದರೆ ಧನಾತ್ಮಕ ಒತ್ತಡ ಮನುಷ್ಯನ ಸೃಜನಾತ್ಮಕ ಶಕ್ತಿಯನ್ನು ಬಡಿದೆಬ್ಬಿಸಿ ಆತನನ್ನು ಕಾರ್ಯೋನ್ಮುಖವಾಗಿ ಮಾಡುತ್ತದೆ ಮತ್ತು ಅದು ಒಂದು ರೀತಿಯ ಸಾರ್ಥಕತೆಯನ್ನು ಬದುಕಿಗೆ ತಂದುಕೊಡುತ್ತದೆ.

ಕೊರೊನಾ ಕಾಲದಲ್ಲಿ ಲಾಕ್‌ಡೌನ್ ಆಯ್ತಲ್ಲ, ಆಗ ಮನೆಯಲ್ಲಿ ನಾನಂತೂ ಖಾಲಿ ಖಾಲಿ ಕುಳಿತಿದ್ದೆ. ರಿಟೈರ್ಡ್ ಕೂಡಾ ಆಗಿದ್ದೆ. ಆಗಂತೂ ಮನೆಯಿಂದ ಆಚೆ ಹೋಗುವ ಹಾಗೂ ಇರಲಿಲ್ಲ. ಯಾವ ಒತ್ತಡವೂ ಇಲ್ಲದೆ ಅದೇ ಒಂದು ಋಣಾತ್ಮಕ ಒತ್ತಡವೆನಿಸಿ ಬೇಸರವೆನಿಸುತ್ತಿತ್ತು. ಸದ್ಯ ಆಗ ಈ ಟೆಕ್ನಾಲಜಿ ಸಹಾಯಕ್ಕೆ ಬಂತು ಅನ್ನಿ. ಏನೇನೋ ವಾಟ್ಸಾಪ್ ಗುಂಪುಗಳು ಶುರುವಾಗಿ ಅವುಗಳ ಮೂಲಕ ಚರ್ಚೆಗಳು, ಚಟುವಟಿಕೆಗಳು ಪ್ರಾರಂಭ ಆಗ್ಬಿಟ್ವು. ಹಲವಾರು ವಾಟ್ಸಾಪ್ ಗುಂಪುಗಳಲ್ಲಿ ಸೇರಿಕೊಂಡೆ.

ನಾನು ಸೇರಿಕೊಂಡ ವಾಟ್ಸಾಪ್ ಗುಂಪುಗಳಲ್ಲಿ ಒಂದು ಪ್ರಮುಖ ಹೆಸರು ಸಮನ್ವಯ ಸಮಿತಿ ಕನ್ನಡವೇ ಸತ್ಯ ಅಂತ. ಅದಕ್ಕೆ ಚಿಕ್ಕದಾಗಿ ಸಸಕಸ ಅಂತಾರೆ. ಒಂತರಾ ಕಸ ಕಸ ಅಂತ ಕೇಳಿಸುತ್ತೆ ಅಲ್ವಾ? ಆದರೆ ಅದು ಕಸವನ್ನು ಕಳೆದು ರಸ ಮಾಡುವಂಥ ಗುಂಪು. ನೀವು, ನಾವೆಲ್ಲ ಅದರ ಸದಸ್ಯರೇ ಆಗಿದ್ದೀವಲ್ವೇ?

ಈ ಸಸಕಸ ವೇದಿಕೆಯಲ್ಲಿ ಏನೇನು ಚಟುವಟಿಕೆ ಮಾಡ್ತಾರೆ ಅಂದ್ರೆ ಊಹೆ ಮಾಡೋದೇ ಕಷ್ಟ ಅಂತೀನಿ. ಕಥೆ, ಕವನ, ನಾಟಕ, ಪ್ರಬಂಧ, ಭಾಷಣ ಇತ್ಯಾದಿ ಇತ್ಯಾದಿ... ಬಗೆ ಬಗೆಯ ಸಾಹಿತ್ಯಿಕ ಚಟುವಟಿಕೆಗಳು ಇಲ್ಲಿ ನಿರಂತರ ನಡೆಯುತ್ತವೆ.

ಪ್ರತಿ ತಿಂಗಳು **ಸಾಹಿತ್ಯ ದಾಸೋಹ** ಅಂತ ಬೇರೆ ಮಾಡ್ತಾರೆ. ಪ್ರತಿ ತಿಂಗಳ ಎರಡನೇ ಶನಿವಾರದಂದು ನಮ್ಮದೇ ಸ್ವತಂತ್ರ ಕೃತಿ ರಚಿಸಿ ಆರು ನಿಮಿಷದ ಪ್ರಸ್ತುತಿ ಮಾಡುವ ಕಾರ್ಯಕ್ರಮವದು. ಸಾಕಷ್ಟು ಜನ ಸದಸ್ಯರು ಬಹಳ ಚೆನ್ನಾಗಿ ಪ್ರಸ್ತುತ ಪಡಿಸುವುದನ್ನು ಗಮನಿಸಿದೆ.

ನಾನು ಬರೆಹಗಾರಳಲ್ಲವಾದ್ದರಿಂದ ಒಂದೆರಡು ತಿಂಗಳು ಸುಮ್ಮನೇ ಕೇಳಿಸಿಕೊಂಡೆ. ನಂತರ ನಾನೂ ಭಾಗವಹಿಸುವ ನಿರ್ಧಾರ ಮಾಡ್ದೆ. ಶುರುವಾಯ್ತು ನೋಡಿ ಒತ್ತಡ. ಸುಮಾರು ಹದಿನೈದಿಪ್ಪತ್ತು ದಿನಗಳ ಮುಂಚೆಯಿಂದಲೇ ತಲೆ ಕೆಡಿಸಿಕೊಂಡು ಕಷ್ಟಪಟ್ಟು ನನ್ನದೊಂದು ಲೇಖನ ಸಿದ್ಧಪಡಿಸಿದೆ, ಓದಿಯೂ ಬಿಟ್ಟೆ. ಏನೋ ಒಂಥರಾ ಖುಷಿ ಆಯ್ತು. ಆಹಾ, ಹಾಗಾದರೆ ನಾನು ಅನುಭವಿಸಿದ ಒತ್ತಡ ಧನಾತ್ಮಕ ಒತ್ತಡ ಅಂತ ಅರ್ಥವಾಯಿತು.

ಈಗೆಲ್ಲ ನಾನು ಏನ್ ಮಾಡ್ತೀನಿ ಗೊತ್ತೆ? ಯಾವಾಗ ಸಾಹಿತ್ಯ ದಾಸೋಹದ ಪ್ರಕಟಣೆ ಮಾಡ್ತಾರೋ, ಆಗ ಎಲ್ಲರಂತೆ ನಾನೂ ಕೂಡ ಹೆಸರು ಕೊಟ್ಟುಬಿಡ್ತೀನಿ. ತಲೆಯಲ್ಲಿ ಏನೂ ಇರೋಲ್ಲ. ಮುಂಚೆಯೇ ತಯಾರಿಯನ್ನೂ ಮಾಡಿಕೊಂಡಿರೋದಿಲ್ಲ. ಆದರೆ ಹೆಸರು ಕೊಡುತ್ತಿದ್ದ ಹಾಗೆಯೇ ಶುರುವಾಗುತ್ತೆ ನೋಡಿ ಒತ್ತಡ, ಬೇರೇನನ್ನೂ ಮಾಡಲು ಬಿಡದೆ, ಯೋಚಿಸಿ ಯೋಚಿಸಿ, ಅವನ್ನೇ ಕಡೆದು ಕಡೆದು, ಮೊಸರಿನಿಂದ ಬೆಣ್ಣೆ ಬರುವ ಹಾಗೆ, ನನ್ನ ವಿಷಯದಲ್ಲಿ ಬೆಣ್ಣೆಯಲ್ಲದಿದ್ದರೂ ಒಂಚೂರು ನೊರೆ ಬರುವ ಹಾಗೆ ಏನೋ ಒಂದು ವಿಷಯ ಹೊರಬರುತ್ತೆ. ಅದನ್ನೇ ನನ್ನ ಪ್ರಸ್ತುತಿಯನ್ನಾಗಿ ಮಾಡ್ಬಿಡ್ತೀನಿ, ಖುಷಿಪಡ್ತೀನಿ. ಹಾಗಾಗಿ ನಾನು ಇಂತಹ ಒತ್ತಡವನ್ನು ಧನಾತ್ಮಕ ಒತ್ತಡ ಅಂತೀನಿ. ಇಂತಹ ಒತ್ತಡಗಳು ಬೇಕು ಅಂತೀನಿ. ಎಲ್ಲರಿಗೂ ಇಂತಹ ಧನಾತ್ಮಕ ಒತ್ತಡಗಳು ಬದುಕಿನಲ್ಲಿ ಬೇಕು. ತಮ್ಮ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳಲೂ ಇದು ಸಹಕಾರಿ. ನೀವೇನಂತೀರಿ?

***

ಹಲೋ.. ಮಾರಾಯ್ರೇ...

ನೀವು ಬರೆದಿದ್ದು ಎಲ್ಲಾ ಪುಟ್ಟ ಕತೇನೂ ನನ್ನ ಇಮೇಲಿಗೆ ಕಳಿಸ್ತೀರಾ....

ಪ್ಲೀಸ್... ನನ್ನನ್ನೂ ನಿಮ್ಮ ವಾಟ್ಸಾಪ್ ಗ್ರೂಪಿಗೆ ಸೇರಿಸ್ಕಳ್ಳೀ...



ಸುಮ್ಮನೇಕೆ ನಿಂದಿಸುವಿರಿ ಮೊಬೈಲನ್ನು?

– ಮಹಾಬಲ

ಬಹುಕಾಲಗಳಿಂದ ನನ್ನ ಸಾಹಿತ್ಯ ಮಿತ್ರರೂ, ಉತ್ತಮ ಸಂಘಟಕರೂ ಆದ ಮೈಸೂರಿನ ಮಿತ್ರರೊಬ್ಬರು ತಾವು ಆಯೋಜಿಸಿದ್ದ ಬೃಹತ್ ಸಾಹಿತ್ಯ ಕಾರ್ಯಕ್ರಮಕ್ಕೆ ನನ್ನನ್ನೂ ಒಬ್ಬ ಅತಿಥಿಯನ್ನಾಗಿ ಕರೆದಿದ್ದರು. ವೇದಿಕೆಯ ಮೇಲೆಯೇ ಇಪ್ಪತ್ತು ಜನ ಅತಿಥಿಗಳು ರಾರಾಜಿಸುವ ಒಂದು ಕಿರು ಕೌರವ ಸಭೆ ಅದು. ಭಾನುವಾರವೆಂದು ಒಪ್ಪಿಕೊಂಡೆ.

ಇದ್ದಕ್ಕಿದ್ದಂತೆ ಮೂರು ದಿನ ಮೊದಲು ಆ ಮಿತ್ರರು ದೂರವಾಣಿ ಮಾಡಿ ಕಾರಣಾಂತರಗಳಿಂದ ಕಾರ್ಯಕ್ರಮ ಹಿಂದಿನ ದಿನ ಶನಿವಾರಕ್ಕೆ ಹಿಂದೂಡಲ್ಪಟ್ಟಿದೆಯೆಂದೂ, ಆದರೂ ತಾವು ಬರಬೇಕೆಂದು ಆಗ್ರಹಪೂರ್ವಕ ಕೋರಿಕೆ ಸಲ್ಲಿಸಿದರು. ಆಗ ನಾನಿನ್ನೂ ಸೇವೆಯಲ್ಲಿದ್ದೆ. ಮೇಲಧಿಕಾರಿಗಾಗಿ ರಜಾ ಕೋರಿಕೆ ಸಲ್ಲಿಸಿದಾಗ "ಸಾಧ್ಯವೇ ಇಲ್ಲ, ಈಗಾಗಲೇ ಇಬ್ಬರು ಹೆರಿಗೆ ರಜೆಯಲ್ಲಿದ್ದಾರೆ. ಒಬ್ಬರು ಆರೋಗ್ಯ ಸಮಸ್ಯೆಯಿಂದ ರಜೆ, ಹೀಗೆ ಎಲ್ಲರಿಗೂ ರಜೆ ಕೊಟ್ಟು ನಾನೇನು ಮಾಡಬೇಕು. ಬೇಕಾದರೆ ಸೋಮವಾರ ರಜೆ ತೆಗೆದುಕೊಳ್ಳಿ" ಎಂದರು. .ನನಗೆ ರಜೆ ಬೇಕಾದ್ದು ಶನಿವಾರ. ಸೋಮವಾರ ಏಕೆ ರಜೆ ಬೇಕು? ಎಂದುಕೊಂಡು ನನ್ನ ಮಿತ್ರರಿಗೆ ನಾನು ಬರಲಾಗದ ಪರಿಸ್ಥಿತಿ ವಿವರಿಸಿದೆ. ಅದಕ್ಕೆ ಅವರು "ಸಾರ್, ನೀವು ಬಂದಿದ್ದರೆ ತುಂಬಾ ಚೆನ್ನಾಗಿತ್ತು. ಏನಾದರೂ ಮಾಡಲು ಸಾಧ್ಯವಿಲ್ಲವೆ? ಅದೂ ಅಲ್ಲದೆ ನಿಮ್ಮ ಆಪ್ತ ಕವಯಿತ್ರಿಯವರದೆ ಅಧ್ಯಕ್ಷತೆ ಎಂದು ಆಮಿಷ ಬೀರಿದರು. ಗೊಂದಲದಲ್ಲಿ ಬಿದ್ದೆ. ಎಂಥ ಸುವರ್ಣಾವಕಾಶ! ಆದರೂ ಬಾಸ್ ಇಷ್ಟಕ್ಕೆ ವಿರುದ್ಧವಾಗಿ ಒಂದು ದಿನ ರಜಾ ಹಾಕಿ ನಿತ್ಯ ನಿಷ್ಠುರಕ್ಕೆ ಒಳಗಾಗುವುದು ಸರಿಯಲ್ಲ ಎಂದಿತು ಒಳಮನಸ್ಸು.. ಹರುಷದ ಕೂಳಿಗೆ ಆಸೆಪಟ್ಟು ವರುಷದ ಕೂಳಿಗೆ ಕಲ್ಲು ಹಾಕಿಕೊಳ್ಳುವುದು ಸರಿಯಲ್ಲ ಎಂದು ತೀರ್ಮಾನಿಸಿ ಖಂಡಿತವಾದ ಧ್ವನಿಯಲ್ಲಿ ಅವರಿಗೆ ಬರುವುದಿಲ್ಲ ಎಂದು ತಿಳಿಸಿದೆ.

ನನ್ನ ಸಾಹಿತ್ಯ ಮಿತ್ರರು ಅದನ್ನು ಒಪ್ಪಿಕೊಂಡಂತೆ, ''ಸರಿ ಬಿಡಿ, ನಿಮ್ಮ ಹತ್ತಿರ ಮೊಬೈಲ್ ಇದೆಯಾ?'' ಎಂದು ಕೇಳಿದರು. ಇಂದಿನ ದಿನಗಳಲ್ಲಿ ಇದು ಕೇಳಬಾರದ ಪ್ರಶ್ನೆ. ಹನ್ನೆರಡು ವರುಷಗಳ ಹಿಂದೆ ಅವರು ಹೀಗೆ ಕೇಳಿದ್ದು ಸರಿಯಾಗಿಯೇ ಇತ್ತು. "ಇದೆ" ಎಂದೆ. "ಯಾವುದು?" ಅವರ ಮರು ಪ್ರಶ್ನೆ. ."ಸಾಧಾರಣ ಕೀಬೋರ್ಡ್ ತರಹದ್ದು, ಆಫೀಸಿನಲ್ಲಿ ಕೊಟ್ಟದ್ದು" ಎಂದು ಉತ್ತರಿಸಿದೆ. ಅದಕ್ಕೆ ಅವರು, "ಒಂದು ಕೆಲಸ ಮಾಡಿ, ನಿಮ್ಮ ಸರದಿ ಬಂದಾಗ ನಾನು ನಿಮ್ಮ ಗೈರುಹಾಜರಿಗೆ ಕಾರಣ ನೀಡಿ ನಿಮಗೆ ಕರೆ ಮಾಡಿ ನನ್ನ ಮೊಬೈಲ್ ಫೋನ್ ಮೈಕ್ ಮುಂದೆ ಹಿಡೀತೀನಿ. ನೀವು ಮಾತನಾಡಬೇಕಾದ್ದನ್ನು ಫೋನಿನಲ್ಲೇ ಹೇಳಿಬಿಡಿ" ಎಂದು ತಮ್ಮ ಬಿ ಪ್ಲಾನ್ ವಿವರ ನೀಡಿದರು.

ಅವರೆಂದಂತೆ ನನ್ನ ಸರದಿ ಬಂದಾಗ ಅವರು ರಿಂಗ್ ಮಾಡಿದರು. ನಾನು ನನ್ನ ಮಾತುಗಳನ್ನು ತಿಳಿಸಿದೆ. ಗಣ್ಯ ಅತಿಥಿಗಳ ಹಾಗೂ ಸಭಾಸದರ ಕ್ಷಮೆ ಕೋರಿದೆ. ಜೋರಾದ ಕರತಾಡನ ಕೇಳಿಸಿದಾಗ ಸಂತಸಪಟ್ಟೆ. ಸಾಹಿತ್ಯ ಮಿತ್ರ ವೇದಿಕೆಯಿಂದಾಚೆ ಬಂದು ನನಗೆ ಫೋನ್ ಮಾಡಿ, "ಸಾರ್, ನಿಮ್ಮ ಭಾಷಣಕ್ಕೆ ಜನ ಫುಲ್ ಫಿದಾ. ನೀವೇ ಬಂದಿದ್ರೂ ಇಷ್ಟು ಚೆನ್ನಾಗಿ ಬರ್ತಿರಲಿಲ್ಲ ಭಾಷಣ" ಎಂದ. ನನಗೇಕೋ ಕೊನೆಯ ವಾಕ್ಯ ಅಷ್ಟೊಂದು ಹಿತ ಎನಿಸಲಿಲ್ಲ. ಆದರೂ ಔಪಚಾರಿಕವಾಗಿ "ಸಂತೋಷ" ಎಂದೆ.

ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಹೂವಿನ ಹೋಲ್‌ಸೇಲ್ ವ್ಯಾಪಾರಿಯೊಬ್ಬನಿಗೆ ಮಾರ್ಕೆಟ್ಟಿನ ಹೂವಿನ ಹರಾಜು ಕಟ್ಟೆಯಿಂದ ಅವನ ಸಹಾಯಕನ ಫೋನ್ ಕರೆ ಬಂತು. "ಅಣ್ಣಾ, ಹರಾಜು ಐದು ನಿಮಿಷದಲ್ಲಿ ಶುರು. ನೀವೆಲ್ಲಿದ್ದೀರಿ?"ಎಂದು ಗಾಬರಿಯಿಂದ ಕೇಳಿದ. ಇತ್ತ ಯಜಮಾನ, "ಯೋ, ಇಲ್ಲಿ ಟ್ರಾಫಿಕ್ ಜಾಮ್. ಬರೋಕೆ ತಡಾ ಆಗತ್ತೆ" ಎಂದ. "ಅಯ್ಯೋ ಅಣ್ಣಾ ಏನಾದ್ರೂ ಮಾಡಿ. ಭಾರಿ ಕುಳಗಳು ಆರ್ಮುಗಂ, ದಸ್ತಗೀರ್ ಎಲ್ಲ ಕೂಗೋಕೆ ಬಂದವ್ರೆ. ನೀವು ಬಂದಿಲ್ಲ ಅಂತ ಖುಷಿಯಾಗವ್ರೆ" ಎಂದು ವಿವರಿಸಿದ. ''ನಡೆಸೋಣ ಬಿಡ್ಲಾ. ಫೋನಲ್ಲೇ ಇರು, ಗವರ್ನಮೆಂಟ್

ಸವಾಲ್ ಕೂಗಿದಾಗ ನನಗೆ ಹೇಳು. ನಾನು ನಮ್ಮ ರೇಟ್ ಹೇಳ್ತೀನಿ ನೀನು ಅದನ್ನು ಕೂಗು'' ಎಂದರು ಯಜಮಾನರು. ಹೀಗೇ ನಡೆಯಿತೆಂದು ತೋರುತ್ತದೆ. ಕಡೆಗೊಮ್ಮೆ ಆ ಸಹಾಯಕ ''ಅಣ್ಣಾ ಬಿಡ್ ನಮ್ಮದೇ" ಎಂದು ಅರಚಿದ್ದು ಕೇಳಿಸಿತು. ಟ್ರಾಫಿಕ್ ಜಾಮ್ ಅದ ಬಸ್ಸಿನಲ್ಲೇ ಹರಾಜನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಮೊಬೈಲಿಗೆ ಜೈ ಎನ್ನುತ್ತಿರೋ ಇಲ್ಲವೋ?

ಒಂದು ರಾತ್ರಿ ಮಡಿಕೇರಿಯಿಂದ ಬಸ್ಸಿನಲ್ಲಿ ಹೊರಟು ಬೆಂಗಳೂರಿಗೆ ಬರುತ್ತಿದ್ದೆ. ಕಂಡಕ್ಟರಿಗೆ ಮಾರನೆ ದಿನ ಆಫ್ ಅಂತೆ. ಅವನು ಬಸ್ ಬಿಡದಿಗೆ ಬರುತ್ತಿದ್ದಂತೆ ಮಡದಿಗೆ ಫೋನ್ ಹಚ್ಚಿ, ''ಮನೆಗೆ ಬತ್ತಾ ಇವ್ನಿ. ಮುದ್ದೆಗಿಕ್ಕು. ಬತ್ತಾ ಇದ್ದಂಗೆ ಸ್ನಾನ ಮಾಡಿ ಮುದ್ದೆ ಕಬಳಿಸೋದೆ.'' ಎಂದು ಗಡುಸು ದನಿಯಲ್ಲೇ ಪ್ರೀತಿಯ ಅಣತಿ ನೀಡಿದ. ನೋಡಿ ಮೊಬೈಲಿನ ಕೃಪೆಯಿಂದ ಮನೆ ತಲುಪಿದೊಡನೆ ಬಿಸಿ ಬಿಸಿ ಮುದ್ದೆ. ಇಲ್ಲದಿದ್ದರೆ ಮನೆಗೆ ಹೋಗಿ ಮುದ್ದೆಗೆ ಹೇಳಿ ತಯಾರಾಗುವವರೆಗೆ ಕಾದು... ಬೇಕೆ ಆ ಪಾಡು?

ಮುಂದೆ ಹೇಳುತ್ತಿರುವ ಅನುಭವ ಎಲ್ಲ ಗಂಡಸರಿಗೂ ಆಗಿರಲೇಬೇಕು. ನೀವು ಬೆಳಗಿನ ಕಾಫಿ ಕಟ್ಟೆಯ ಸಭೆಯಲ್ಲಿ ಕಳೆದುಹೋಗಿ ಪ್ರಪಂಚದ ವಿಚಾರವನ್ನೆಲ್ಲ ಚರ್ಚಿಸುತ್ತಾ ಇದ್ದಾಗ ಪೋನಿನಲ್ಲಿ. "ರೀ ಎಲ್ಲಿದ್ದೀರಿ?'' ಎಂಬ ವಾಣಿ. ಇದು ಮನೆಯಿಂದಲೇ ಕರೆ. ಅನುಮಾನವೇ ಬೇಡ. ಮಡದಿಯದೇ ದನಿ. ''ಇಲ್ಲೇ ಸ್ನೇಹಿತರ ಜತೆ ಸಭೆ. ಏನು ಬೇಕಾಗಿತ್ತು?'' ನಿಮ್ಮ ಟೆಲಿಗ್ರಾಮ್ ಒಕ್ಕಣೆಯಂಥ ಚುಟುಕು ಉತ್ತರ. ಆ ಕಡೆಯಿಂದ ''ಮರೆಯದೆ ಅದು ತನ್ನಿ ,ಇದು ತನ್ನಿ, ಬೇಗ ಬನ್ನಿ'' ಎಂಬ ಫರ್ಮಾನು. ನಿಮ್ಮ ಸಭೆಯಲ್ಲಿ ಐದು ಜನರಿದ್ದರೆ ನಾಲ್ಕು ಜನ ಸರದಿಯ ಮೇಲೆ ಇಂಥ ಪೋನ್ ಸ್ವೀಕರಿಸಲೇಬೇಕು. ಹೆಚ್ಚೂ ಕಡಿಮೆ ಇದೇ ವಿಷಯ. ಮತ್ತೊಬ್ಬನಿಗೆ ಪೋನ್ ಬರುವುದಿಲ್ಲ ಏಕೆಂದರೆ ಅವನು ಮದುವೆಯಾಗಿರುವುದಿಲ್ಲ. ಒಂದು ವೇಳೆ ಮೊಬೈಲ್ ಇರಲೇ ಇಲ್ಲ ಎಂದುಕೊಳ್ಳಿ. ಮನೆಗೆ ಹೋಗಿ ಬ್ಯಾಗ್ ತೆಗೆದುಕೊಂಡು ಮತ್ತೊಮ್ಮೆ ಚಪ್ಪಲಿ ಸವೆಸಿ ಶ್ರಮಿಸಬೇಕು. ಅಷ್ಟೆಲ್ಲ ಪಾಡು ತಪ್ಪಿದ್ದು ಮೊಬೈಲಿನಿಂದ. ಅದಕ್ಕೆ ಧನ್ಯವಾದ ಸಮರ್ಪಿಸಿ.

ಇದು ಬಿಡಿ, ಬರೀ ಸಂವಾದದಲ್ಲಿ ಮೊಬೈಲಿನ ಉಪಯುಕ್ತತೆ. ಆದರೆ ಇಂದು ಕಾಲವೆಂಬ ಕಾವೇರಿ ನದಿಯಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ (ಎಲ್ಲಿಗೆ? ತಮಿಳುನಾಡಿಗೇ? ಯಾವಾಗ? ಎನ್ನದಿರಿ). ಹೊಸ ಹೊಸ ಮೊಬೈಲ್ ಆವಿಷ್ಕಾರಗಳು ಮಾರುಕಟ್ಟೆಯನ್ನು ಕಬ್ಜಾ ಮಾಡಿಕೊಂಡಿವೆ. ಅದರಲ್ಲೂ ನೆರೆಯ ದಾಳಿಕೋರ ದೇಶವಂತೂ ತನ್ನ ಹೊಸಬಗೆಯ ಬ್ರಾಂಡುಗಳಿಂದ ಕೊಳ್ಳುವವರನ್ನು ಕಂಗಾಲುಗೊಳಿಸಿದೆ. ಮೊಬೈಲಿನ ಹಲವಾರು ಉಪಯುಕ್ತತೆಗಳನ್ನು ನಿಮಗೆ ಅಂಗಡಿಯಾತ ಬಣ್ಣಿಸತೊಡಗಿದಾಗ ''ಇದರಲ್ಲಿ ಪೋನೂ ಮಾಡಬಹುದೇ?'' ಎಂದು ಕೇಳುವಷ್ಟರಮಟ್ಟಿಗೆ ಅದರ ಬಹೂಪಯೋಗಿತನ ಮುಂದೆ ಹೋಗಿದೆ.

ಹಿಂದೆ ಯಾರದಾದರೂ ಮನೆಯಲ್ಲಿ ಸಾವಾದರೆ ಸೈಕಲ್ಲೇರಿ ಹೋಗಿ ನೆಂಟರಿಷ್ಟರ ಮನೆಗೆ ಸುದ್ದಿ ಮುಟ್ಟಿಸಬಲ್ಲ ಹರಿಕಾರರನ್ನು ಗೊತ್ತುಮಾಡಿಕೊಳ್ಳಬೇಕಾಗಿತ್ತು. ಈಗ ಅಂಥ ಪರದಾಟವಿಲ್ಲ. ಸಾವಾದ ತಕ್ಷಣ ಮೊಬೈಲ್ ಯಂತ್ರವೇ ಹರಿಕಾರನ ಪಾತ್ರ ವಹಿಸುತ್ತದೆ. ಸಾವಿನ ಸುದ್ದಿ ನಂಬದವರಿಗೆ ವಿಡಿಯೋ ಕಾಲ್ ಮಾಡಿ ಪಾರ್ಥಿವ ಶರೀರವನ್ನು ತೋರಿಸಲೂಬಹುದು. ಒಂದು ಸಾವಿನ ಮನೆಯಲ್ಲಿ ಉತ್ತರ ದಿಕ್ಕು ಯಾವುದು, ದಕ್ಷಿಣ ದಿಕ್ಕು ಯಾವುದು ಎಂದು ತಡಕಾಡುತ್ತಿದ್ದರು. ತಕ್ಷಣ ಒಬ್ಬ ತಂತ್ರಜ್ಞಾನಿ ಯುವಕ ತನ್ನ ಮೊಬೈಲ್ ತೆಗೆದು ಮ್ಯಾರಿನರ್ ಕಾಂಪಾಸ್ ತಂತ್ರಾಂಶ ಹಾಕಿ ಸರಿಯಾದ ದಿಕ್ಕನ್ನು ತಿಳಿಸಿದ. ಒಂದು ಮೊಬೈಲು: ಎಷ್ಟೊಂದು ಅನುಕೂಲಗಳು.

ಹಿಂದೆ ಮನೆ ಖಾಲಿಯಾದಾಗ ಟುಲೆಟ್ ಬೋರ್ಡ್ ನೋಡಿಕೊಂಡು ಬಂದವರಿಗೆಲ್ಲ ಮನೆ ತೋರಿಸಿ ಹೈರಾಣಾಗಬೇಕಿತ್ತು. ಈಗ ಹಾಗಲ್ಲ ಪೋನಿನಲ್ಲಿ ನಿಮ್ಮ ಮನೆ ಬಗ್ಗೆ ವಿಚಾರಿಸಿದವನಿಗೆ ಮನೆಯ ಮೂಲೆ ಮೂಲೆಗಳನ್ನು ಪ್ರತ್ಯಕ್ಷವಾಗಿ ವಿಡಿಯೋ ಮೂಲಕ ತೋರಿಸಬಹುದು. ಹೇಗಿದೆ ಐಡಿಯಾ, ಅಲ್ಲೇ ಡ್ರಾ ಅಲ್ಲೇ ಬಹುಮಾನ ಅಂದಹಾಗೆ.

ವಧು ವರಾನ್ವೇಷಣೆಗೂ ಇದೇ ಅನುಕೂಲ ಮೊಬೈಲಿನ ಪ್ರವೇಶದಿಂದ. ಉಪ್ಪಿಟ್ಟು ಕೇಸರಿಭಾತ್ ಆತಿಥ್ಯ, ಬಾದರಾಯಣ ಸಂಬಂಧಗಳ ಪಾತಾಳಗರಡಿ, ಭಾವಿ ವಧುವಿನಿಂದ "ಭಾಮೆಯ ನೋಡಲು ತಾ ಬಂದ" ಹಾಡು ಹಾಡಿಸುವ ನಾಟಕ. "ಬರುತ್ತೇವೆ, ಋಣಾನುಬಂಧ ಹೇಗಿದೆಯೋ ನೋಡೋಣ" ಎಂಬ ಶುಷ್ಕ ವಿದಾಯದ ನುಡಿ. ಯಾವುದರ ಶ್ರಮವೂ ಇಲ್ಲ ಒಂದು ವಿಡಿಯೋ ಕಾಲ್ ಸಾಕು. ಇನ್ನೂ ನೀವು ಮೊಬೈಲನ್ನು ಹಳಿಯುವಿರಾ?

ಮದುವೆ ಇನ್ನಿತರ ಸಮಾರಂಭಕ್ಕೆ ಅಕ್ಷತೆ ಬಟ್ಟಲು ಹಿಡಿದು ಊರೆಲ್ಲ ಅಲೆದು ಕರೆಯುವ ಪ್ರಮೇಯ ಕಾಣೆಯಾಗಿ ಬಹಳ ಕಾಲವಾಗಿದೆ. ಈಗ ವಾಟ್ಸಾಪಿನಲ್ಲಿ ಆಹ್ವಾನ ಪತ್ರಿಕೆ ಕಳಿಸಿ, ಮುಖತಃ ಭೇಟಿ ಸಾಧ್ಯವಿಲ್ಲವೆಂದು ವಿಷಾದಿಸಿ ಪ್ರೀತಿಯಿಂದ ಕರೆದರೆ ಸಾಕು. ಒಬ್ಬರ ಮನೆಯಲ್ಲಿ ಕಾಫಿ, ಮತ್ತೊಬ್ಬರ ಮನೆಯಲ್ಲಿ ಟೀ, ಮಗದೊಬ್ಬರ ಮನೆಯಲ್ಲಿ ಹಾರ್ಲಿಕ್ಸ್ ಇತ್ಯಾದಿಗಳನ್ನು ಬಲವಂತದ ಉಪಚಾರಕ್ಕೆ ಸೇವಿಸಿ ನರಳುವ ಕಾಟವೇ ಇಲ್ಲ.

ನನ್ನ ಮಾಧ್ಯಮಿಕ ಶಾಲೆಯ ಸಹಪಾಠಿಯ ಮಗನ ಮದುವೆ ಘೋರ ಕೊರೋನಾ ಕಾಲದಲ್ಲಿ ನಡೆಯಿತು. ಅವನು "ಮದುವೆ ಮನೆಯಲ್ಲೇ ನಡೆಯುತ್ತದೆ. ಯಾರನ್ನೂ ಕರೆಯುತ್ತಿಲ್ಲ ಯೂಟ್ಯೂಬ್ ಲೈವ್ ಇರುತ್ತದೆ. ವಾಟ್ಸಪ್ಪಿನಲ್ಲಿ ಲಿಂಕ್ ಕಳಿಸುತ್ತೇನೆ ಅಲ್ಲೇ ನೋಡಿ ಆಶೀರ್ವಾದ ಮಾಡಿ" ಎಂದು ಸಂದೇಶ ಕಳಿಸಿದ್ದ. ಅಬ್ಬಾ! ಸರಳತೆಯಲ್ಲೂ ಸರಳತೆ. ಕೃಪೆ ಕೊರೋನಾ ಹಾಗೂ ಸಹಕಾರ ಮೊಬೈಲ್.

ಮದುವೆ ಆರತ್ಯಕ್ಷತೆಯಲ್ಲಿ ಕಂಡವರಿಗೆ ಮೊಬೈಲ್ ನೀಡಿ ನೀವು ವಧೂವರರ ಪಕ್ಕ ಹಲ್ಲು ಕಿರಿಯುತ್ತ ನಿಂತು ಫೋಟೋ ತೆಗೆಸಿಕೊಂಡು ಸಂತಸಪಡಲೂ ಈಗ ಅವಕಾಶವಿದೆ.

ಹೀಗೆ ಹೇಳುತ್ತ ಹೋದರೆ ಮೊಬೈಲಿನ ಇತ್ಯಾತ್ಮಕ ಅಂಶಗಳು ಬಹಳ ಇವೆಯೆಂಬುದು ಸತ್ಯ. ಐನ್ಸ್ ಸ್ಟೈನ್ ಅವರು ಮಹಾತ್ಮ ಗಾಂಧಿ ಅವರ ಹತ್ತಿರ ತಮ್ಮ ಆವಿಷ್ಕಾರದ ಸಾಪೇಕ್ಷ ಸಿದ್ಧಾಂತವು ವಿನಾಶಕ್ಕೆ ದುರ್ಬಳಕೆಯಾಗುತ್ತಿದೆಯೆಂದು ದುಃಖಿಸಿದಾಗ ಗಾಂಧಿಯವರು, 'ವಾಲ್ಮೀಕಿಯವರು ರಾಮಾಯಣದಲ್ಲಿ ರಾಮ ರಾವಣ ಇಬ್ಬರನ್ನೂ ಸೃಷ್ಟಿಸಿದರು. ಅದರರ್ಥ ಜನ ರಾವಣನನ್ನು ಅನುಸರಿಸಿ ಎಂದಲ್ಲವಲ್ಲ' ಎಂದು ಸಮಾಧಾನ ಮಾಡಿದರಂತೆ. ಮೊಬೈಲ್ ವಿಷಯದಲ್ಲೂ ಇದೇ ವಾದ ಅನ್ವಯಿಸುತ್ತದೆ ಎಂಬುದು ನನ್ನ ಅಭಿಮತ. ಏನಂತೀರಿ?

***

ಮುಖಪುಟ ಚಿತ್ರದ ಲೇಖನ

ಶ್ರೀಖಂಡ ಮಹದೇವ

ಭಾರತದ ಅತಿ ಕಠಿಣವಾದ ತೀರ್ಥಯಾತ್ರೆ ಚಾರಣ

– ಗುರುರಾಜ ಶಾಸ್ತ್ರಿ



ಅದು ರಾತ್ರಿ ಹನ್ನೆರೆಡು ಗಂಟೆ. ನಮ್ಮ ಟೆಂಟಿನಿಂದ ಎದ್ದು ನಮ್ಮ ಗುಂಪಿನಲ್ಲಿದ್ದ ಆರು ಪುರುಷರು ಹಾಗೂ ಇಬ್ಬರು ಮಹಿಳೆಯರು ನಾಲ್ಕನೇ ದಿನದ ಚಾರಣಕ್ಕೆ ತಯಾರಾಗಿ ನಿಂತೆವು. ಅಂದು ರಾತ್ರಿ 12.30ಕ್ಕೆ ಚಾರಣ ಆರಂಭಿಸಿದರೆ ಮತ್ತೆ ನಾವು ಆ ಚಾರಣ ಮುಗಿಸುವುದು ಮಾರನೇದಿನ ರಾತ್ರಿ 9 ಗಂಟೆಗೆ. ಅಂದರೆ ಸುಮಾರು ಇಪ್ಪತ್ತೊಂದು ಗಂಟೆಗಳ ಚಾರಣ. ಪ್ರತಿಯೊಬ್ಬರ ಬೆನ್ನಿಗೆ ಒಂದು ಚೀಲ, ಆ ಚೀಲದಲ್ಲಿ ಎರಡು ನೀರಿನ ಬಾಟಲಿ ಮತ್ತು ಸ್ವಲ್ಪ ಡ್ರೈ ಫ್ರೂಟ್ಸ್. ಈ ಇಪ್ಪತ್ತೊಂದು ಗಂಟೆಗಳ ಚಾರಣದಲ್ಲಿ ಹನ್ನೆರೆಡು ಗಂಟೆಗಳ ಚಾರಣದ ನಂತರ ಎಲ್ಲಾ ಚಾರಣಿಗರು ಗುರಿಯಾಗಿಟ್ಟುಕೊಂಡಿರುವ ಶ್ರೀಖಂಡ ಮಹಾದೇವನ ದರ್ಶನ ಇರುತ್ತದೆ. ನಂತರ ಒಂಬತ್ತು ಗಂಟೆಗಳ ಚಾರಣ ಹಿಂದಿರುಗಿ ಬರುವುದಕ್ಕೆ.

ಇದೇನಿದು ಶಾಸ್ತ್ರಿಗಳು ನೇರ ನಾಲ್ಕನೇ ದಿನದ ಚಾರಣಕ್ಕೆ ಹೊರಟುಬಿಟ್ಟರೇ, ಮೊದಲ ಮೂರು ದಿನದ ಬಗ್ಗೆ ಏನೂ ಬರೆದಿಲ್ಲವಲ್ಲ ಎಂದು ಯೋಚಿಸುತ್ತಿದ್ದೀರಾ... ಇದು ಹಾಗೇ ಸುಮ್ಮನೆ, ಚಲನಚಿತ್ರದಲ್ಲಿ ಉತ್ತಮವಾದ ಒಂದು ತುಣುಕನ್ನು ಟ್ರೈಲರ್ ಆಗಿ ತೋರಿಸುವುದಿಲ್ಲವೇ, ಹಾಗೆಯೇ...

ನಿಜವಾದ ಭಕ್ತನಿಗೆ ಪೂರ್ತಿ ಹಿಮಾಲಯವೇ ಕೈಲಾಸವಾದರೂ, ಚಾರಣದ ದೃಷ್ಟಿಯಿಂದ ಹಿಮಾಲಯದಲ್ಲಿ ಒಟ್ಟು ಐದು ಕೈಲಾಸಗಳು ಇವೆ. ಅವು ಯಾವುವೆಂದರೆ–

1. ಟಿಬೇಟ್‌ನಲ್ಲಿ ಮಾನಸ ಸರೋವರದ ಹತ್ತಿರವಿರುವ ಕೈಲಾಸ ಪರ್ವತ
2. ಭಾರತ ಟಿಬೇಟ್ ಗಡಿಯಲ್ಲಿ ಭಾರತದ ಕಡೆ ಇರುವ ಆದಿ ಕೈಲಾಸ
3. ಹಿಮಾಚಲ ಪ್ರದೇಶದ ಕಿನ್ನಾರ್ ಪ್ರಾಂತ್ಯದಲ್ಲಿರುವ ಕಿನಾರ್ ಕೈಲಾಸ
4. ಹಿಮಾಚಲ ಪ್ರದೇಶದ ಭುದಿಲ್ ಕಣಿವೆಯಲ್ಲಿರುವ ಮಣಿಮಹೇಶ್ ಹಾಗೂ
5. ಹಿಮಾಚಲ ಪ್ರದೇಶದ ನಿರ್ಮಾಂಡ್ ಪ್ರಾಂತ್ಯದಲ್ಲಿರುವ ಶ್ರೀಖಂಡ ಮಹದೇವ

ಈ ಐದರಲ್ಲಿ ಶ್ರೀಖಂಡ ಮಹದೇವ ಚಾರಣ ತೀರ್ಥಯಾತ್ರೆ ಬಹಳ ಕಠಿಣವಾದದ್ದು ಎಂದು ಗೂಗಲ್ ಹೇಳುತ್ತದೆ ಹಾಗೂ ಈ ಐದೂ ಕೈಲಾಸ ಯಾತ್ರೆ ಮುಗಿಸಿರುವ ಚಾರಣಿಗರೂ ಹೇಳುತ್ತಾರೆ. ಈಗ ಜುಲೈ 20, 2024ರಿಂದ ನಾನು ಕೈಗೊಂಡ ಈ



ಯಾತ್ರೆಯಿಂದ, ಏನಿದೆ ಇದರಲ್ಲಿ ಅಷ್ಟು ಕಠಿಣತೆ ಎಂಬ ವಿವರಗಳನ್ನು ಬರೆಯಲು ನಾನು ಅರ್ಹನಾಗಿದ್ದೇನೆಂದು ಭಾವಿಸುತ್ತೇನೆ.

ಈ ಶ್ರೀಖಂಡ ಮಹದೇವ ಯಾತ್ರೆಯನ್ನು ಕಠಿಣವಾದದ್ದು ಎಂದು ಕರೆಯಲು ಕಾರಣವೇನೆಂದು ತಿಳಿದುಕೊಳ್ಳೋಣ.

1. ಚಾರಣದಲ್ಲಿ ಸಮುದ್ರ ಮಟ್ಟದಿಂದ 6,500 ಅಡಿ ಎತ್ತರದಿಂದ ಆರಂಭಿಸಿ, 17,150 ಅಡಿಯವರೆಗೂ ಹೋಗಿ ಮತ್ತೆ ವಾಪಸ್ 6,500 ಅಡಿಗೆ ಬರಬೇಕು
2. ಚಾರಣವು ಸುಮಾರು 6ರಿಂದ 7 ದಿನಗಳದ್ದಾಗಿರುತ್ತದೆ ಮತ್ತು ಒಟ್ಟಾರೆ 70 ಕಿಲೋಮೀಟರ್ ನಡೆಯುವುದಿರುತ್ತದೆ.
3. 4ನೇ ದಿನದ ಚಾರಣ ಸುಮಾರು 18ರಿಂದ 21 ಗಂಟೆಯಷ್ಟಿರುತ್ತದೆ (ನಾವು ರಾತ್ರಿ 1ಕ್ಕೆ ಆರಂಭಿಸಿ ಮರುದಿನ ರಾತ್ರಿ 9 ಗಂಟೆಗೆ ಹಿಂದಿರುಗಿದೆವು)
4. ಪೂರ್ಣ ಚಾರಣದಲ್ಲಿ ಎಲ್ಲಿಯೂ ಯಾವುದೇ ಕುದುರೆ, ಡೋಲಿ ವ್ಯವಸ್ಥೆ ಇಲ್ಲ (ನಮ್ಮ ಬ್ಯಾಗ್ ಹೊರಲು ಪೋರ್ಟರ್ ಸಿಗುತ್ತಾರೆ, ಆದರೆ ಅದು ದುಬಾರಿ ಬೆಲೆಗೆ)
5. ಚಾರಣದಲ್ಲಿ ಬರುವಂತಹ ಸವಾಲುಗಳು ಹೀಗಿವೆ:
    - ಹಿಮನದಿ ಅಂದರೆ ಗ್ಲೇಶಿಯರ್ ಮೇಲೆ ನಡೆಯುವುದು,
    - ದೊಡ್ಡ ದೊಡ್ಡ ಗುಂಡುಕಲ್ಲುಗಳು ಅಂದರೆ ಬೌಲ್ಡರ್‌ಗಳ ಮೇಲೆ ನಡೆಯುತ್ತಾ ಪರ್ವತ ಹತ್ತುವುದು,
    - ಎತ್ತರದ ಸರೋವರಗಳ ಪಕ್ಕದಲ್ಲೇ ನದಿಯನ್ನು ದಾಟುವುದು,
    - ಪರ್ವತಗಳ ತುದಿಗಳಲ್ಲಿ ನಡೆಯುವುದು,



- ಪರ್ವತಗಳ ಮಧ್ಯದಲ್ಲಿ ತಾತ್ಕಾಲಿಕವಾಗಿ ಮಾಡಿರುವ 1ರಿಂದ 3 ಅಡಿ ಕಾಲ್ದಾರಿಯಲ್ಲಿ ನಡೆಯುವುದು,
- ಮಳೆ ಬಂತೆಂದು ನಿಲ್ಲುವಹಾಗಿಲ್ಲ, ಚಾರಣ ಮುಂದುವರೆಯುತ್ತಿರುತ್ತದೆ,
- ರಾತ್ರಿ ಹೊತ್ತು ಹಣೆಯ ಪಟ್ಟಿಗೆ ಟಾರ್ಚ್ ಕಟ್ಟಿಕೊಂಡು ನಡೆಯುವುದು,
- ಕೆಲವೊಂದು ಕಡೆ ಸುಮಾರು 30ರಿಂದ 40 ಅಡಿಯಷ್ಟು ಹಳ್ಳದ ಹಾಗಿದ್ದು, ನಿಧಾನವಾಗಿ ಕುಳಿತುಕೊಂಡು ಇಳಿಯಬೇಕಾಗುತ್ತದೆ/ಹತ್ತಬೇಕಾಗುತ್ತದೆ.

6. ತಾತ್ಕಾಲಿಕ ಟೆಂಟ್‌ಗಳಲ್ಲಿ ರಾತ್ರಿ ಗುಂಪಿನಲ್ಲಿ ನಿದ್ರಿಸಲು ಬರಬೇಕು. ಒಬ್ಬರಿಗೆ 400 ರೂಪಾಯಿ ರಾತ್ರಿ ಊಟ ಉಚಿತ.
7. ಪೂರ್ತಿ ಚಾರಣದಲ್ಲಿ ಬಹಿರ್ ಶೌಚಾಲಯ ಅಥವಾ ಭಾರತೀಯ ಶೈಲಿಯ ಶೌಚಾಲಯದ ವ್ಯವಸ್ಥೆಗಳಷ್ಟೇ ಇರುವುದು
8. ಚಾರಣದ ಸಮಯದಲ್ಲಿ ಊಟವೆಂದರೆ ಮ್ಯಾಗಿ, ಆಲೂ ಪರೋಟಾ, ಚಪಾತಿ ಮತ್ತು ದಾಲ್ (ಬೇಳೆ ಅಥವಾ ಕಾಳುಗಳು ಹಾಕಿ ಮಾಡಿರುವ ತೊವ್ವೆ)
9. ಟೀ, ಕಾಫಿ ಹೆಚ್ಚಾಗಿ ಸಿಕ್ಕರೂ ಅದರಲ್ಲಿ ಹಾಲಿನಪುಡಿ ಬಳಸಿರುತ್ತಾರೆ, ಕೆಲವರಿಗೆ ಇದು ಹೊಟ್ಟೆ ಕಟ್ಟುತ್ತದೆಂಬ ಭಯ.

ಇನ್ನು ನಮ್ಮ ಅನುಭವ ಹೀಗಿದೆ:
ಜೂನ್ ತಿಂಗಳಲ್ಲಿ ಚಾರಣಕ್ಕೆ ಶ್ರೀಖಂಡ ಮಹದೇವ ಟ್ರಸ್ಟಿನ ಜಾಲತಾಣದಲ್ಲಿ ಒಬ್ಬೊಬ್ಬರಿಗೆ 250 ರೂಪಾಯಿಗಳನ್ನು ಪಾವತಿಸಿ ರಿಜಿಸ್ಟರ್ ಮಾಡಿ, ವಿಮಾನದ ಟಿಕೇಟ್‌ಗಳನ್ನು ಕಾಯ್ದಿರಿಸಿದೆವು. ನನ್ನ ಗೆಳೆಯ, ಅವನ ಹೆಂಡತಿ ಮತ್ತು ಅವರ ಬಂಧುಬಳಗ 5 ಜನ, ಈ ಏಳು ಒಂದು ಕುಟುಂಬದವರ ಜೊತೆ ನಾನೊಬ್ಬ ಹೊರಗಿನವ.

ಚಾರಣಕ್ಕೆ ಹೋಗುವ ಮುನ್ನ ನೇರ ನಡಿಗೆಯ ಅಭ್ಯಾಸಕ್ಕಿಂತ ನಮ್ಮಗಳ ಪೂರ್ವತಯಾರಿ ಈ ಚಾರಣದ ಬಗ್ಗೆ ಇದ್ದ ಯೂಟ್ಯೂಬ್ ವೀಡಿಯೋಗಳನ್ನು ನೋಡುವುದರಲ್ಲೇ ಆಯಿತು. ಈ ಚಾರಣ ತುಂಬಾ ಕಷ್ಟ, ಸಾವು ನೋವುಗಳು ಜಾಸ್ತಿ



ಎಂದು ಹೇಳುತ್ತಿದ್ದ ಒಂದೆರೆಡು ವೀಡಿಯೋಗಳನ್ನು ಚೆನ್ನಾಗಿ ಬೈದು, ಹೆಚ್ಚೇನು ವಿವರಗಳಿಲ್ಲದೆ ಹಿಮಾಲಯದ ರಮಣೀಯ ಚಿತ್ರಗಳನ್ನು ತೋರಿಸುತ್ತಿದ್ದ ವೀಡಿಯೋ ಗಳನ್ನು ನೋಡಿ ಆನಂದಿಸಿದ್ದೆವು.

19ನೇ ಜುಲೈ 2024ರಂದು ಬೆಂಗಳೂರಿನಿಂದ ಚಂಡೀಘಡಕ್ಕೆ ವಿಮಾನದಲ್ಲಿ ಪ್ರಯಾಣಿಸಿ, ಅಲ್ಲಿಂದ ಟೆಂಪೋ ಟ್ರಾವೆಲರ್‌ನಲ್ಲಿ ಸುಮಾರು 10 ಗಂಟೆಗಳ ಪ್ರಯಾಣ ಮಾಡಿ ಜಾವನ್ ಎಂಬ ಹಳ್ಳಿಗೆ ಹೋದೆವು. ಜಾವನ್ ನಮ್ಮ ಚಾರಣ ಆರಂಭವಾಗುವ ಮೊದಲ ಹಳ್ಳಿ. ಇಲ್ಲಿಂದ ಮುಂದೆ 35 ಕಿಲೋಮೀಟರ್ ಕಾಲ್ನಡಿಗೆಯಷ್ಟೇ, ಸೈಕಲ್ ಹೋಗಲು ಕೂಡ ಸಾಧ್ಯವಿಲ್ಲ. ಜಾವನ್‌ನಲ್ಲಿ ಸಾಕಷ್ಟು ಟೆಂಟ್‌ಗಳು ಭರ್ತಿಯಾಗಿದ್ದರಿಂದ ಅಲ್ಲಿಂದ ಎರಡು ಕಿಲೋಮೀಟರ್ ಮುಂದೆ ನಡೆದು ಸಿಂಗಡ್ ಎಂಬ ಹಳ್ಳಿ ತಲುಪಿದೆವು. ನಮಗೆ ರಾತ್ರಿ ತಂಗಲು ಇಲ್ಲೊಂದು ಒಳ್ಳೆಯ ಹೋಮ್‌ಸ್ಟೇ ಸಿಕ್ಕಿತು. ರಾತ್ರಿ ಅಲ್ಲಿ ತಂಗಿದ್ದು, ಬೆಳಿಗ್ಗೆ ಮುಂದಿನ ಏಳು ದಿನದ ಸ್ನಾನವನ್ನು ಬಿಸಿ ನೀರಿನಲ್ಲಿ ಒಮ್ಮೆಲೇ ಮುಗಿಸಿ ಸ್ವಲ್ಪ ಹೊತ್ತು ಜಾಸ್ತಿಯೇ ಸ್ನಾನ ಮಾಡಿ, ಚಾರಣ ಆರಂಭಿಸಿದೆವು.

ಮೊದಲ ದಿನ ಸಿಂಗಡ್‌ನಿಂದ ತಚರು ಎಂಬ ಜಾಗದವರೆಗೆ ಸುಮಾರು 12 ಕಿಲೋಮೀಟರ್‌ಗಳ ಚಾರಣ. ಮೊದಲ ಒಂದು ಗಂಟೆ ಒಂದೆರೆಡು ಪರ್ವತ ಹತ್ತಿ ಇಳಿದೆವು. ನಂತರ ಸುಮಾರು ಎಂಟು ಗಂಟೆಗಳು ಕೇವಲ ಪರ್ವತವನ್ನು ಹತ್ತಿದ್ದೇ ಆಯಿತು. ಇಳಿಯುವ ಅಥವಾ ಸಮತಟ್ಟಾದ ದಾರಿಯೇ ಸಿಗಲಿಲ್ಲ.

ಎರಡನೇ ದಿನದ ಚಾರಣ ತಚರು ಇಂದ ಭೀಮ್ ತಲಾಯ್ ಎಂಬುವಲ್ಲಿಗೆ. ಇದು ಸುಮಾರು 12 ಗಂಟೆಗಳ ಚಾರಣ. ಈ ದಿನ ಕಾಳಿ ದೇವಸ್ಥಾನವಿರುವ ಒಂದು ಎತ್ತರದ ಪರ್ವತ ಹತ್ತಿ ಇಳಿಯುವುದಕ್ಕೆ ಸುಮಾರು ನಾಲ್ಕು ಗಂಟೆಗಳು ಬೇಕಾದುವು.

ಮೂರನೇ ದಿನ ಭೀಮ್‌ತಲಾಯ್‌ನಿಂದ ಭೀಮ್‌ದ್ವಾರ್ ಎಂಬುವಲ್ಲಿಗೆ 8 ಗಂಟೆಗಳ ಚಾರಣ. ಭೀಮ್‌ದ್ವಾರ್ ಎಂಟರಿಂದ ಹತ್ತು ಪರ್ವತಗಳ ಮಧ್ಯದಲ್ಲಿರುವ, ಸಮುದ್ರ ಮಟ್ಟದಿಂದ 13000 ಅಡಿ ಎತ್ತರದಲ್ಲಿರುವ ಒಂದು ಸಮತಟ್ಟಾದ ಜಾಗ. ಒಂದೊಂದು ಪರ್ವತದಲ್ಲೂ ಒಂದೊಂದು ಜಲಪಾತ. ಆ ಜಲಪಾತದ ನೀರೆಲ್ಲಾ ಈ ಕಣಿವೆಯಲ್ಲಿ ಹರಿಯುತ್ತಿರುವ ನದಿಗೆ ಸೇರಿಕೊಳ್ಳುತ್ತದೆ. ಎಲ್ಲ ಪರ್ವತಗಳ ಮೇಲೆಯೂ ಅದೆಷ್ಟು ವೈವಿಧ್ಯಮಯ ಬಣ್ಣಗಳು, ಪುಟ್ಟ ಪುಟ್ಟ ಹೂವುಗಳಿದ್ದವೋ, ಎಣಿಸಲು ಸಾಧ್ಯವೇ ಇಲ್ಲ. ಇಲ್ಲಿ ನೂರಕ್ಕೂ ಹೆಚ್ಚು ಟೆಂಟ್‌ಗಳಿದ್ದವು. ಛಾಯಾಗ್ರಹಣಕ್ಕೆ ಮತ್ತು ವೀಡಿಯೋ ಚಿತ್ರೀಕರಣಕ್ಕೆ ಇದೊಂದು ಸ್ವರ್ಗವೇ ಸರಿ. ಮೂರನೇ ದಿನ ಸಂಜೆ 5 ಗಂಟೆಗೆ ಭೀಮದ್ವಾರ್‌ಗೆ ಬಂದು ಊಟ ಮಾಡಿ ತಕ್ಷಣ ಮಲಗಿಬಿಟ್ಟೆವು. ಏಕೆಂದರೆ ಆ ರಾತ್ರಿ 1 ಗಂಟೆಗೆ ನಮ್ಮ ಮುಂದಿನ ದಿನದ ಚಾರಣ ಆರಂಭ.

ನಾಲ್ಕನೇ ದಿನದ ಚಾರಣ ರಾತ್ರಿ 1 ಗಂಟೆಗೆ ಆರಂಭವಾದರೆ ಮತ್ತೆ ನಾವು ಹಿಂದಿರುಗುವುದು ಮರುದಿನ ರಾತ್ರಿ 9 ಕ್ಕೆ. ಸುಮಾರು 18ರಿಂದ 21ಗಂಟೆಗಳ ಚಾರಣ. ಈ ದಿನ ನಾವು 13000 ಅಡಿ ಇರುವ ಭೀಮಧ್ವಾರದಿಂದ 17,150 ಅಡಿ ಎತ್ತರದಲ್ಲಿರುವ ಶ್ರೀಖಂಡ ಮಹಾದೇವನನ್ನು ನೋಡಿ ಮತ್ತೆ ಭೀಮದ್ವಾರ್‌ಗೆ ಹಿಂದಿರುಗಬೇಕು. ಈ ದಿನದ ಚಾರಣದಲ್ಲಿ ಮೊದಲಿಗೆ ಪಾರ್ವತಿ ಭಾಗ್ ಎಂಬ ಜಾಗವು ಸಿಗುತ್ತದೆ. ಇಲ್ಲಿಂದ ಮಾತ್ರ ಒಂದು ಚಿಕ್ಕ, ಅರ್ಧ ಅಡಿಯ ಕಲ್ಲಿನಂತೆ

ಮಹದೇವನ ದರ್ಶನ ಮಾಡಲು ಸಾಧ್ಯವಿದೆ, ಅದೂ ಬಹಳ ದೂರದಿಂದ, ಮೋಡವಿಲ್ಲದಿದ್ದರೆ ಮಾತ್ರ. ಸಾಕಷ್ಟು ಭಕ್ತರು ಇಲ್ಲೇ ದರ್ಶನ ಮುಗಿಸಿ ಹಿಂದಿರುಗುತ್ತಾರೆಂದು ನಾವು ಕೇಳಿದ್ದೇವೆ.

ಪಾರ್ವತಿ ಭಾಗ್ ಆದ ಮೇಲೆ ನಯನ ಸರೋವರ. ಶಿವನು ಅತಿ ದೂರದಲ್ಲಿ ನೆಲೆಸಿದನೆಂದು ಪಾರ್ವತಿಯು ಕಣ್ಣೀರಿಟ್ಟಳು. ಆ ಕಣ್ಣೀರಿನಿಂದಲೇ ಆದದ್ದು ಈ ನಯನ ಸರೋವರ ಎಂಬುದು ಪುರಾಣ ಕಥೆ. ದೊಡ್ಡ ದೊಡ್ಡ ಬಂಡೆ ಕಲ್ಲುಗಳು ಮತ್ತು ಗುಂಡುಕಲ್ಲುಗಳ ಮೇಲೆ ಚಾರಣ ಮಾಡುತ್ತಾ ಪರ್ವತ ಹತ್ತುವಲ್ಲಿಗೆ ಮಹಾದೇವ, ಇನ್ನೂ ಎಷ್ಟು ದೂರದಲ್ಲಿ ಇದ್ಯೆಪ್ಪಾ ನೀನು ಎಂದು ಎಲ್ಲರಿಗೂ ಅನಿಸುವುದರಲ್ಲಿ ಅನುಮಾನವಿಲ್ಲ. ಹಿಮದ ನದಿಗಳ ಮೇಲೆ ಸುಮಾರು ಎರಡು ಕಿಲೋಮೀಟರ್ ನಡೆಯುವುದಿರುತ್ತದೆ. ವರ್ಷದ ಮೊದಲ ದಿನದ ಚಾರಣದಲ್ಲೇ ಈ ಹಿಮದ ನದಿಯಿಂದ ಜಾರಿ ಒಬ್ಬ ಭಕ್ತ ಸಾವನ್ನಪ್ಪಿದ್ದರಿಂದ ಈಗ ಇಲ್ಲಿ ಹಗ್ಗ ಕಟ್ಟಿದ್ದಾರೆ. ಆ ಹಗ್ಗವನ್ನು ಭದ್ರವಾಗಿ ಹಿಡಿದುಕೊಂಡು ಚಾರಣ ಮಾಡಬೇಕು.

80 ಅಡಿ ಎತ್ತರದ ಐದು ಭಾಗಗಳಾಗಿರುವ ಕಲ್ಲುಗಳನ್ನು ಜೋಡಿಸಿದಂತಿರುವ, ಕೆಳಕ್ಕಿರುವ ಪರ್ವತದ ಭಾಗವಾಗಿ ಉಳಿಯದೇ ಕೇವಲ ಆ ಪರ್ವತದ ತುದಿಯಲ್ಲಿ ಇಟ್ಟಿರುವಂತಹ ಈ ಕಲ್ಲೇ ಶ್ರೀಖಂಡಮಹಾದೇವ.

ಆ ಮಹಾದೇವನ ದರ್ಶನವಾಗಿದ್ದೇ ತಡ ಎಲ್ಲಾ ಸುಸ್ತು ಹೋಗಿತ್ತು. ಕೇವಲ ಮನಸ್ಸಿನಲ್ಲಿ 'ಓಂ ನಮಃ ಶಿವಾಯ'' ಮಂತ್ರವಷ್ಟೇ ಇತ್ತು. ನಾನು ಮತ್ತು ನನ್ನ ಗೆಳೆಯ ಚೇತನ್ ಅಲ್ಲೇ ದೇವರ ಮುಂದೆ ಕುಳಿತು ಸುಮಾರು ಇಪ್ಪತ್ತು ನಿಮಿಷಗಳ ಕಾಲ ರುದ್ರ ವೇದ ಮಂತ್ರವನ್ನು ಪಠಿಸಿದೆವು. ಮನಸ್ಸು ಶೂನ್ಯವಾಗಿತ್ತು. ಅಲ್ಲಿಂದ ಹೊರಡಬೇಕಾದರೆ ಏನೋ ಮನಸ್ಸಿಗೆ ಹೊಳೆದಂತಾಗಿ, ''ಅಯ್ಯೋ ಫೋಟೋಗಳೇ ತೆಗೆಯಲಿಲ್ಲವಲ್ಲ'' ಎಂದು ಕೂಗಿ, ನಮ್ಮ ಗುಂಪಿನ ಎಲ್ಲರನ್ನು ಒಬ್ಬೊಬ್ಬರನ್ನಾಗಿ ಕರೆದು ಆ ಮಹಾದೇವನ ಮುಂದೆ ನಿಲ್ಲಿಸಿ ಫೋಟೋ ತೆಗೆದೆ. ವೀಡಿಯೋ ತೆಗೆಯುವುದು ಮರೆತೇ ಹೋಯಿತು. ಎಲ್ಲಾ ಶಿವಮಯವಾಗಿತ್ತಷ್ಟೇ.

ಇಲ್ಲಿಂದ ಮುಂದಿನ ತಂಗುದಾಣಕ್ಕೆ ಹೋಗಲು ಕನಿಷ್ಠ 9 ಗಂಟೆಗಳ ಅವಶ್ಯಕತೆ ಇದೆ, ಹಾಗಾಗಿ ಇಲ್ಲಿ ಮಧ್ಯಾಹ್ನ ಒಂದು ಗಂಟೆಗೆ ಎಲ್ಲಾ ಚಾರಣಿಗರನ್ನು ಅದಕ್ಕಾಗಿ ನೇಮಿಸಿರುವ ಸಿಬ್ಬಂದಿ ಅವರ ಜೊತೆಗೇ ವಾಪಸ್ ಕರೆದುಕೊಂಡು ಬರುತ್ತಾರೆ. ನಾವು ಭೀಮದ್ವಾರಕ್ಕೆ ತಲುಪಲು ಇನ್ನೂ ಎರಡು ಗಂಟೆಗಳ ಚಾರಣದ ಅವಶ್ಯಕತೆ ಇತ್ತು. ಆದರೆ ಕತ್ತಲಾಗಿದ್ದರಿಂದ ಪಾರ್ವತೀ ಭಾಗ್‌ನಲ್ಲಿ ಟ್ರಸ್ಟಿನ ಸಿಬ್ಬಂದಿಗಾಗಿ ನಿರ್ಮಿಸಿರುವ ತಾತ್ಕಾಲಿಕ ಟೆಂಟಿನಲ್ಲೇ ತಂಗಿದೆವು. ಇಲ್ಲೇ ಊಟದ ವ್ಯವಸ್ಥೆಯೂ ಇತ್ತು.

5ನೇ ದಿನ ಮೂರು ಗಂಟೆಗಳ ಚಾರಣ ಮಾಡಿ ಭೀಮದ್ವಾರ್ ತಲುಪಿ ಅಲ್ಲೇ ಆ ದಿನ ಪೂರ್ತಿ ವಿರಾಮಿಸಿದೆವು. ಹಿಂದಿನ ದಿನದ ಚಾರಣದಿಂದ ಸುಸ್ತಾಗಿದ್ದೆವು, ಮತ್ತು ಭೀಮದ್ವಾರ್‌ನಲ್ಲಿ ಸ್ವಲ್ಪ ಛಾಯಾಗ್ರಹಣ ಮಾಡುವ ಆಸೆಯೂ ಇತ್ತು.

6ನೇ ದಿನ ಭೀಮ್‌ದ್ವಾರ್‌ನಿಂದ ಭೀಮ್ ತಲಯ್ ದಾಟಿ ನೇರ ತಚರು ಪ್ರದೇಶಕ್ಕೆ ಬಂದೆವು. ಈ ದಿನ ನಾವು 12 ಗಂಟೆಗಳ ಕಾಲ ನಡೆದು ಒಂದೇ ದಿನದಲ್ಲಿ ಎರಡು ದಿನದ ಚಾರಣ ಮುಗಿಸಿದ್ದೆವು.

6ನೇ ದಿನ ತಚರುವಿನಿಂದ ಸಿಂಗಡ್‌ಗೆ ಬಂದಾಗ ನಮ್ಮ ಚಾರಣ ಸಂಪೂರ್ಣವಾಗಿ ಮುಗಿದಿತ್ತು.

ನಾನು ಹೊರಗಿನವನಾದರೂ ತಮ್ಮ ಕುಟುಂಬದ ಒಬ್ಬ ಸದಸ್ಯನೇ ಎಂಬಂತೆ ನನ್ನನ್ನು ನೋಡಿಕೊಂಡ ಅಮರನಾಥ್, ಶ್ರೀವಿದ್ಯಾ, ಪ್ರವೀಣ್, ನಾಗೇಂದ್ರ, ಗುರುಪ್ರಸಾದ್, ಸಂಧ್ಯಾ ಹಾಗೂ ಗೆಳೆಯ ಚೇತನ್‌ಗೆ ಧನ್ಯವಾದಗಳನ್ನು ತಿಳಿಸಲೇಬೇಕು. ಇವರುಗಳ ಜೊತೆಗೆ ಹೋಗಿ ಆ ಮಹದೇವನನ್ನು ನೋಡಿದ್ದು ನನ್ನ ಯಾವುದೋ ಜನ್ಮದ ಅದೃಷ್ಟವೇ ಸರಿ.

***

ತಂಗಾಳಿ

- ವೆಂಕಟೇಷ ಕಾಮತ್, ಉಡುಪಿ

ಭಾಗ-೧

ದೂರ ಬೆಟ್ಟದ ಮೇಲೆ ಗಂಟೆ ಬಾರಿಸಿದಾಗ ಒಂದು ಮಧುರವಾದ ಅಲೆ ಹೃದಯದಲ್ಲಿ ಭಕ್ತಿ ಮೂಡಿಸುತ್ತಿತ್ತು. ನಿರಾಕಾರವಾದ ಶಕ್ತಿಯೊಂದನ್ನು ಭಗವಂತನೆಂದು ನಂಬುವೆನೇ ವಿನಃ ಈ ಆಡಂಬರವಾಗಿ ತಮ್ಮ ತಮ್ಮ ಅರಿವಿಗೆ ತಕ್ಕಂತೆ ನೂರೊಂದು ದೇವರನ್ನೂ ಅವರ ಭಕ್ತರನ್ನೂ ನಂಬಲು ನನ್ನ ಮನಸ್ಸು ಎಂದಿಗೂ ಒಪ್ಪುವುದಿಲ್ಲ ಎಂದು ವಾದಿಸುವ ಸೌದಾಮಿನಿಯ ಹೃದಯದಲ್ಲಿ ಎನೋ ಒಂದು ಮಧುರ ಭಾವ ಮನಸ್ಸಿನ ತರ್ಕಕ್ಕೆ ಮೀರಿ ಉಲ್ಲಾಸವನ್ನು ಕೊಡುತ್ತಿತ್ತು.

ಸುಂದರವಾದ ಪುಟ್ಟ ದೇಗುಲದ ಹೊರಗೆ ಹರಡಿ ನಿಂತಿರುವ ಆ ಮರದ ಕೆಳಗೆ ಕಲ್ಲುಹಾಸಿನ ಮೇಲೆ ಕುಳಿತು ಕೆಳಗಿನ ಊರನ್ನು ನೋಡುತ್ತಾ ಇರುವಾಗ ಜಗಜಗ ಉರಿಯುವ ಸೂರ್ಯನು ಆವರಿಸುತ್ತಿರುವ ಕತ್ತಲ ಆಕ್ರಮಣಕ್ಕೆ ಸೋಲುತ್ತಿರುವಾಗ, ನೀ ಅಲ್ಲೇ ಇರು.. ನಿನಗೆ ಇಲ್ಲಿ ನಮ್ಮಲ್ಲಿ ಜಾಗವಿಲ್ಲ ಎಂದೆನುತ ಮನೆಮನೆಯ ಬಿಳಿ ಹಳದಿ ದೀಪಗಳು ಒಂದೊಂದೇ ಹೊತ್ತಿ ಉರಿಯತೊಡಗಿದಾಗ ಹೆಚ್ಚು ಪ್ರಕಾಶಮಾನವಾದ ಬೀದಿದೀಪಗಳು ಬೆಳಕಿನ ಹಾಸಿಗೆಗೆ ಮೆರಗುಕೊಟ್ಟವು. ದೂರ ಕುಳಿತ ಆ ಗುಂಗುರು ಕೂದಲ ತರುಣ ಜಗತ್ತಿನ ಪರಿವೆ ಇಲ್ಲದೆ ತನ್ನನ್ನೆ ತಾನು ಮರೆತು ಕೊಳಲ ನುಡಿಸುತ್ತಿದ್ದ. ಒಂದು ಕ್ಷಣ ಜಗತ್ತು ಚಲನೆ ಇಲ್ಲದೆ ನಿಂತಿತು. ಅವನ ಕೊಳಲನಾದವನ್ನು ಬಿಟ್ಟರೆ ಬೇರೆನೂ ಇಲ್ಲ.

ಮಿನಿಯ ಆನಂದಕ್ಕೆ ಮಿತಿಯೇ ಇಲ್ಲ. ಮಂತ್ರಮುಗ್ಧಳಾದಳು. ನಿಲ್ಲಿಸಬೇಡಾ... ನಿರಂತರವಾಗಿ ನುಡಿಸುತ್ತಿರು... ನನಗಾಗಿ... ನಮ್ಮಿಬರಿಗಾಗಿ. ಸಮೀಪ ಹೋಗಿ ಎಲ್ಲಾ ಧೈರ್ಯಕೂಡಿಸಿ ಕೇಳಿಯೇಬಿಟ್ಟಳು.

"ನಾನು... ಸೌದಾಮಿನಿ. ಎಲ್ಲರೂ "ಮಿನಿ"ಯೆಂದೇ ಕರೆಯುತ್ತಾರೆ. ನಿನ್ನ ಹೆಸರೇನು?" ನೀನು ಕೊಳಲನ್ನು ಬಹಳ ಅದ್ಭುತವಾಗಿ ನುಡಿಸುತ್ತೀ. ಬಹಳ.. ಬಹಳ..." ಅಪರಿಚಿತ ಗಂಡಸಿನೊಡನೆ ಏನು ಮಾತನಾಡುತ್ತಿದ್ದೇನೊ. ಅರಿವಾಗಿ ಸ್ವಲ್ಪ ನಾಚಿಕೆಯಿಂದಲೇ ಮಾತು ನಿಲ್ಲಿಸಿ ಉತ್ತರಕ್ಕಾಗಿ ಆತನ ಮುಖ ನೋಡಿದಳು.. ಆತ ಎರಡು ಕ್ಷಣ ಮುಖವನ್ನೇ ನೋಡಿ... ಮುಗುಳ್ನಗೆ ಕೊಟ್ಟು, ಬಹಳ ಆರಾಮದಿಂದ ವರುಷಗಳ ಪರಿಚಯವಿದ್ದಂತೆ ಒಂದು ನಮಸ್ಕಾರವನ್ನು ಸಲ್ಲಿಸಿ... ಕೊಳಲು ಹಿಡಿದ ಕೈಯನ್ನು ಎತ್ತಿ ಗಾಳಿಯಲ್ಲಿ ಅಲ್ಲಾಡಿಸುತ್ತಾ ಬೈ ಬೈ ಅಂದಂತೆ ಸಂಜೆಯ ಕತ್ತಲ್ಲಲ್ಲಿ ಕರಗಿಹೋದ.

ಆತ ಖಂಡಿತ ಮೂಕನೇ ಇರಬೇಕು ಪಾಪ... ಎನ್ನುತ್ತಾ ಮರೆಯೋಣ ಅವನ್ನನ್ನು ಅಂದರೆ ಮತ್ತೆ ಮತ್ತೆ ಅವನದೇ ನೆನಪು, ಅವನ ಕೊಳಲನಾದ. ಮತ್ತೆಮತ್ತೆ ಹೋಗತೊಡಗಿದಳು. ಕೆಲವೊಮ್ಮೆ ಹತ್ತಿರದಿಂದ ಮತ್ತೆ ಕೆಲವೊಮ್ಮೆ ಸ್ವಲ್ಪ ದೂರದಿಂದಲೇ ಕೇಳುವಳು. ವಾರದಲ್ಲಿ ಒಂದೆರಡು ಸಲ ಕೇಳದಿದ್ದರೆ ಮನಶ್ಯಾಂತಿ ಇರುತ್ತಿರಲ್ಲಿಲ್ಲ. ಅವನೆಂದಾದರೊಮ್ಮೆ ಅಲ್ಲಿ ಕಾಣದಾದಾಗ ಅವನು ಮರಳಿ ಬರುವವರೆಗೆ ನಿತ್ಯ ಹೋಗುವಳು. ಅವನ ವಶೀಕರಣಕ್ಕೆ ಸಂಪೂರ್ಣ ಒಳಗಾಗಿದ್ದೇನೆ, ಇದು ಸರಿ ಅಲ್ಲಾ ಅಂದುಕೊಳ್ಳುವಳು.

ಹೆಸರಿಲ್ಲದ ಅವನಿಗೆ ಅವಳಿಟ್ಟ ಪ್ರೀತಿಯ ಹೆಸರು.. "ತಂಗಾಳಿ"

ಭಾಗ- ೨

ಮಿನಿ... ಮಿನಿ... ಮಿನಿ.. ಮಿನಿ...ಎಲ್ಲರ ಬಾಯಲ್ಲೂ ಒಂದೇ ಹೆಸರು.

ನಿಶ್ಚಿತಾರ್ಥ ಸಂಜೆ ಏಳಕ್ಕೆ. ಮಿನಿ ಹೇಳಿದಂತೆಯೇ ಎಲ್ಲವೂ ಆಗಬೇಕು. ಮಿನಿ-ಮದನ ಅದ್ಭುತ ಜೋಡಿ. ಸುಮಾರು ಆರು ತಿಂಗಳ ಮೊದಲಿಂದ ತಿರುಗಾಡಿ, ನಿತ್ಯ ಮಾತನಾಡುತ್ತಾ ಒಬ್ಬರನೊಬ್ಬರು ಅರಿತಿದ್ದಾರೆ. ಎರಡು ಕುಟಂಬಗಳಿಗೂ ಅಂತಸ್ತಿನ ಹೊಂದಾಣಿಕೆ ಇದೆ.

ಮಿನಿ ತನ್ನ "ತಂಗಾಳಿ"ಯನ್ನು ಬಹಳ ಕಷ್ಟಪಟ್ಟು ಮರೆಯಲು ಪ್ರಯತ್ನಿಸಿದ್ದಾಳೆ. ಆದರೂ ಸುಂದರ ಕೊಳಲನಾದ ಮನಸ್ಸನ್ನು ವಿಚಲಿತಗೊಳಿಸುತ್ತದೆ.

ಮದನನೊಂದಿಗೆ ಮದುವೆಯಾಗುವ ನಿರ್ಧಾರ ಅವಳದ್ದೇ.

ಮುಚ್ಚುಮರೆಯಿಲ್ಲದೆ ತನ್ನ "ತಂಗಾಳಿ"ಯ ಆಕರ್ಶಣೆ, ಪ್ರೇಮದ ಬಗ್ಗೆ ಹೇಳಿಕೊಂಡಿದ್ದಾಳೆ. ಮದನನೆಂದಾದರೂ ತನ್ನ ತಂಗಾಳಿಯ ಬಗ್ಗೆ ಹಗುರವಾಗಿ ಮಾತನಾಡಿದರೆ ಅವಳಿಗೆ ಸಹಿಸಲಸಾಧ್ಯ ಕೋಪ. ಈ ಬಗ್ಗೆ "ಜಾಗ್ರತೆ" ಎಂದು ಚಿತಾವಣಿ ಕೊಟ್ಟಿದ್ದಾಳೆ. ತಂದೆ-ತಾಯಿಯರ ಒಬ್ಬಳೇ ಮುದ್ದಿನ ಮಗಳೆಂದೂ, ತಮ್ಮಷ್ಟು ಸಿರಿವಂತರಲ್ಲದಿದ್ದರೂ ಮುಂದೆ ಎಲ್ಲಾ ಆಸ್ತಿಯೂ ಅವಳದ್ದೇ ಎಂದೂ, ಮದನ ಒರಟನಾಗಿದ್ದರೂ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಹೋಗುತ್ತಿದ್ದಾನೆ. .

ಆದರೂ ಇತ್ತೀಚೆಗೆ ಮಿನಿಗೆ ಆತನ ಮತ್ತು ಆತನ ತಂದೆ-ತಾಯಿಯರ ಬೇಡಿಕೆಗಳು ಅಸಮಂಜಸವಾದವೆನಿಸುತ್ತಿದೆ. ಚಿನ್ನದ ಮೊಟ್ಟೆ ಇಡುವ ಕೋಳಿಯ ಹೊಟ್ಟೆ ಸೀಳುತ್ತಿದ್ದಾರೆನೋ ಎನಿಸುತ್ತಿದೆ. ಮೊದಮೊದಲು ತಮಗೆ, ತಮ್ಮ ಮಗನಿಗೆ ಏನೂ ಬೇಡಾ ಅನ್ನುತ್ತಿದ್ದವರು ಈಗ ವರೋಪಚಾರದಲ್ಲಿ, ತಮ್ಮೊಂದಿಗೆ ಬರುವ ಸಂಬಂಧಿಗಳಿಗೆಲ್ಲಾ ಏನೇನು ಕೊಡುತ್ತೀರಿ? ವರನಿಗೆ ಆ ಸೂಟು ಬೇಡ. ನಮ್ಮ ಹುಡುಗನ ಅಂತಸ್ತಿಗೆ ತಕ್ಕಂತೆ ಬ್ರೆಂಡೆಡ್ ಬೇಕು. ಸಣ್ಣ ಕಾರು ಅಲ್ಲಾ ದೊಡ್ಡದಾಗಬೇಕು ಅನ್ನುವುದಲ್ಲದೆ, ಅಷ್ಟು ನೀವು ಮಾಡಬಹುದಪ್ಪಾ.. ನಿಮಗೆ ಸಾಧ್ಯವಿದೆ. ಒಬ್ಬಳೇ ಮಗಳಲ್ಲವಾ... , ಇತ್ಯಾದಿ.

ಮಿನಿಗೆ ತಾನು ಎಲ್ಲಾ ವಿಷಯಗಳಲ್ಲೂ ಮದನನಿಗಿಂತಲೂ ಹೆಚ್ಚಿನ ಸ್ಥಾನದಲ್ಲಿ ಇದ್ದು ಕೇವಲ ಹೆಣ್ಣೆಂಬ ಒಂದೇ ಕಾರಣಕ್ಕೆ ಈ ರೀತಿಯ ಬೇಡಿಕೆಗಳನ್ನು ಮದನನ ಮನೆಯವರು ತನ್ನ ತಂದೆ-ತಾಯಿಯರ ಮೇಲೆ ಹೇರುವುದು ಅತಿಯಾದ ಹಿಂಸೆಯನ್ನು ಕೊಡುತ್ತಿತ್ತು.. ಅದರೊಂದಿಗೆ ಅವಳ ಪ್ರೀತಿಯ ಮುದ್ದು ತಂದೆ, "ನಿನಗ್ಯಾಕಮ್ಮಾ ಆ ತಲೆಬಿಸಿ ಎಲ್ಲಾ. ಸುಮ್ಮನೆ ನಿನಗೆ ಏನು ಸೀರೆ, ಏನು ಡ್ರೆಸ್ಸು, ಏನು ಮೆಕಪ್... ಅಂತ ಎಲ್ಲಾ ಯೋಚಿಸು. ನಿನ್ನ ಪ್ರೀತಿಯ ಅಪ್ಪನಿಗೆ ಏನೂ ಕಷ್ಟ ಆಗೋಲ್ಲ" ಅಂದಾಗ ಕೋಪದ ಅಗ್ನಿಗೆ ತುಪ್ಪ ಸುರಿದಂತೆ ಆಗುತ್ತಿತ್ತು..

ಸಂಜೆ ೬ಕ್ಕೆ ಎಲ್ಲರೂ ಸಂಸಾರಸಮೇತ ಬಂದು ಹಾಲ್ ತುಂಬಿತ್ತು. ಮದನ ಮತ್ತು ಅವನ ತಂದೆ ತಾಯಿ, ಹಿರಿಯರು ಎತ್ತರದ ವೇದಿಕೆಯ ಮೇಲೆ ಕುಳಿತಿದ್ದಾರೆ. ಮಿನಿಯ ತಂದೆ-ತಾಯಿ ಕೈ ಜೋಡಿಸಿ ವೇದಿಕೆಯ ಮೇಲಿಂದಲೇ ಮುಗುಳ್ನಗೆಯೊಂದಿಗೆ ಎಲ್ಲರಿಗೂ ಸ್ವಾಗತ ಕೋರುತ್ತಿದ್ದಾರೆ.

ಸರ್ವಾಲಂಕಾರ ಶೋಭಿತೆಯಾಗಿ ಸೌದಾಮಿನಿ ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ಬರುತ್ತಿದ್ದಂತೆ ಆಕೆಯ ಮನಸ್ಸು ವಿಚಲಿತವಾಗಿದೆ. ಒಮ್ಮೆ ಬೆಟ್ಟದ ಮೇಲಿನ ದೇವರ ನೆನಪು ಮೊದಲು ಬಂದಿತೊ, ಅದರ ಘಂಟೆಯ ಸದ್ದು ಕೇಳಿಸಿತೊ... ಅರಿವಾಗಲೂ ಸಮಯವಿರಲ್ಲಿಲ್ಲ. ಹೃದಯದಲ್ಲಿ ಒಂದು ಮಧುರ ಭಾವನೆ ಸುಳಿದು "ತಂಗಾಳಿ" ಒಳಹೊಕ್ಕಿತು. ನಿಶ್ಯಬ್ದ... ನಿಶ್ಯಬ್ದದ ಹಿಂದೆಯೇ... ಮೆಲ್ಲಮೆಲ್ಲನೆ ದೂರದಿಂದ ಕೇಳಬಂದಿತು ಮಿನಿಯ ಅತ್ಯಂತ ಪ್ರಿಯವಾದ "ತಂಗಾಳಿ"ಯ ಕೊಳಲನಾದ. ಆತ ಹೊರಗಿಂದಲೇ ತನ್ನ ಕೈ ಚಾಚಿದ. ಜನುಮ ಜನುಮದಿಂದ ಕಾಯುತ್ತಿರುವವಳಂತೆ ಮಿನಿ ಆತನ ಚಾಚಿದ ಹಸ್ತವನ್ನು ಹಿಡಿದು ಅವನೊಡನೆ ನಡೆದಳು. ಒಂದೊಂದೇ ಹೆಜ್ಜೆ... ದೂರ ಬೆಟ್ಟದ ಕಡೆಗೆ...

"ಬಹಳ ದಣಿದಿರುವೆ, ಒಂದು ಘಳಿಗೆ ಕುಳಿತು ಸುಧಾರಿಸಿ ಕೊಳ್ಳೋಣ" ಎಂದಾಗ ಅವನು ಮಾತನಾಡಲೂ ಬಲ್ಲ ಎಂದು ತಿಳಿದ ಅವಳು ಆಶ್ಚರ್ಯದಿಂದ ಕೇಳಿದಳು, "ಎಲ್ಲಿ ಹೋಗಿದ್ದೆ... ಎಲ್ಲಿಗೆ ಹೋಗಿದ್ದ ... ನೀ ನನ್ನ ಬಿಟ್ಟು?"

"ಅಂದು ನಿನ್ನನು ಕಂಡಾಗ ನಾನು ಮೂಕನಾಗಿದ್ದೆ. ಅದೊಂದು ದುರ್ಘಟನೆಯಲ್ಲಿ ಸಹಾಯಕ್ಕಾಗಿ ಚೀರುತ್ತಾ ಚೀರುತ್ತಾ.. ನಾನು ಮಾತನಾಡುವ ಶಕ್ತಿಯನ್ನು ಕಳೆದುಕೊಂಡಿದ್ದೆ. ಮತ್ತೆ ಮಾತನಾಡಬೇಕೆಂಬ ಬಯಕೆಯೂ ಇರಲಿಲ್ಲ. ನಿನ್ನನ್ನು ಅಂದು

ನೋಡಿದ ಮೇಲೆಯೇ. ನನ್ನಲ್ಲಿ ಮತ್ತೆ ಮಾತನಾಡಬೇಕೆಂಬ ಹಂಬಲ ಮೂಡಿತು. ನಾನು ಕೇರಳದ ಆಯುರ್ವೇದ ಹಾಗೂ ಪ್ರಕೃತಿ ಚಿಕಿತ್ಸೆಗಾಗಿ ಅಲ್ಲಿಯ ಗುಡ್ಡಗಾಡುಗಳಲ್ಲಿ ಆರು ತಿಂಗಳಿದ್ದು ಸಂಪೂರ್ಣ ಗುಣಮುಖನಾಗಿ ನಿನಗಾಗಿ ಬಂದಿರುವೆ''..

ಆಕೆಗೆ, ಮನದ ಮೂಲೆಯಲ್ಲಿ ಬೆಟ್ಟದ ಮೇಲಿನ ವೇಣುಗೋಪಾಲನ ಮುಖದ ದರುಶನವಾದಂತೆನಿಸಿತು. ಮನಸ್ಸಿನಲ್ಲೇ ಧನ್ಯವಾದಗಳನ್ನರ್ಪಿಸಿದಳು.

ಮೆಲ್ಲನೆ ಕೇಳಿದಳು. ''ನಾನು ಸೌದಾಮಿನಿ. ಮಿನಿ ಎಂದೇ ಕರೆಯುತ್ತಾರೆ ಎಲ್ಲರೂ ಪ್ರೀತಿಯಿಂದ. ನಿನ್ನ ಹೆಸರೇನು?''

ಆತ ಅತೀ ಮಧುರವಾದ ಧ್ವನಿಯಲ್ಲಿ ಹೇಳಿದ....

''ನಾನು ತಂಗವೇಲು... "ತಂಗಾಳಿ" ಎಂದೇ ಕರೆಯುತ್ತಾರೆ ಎಲ್ಲರೂ ಪ್ರೀತಿಯಿಂದ''

***

ಕೇಸರಿ ಬಿಳಿ ಹಸಿರು ಮೂರು

– ಎಲ್. ಗಿರಿಜಾ ರಾಜ್

ಕೇಸರಿ ಬಿಳಿ ಹಸಿರು ಮೂರು ಬಣ್ಣ ನಡುವೆ ಚಕ್ರವು!
ಪದ್ಯ ಮರೆತಿಲ್ಲ ಸದ್ಯ!
ಉರು ಹೊಡೆದು ಮೇಸ್ಟರಿಗೆ ಒಪ್ಪಿಸುವಾಗ, ಬಾಯ್ತಪ್ಪಿ,
ಬೆತ್ತದೇಟಿನ ರುಚಿ ತಿಂದಿದ್ದು ಮರೆತಿಲ್ಲ ಸದ್ಯ!
ಅಂದು,

ಎಳೆಯ, ಬಿಳಿಯ ಮನಸಿನಲಿ
ಭಕ್ತಿ ಭಾವ ಬಿತ್ತಿ ಬೆಳೆಸಿತ್ತು
ಬಾಂದಳದ ನೀಲಿ ಹಿನ್ನೆಲೆಯ ಈ ತ್ರಿವರ್ಣ ಚೇತನ,
ಹಾರಾಡುವಾಗ ನನ್ನ ಮನ ಮಯೂರ ಗರಿಗೆದರಿತ್ತು...
ಭಾರತೀಯತೆ ಕಣಕಣದಲ್ಲಿ
ಹಾಸು ಹೊಕ್ಕಾಗಿತ್ತು...

ಇಂದು ಸ್ವಾತಂತ್ರ್ಯ ದಿನ, ನೋಡು ನೋಡುತಿರುವ ಹಾಗೆ,
ಬಾನ್ನೀಲಿ ಕಾಲಕೂಟದ ವಿಷವಾಗಿ,
ಮೂರು ನೂರು ಬಣ್ಣವಾಗಿ,
ಕೊನೆಗೆಲ್ಲ ಕಲಸಿ ಹೋಗಿ ರಕ್ತವರ್ಣ ರೌದ್ರವಾಗಿ
ರಾಚಿ ಬೆಚ್ಚಿಸಿತು...

ತೆರೆದು ಕೊಂಡಿತು, ಭಾರತದ ಬದುಕಾಟ
ಪದರ ಪದರವಾಗಿ...

ನಿರ್ದಯ ಬಂದೂಕಿಗೆ ಎದೆಯೊಡ್ಡಿ ಬದುಕು ತೆತ್ತವರ
ನೇಣಿಗೆ ಗೋಣು ಒಡ್ಡಿದವರ
ನಮ್ಮ ಇಂದಿನ ಮಜಕಾಗಿ, ಸಜಾ ಅನುಭವಿಸಿದ
ಕಾರುಣ್ಯ ಸಿಂಧುಗಳ ಋಣವಿದೆ ನಮ್ಮ
ತಲೆಯ ಮೇಲೆ! ಕಣಕಣದಲಿ
ಋಣಭಾರ ಹೊತ್ತು, ಸಣ್ಣತನ
ಮೈಗೂಡಿಸಿಕೊಂಡ ಋಣಪಾತಕರು ನಾವು!

ಬಾರುಗಳಲ್ಲಿ ನನ್ನ ಜನ ಕಂಠಮಟ್ಟ
ಕುಡಿದು ತೂರಾಡುವಾಗ, ಗಾಂಧಿ ಕನಸುಗಳು
ಚೂರಾಗುವುದ ಕಾಣುತ್ತೇನೆ!

ಸಿರಿವಂತಿಕೆಯ ಡೌಲಿನಲ್ಲಿ,
ಆಡಂಬರದ ಮದುವೆಗಳಲ್ಲಿ,
ಝಗಮಗಿಸುವ ವಿದ್ಯುದ್ದೀಪಗಳ ಕೆಂಪು ಬೆಳಕಿನ
ಹೊನಲಿನಲ್ಲಿ, ಗರಿಮುರಿ ರೇಷ್ಮೆಗಳ ಸರಬರ ಸರಿದಾಟದಲ್ಲಿ,
ಕೆಂಪುಬಣ್ಣ ಢಾಳಾಗಿ ಮೆತ್ತಿದ,
ಉನ್ಮತ್ತ ತುಟಿಗಳ ಕೃತಕ ಹಾಸದಲಿ
ಸೂಟು, ಟೈಗಳ ಅಟ್ಟಹಾಸಗಳಲಿ
ಎಲೆಯ ಮೇಲೆ ಅನಾಥವಾಗಿ
ಬಿದ್ದಿರುವ ಭಕ್ಷ್ಯಭೋಜ್ಯ ಶೇಷಾನ್ನಗಳಲಿ,

ಮೇಜವಾನಿಯ ಮೋಜು ನಡೆಸುವ
ದೊಡ್ಡವರ ಷೋಕಿಯಲಿ, ಚಿಕ್ಕವರ ಕನಸುಗಳು
ಹುಡಿಗಿಂತ ಕಡೆಯಾಗಿ ಹೊರಳುವುದ ಕಾಣುತ್ತೇನೆ;
ಭವ್ಯ ಭಾರತದ ನವನಾಗರೀಕ
ಕಣ್ಣುಗಳೋ ಹುಣ್ಣುಗಳೋ..

ಅಲ್ಲಿ ಇನ್ನೊಂದೆಡೆ ಎಂಜಲೆಲೆಯ ತೊಟ್ಟಿಗೆ ಮುಗಿಬಿದ್ದು,
ಕಿತ್ತಾಡುವ ನಾಯಿಗಳು!
ಅನ್ನ ಕಾಣದ ಬಾಯಿಗಳು
ಹರಕು ಚಿಂದಿ ಉಟ್ಟ ದರಿದ್ರ ನಾರಾಯಣರು!

ಒಂದೆಡೆ ಮೋಜಿನ ವ್ಯವಹಾರ
ಮೇಜಿನ ಕೆಳಗೆ ಭ್ರಷ್ಟಾಚಾರ!
ಇನ್ನೊಂದೆಡೆ ಹಿಡಿಕೂಳಿಗೆ
ಹಾಹಾಕಾರ! ಸತ್ತು ಸತ್ತು ಬದುಕುತ್ತಿರುವವರ ನರಕ
ಯಾತನೆ! ಸಾಕಿನ್ನು ವೇದನೆ!
ಎನಿಸಿ ಕಣ್ಮುಚ್ಚುತ್ತೇನೆ!

ಅಂದು ಕೋವಿಗೆ, ನೇಣಿಗೆ, ನೋವಿಗೆ
ಎದೆಯೊಡ್ಡಿ, ಕೊರಳೊಡ್ಡಿ
ಮಣ್ಣಾದವರೆಲ್ಲ ಒಟ್ಟಿಗೇ
ನೆಲದೊಳಗಿನಿಂದ ಎದ್ದು
ಬಂದು ಆತ್ಮಸಾಕ್ಷಿಯ ಕತ್ತು
ಹಿಚುಕಿದಂತಾಗಿ ಬೆಚ್ಚುತ್ತೇನೆ

***

ಮೂರು ಕಥೆ ಮೂರು ದೆಶೆ

– ಕೆ.ಎನ್. ಭಗವಾನ್

ಅಂಚೆಯಾತ ಮನೆ ಬಾಗಿಲಿಗೆ ಬಂದು ಕರೆಗಂಟೆಯ ದನಿ ಮಾಡಿದ. ನಾನು ಹೊರಬಂದೆ. ಆತ 'ನಿಮಗೊಂದು ರಿಜಿಸ್ಟರ್ಡ್ ಪೋಸ್ಟ್ ಇದೆ. ಇಲ್ಲಿ ಸೈನು ಮಾಡಿ' ಅಂತ ಇಂಟೂ ಮಾರ್ಕಿನ ಜಾಗ ತೋರಿಸಿದ. ನಾನು ಸಹಿ ಮಾಡಿ ಲಕೋಟೆಯನ್ನು ತಗೊಂಡೆ. ಅದರ ಹಿಂಬದಿಯಲ್ಲಿ 'ಫ್ರಮ್ ದಿ ಎಡಿಟರ್, ಸಂಜೆವಾಣಿ ಡೈಲಿ' ಎಂಬ ಮೊಹರು ಇತ್ತು. ಮತ್ತಾರಿಗೋ ಕಳಿಸಬೇಕಾಗಿದ್ದನ್ನು ತಪ್ಪಾಗಿ ನನಗೆ ಕಳಿಸಿರಬಹುದೇ! ಇಲ್ಲ, ಹೆಸರು, ವಿಳಾಸ ಸರಿಯಾಗೇ ಇದೆ. ಲಕೋಟೆಯಲ್ಲಿ ಇರೋದು ಒಂದು ಸಾವಿರ ರೂಗಳ ಚೆಕ್! ಸಂಜೆವಾಣಿಗೂ ನನಗೂ ಯಾವುದೇ ಅಕ್ಷರ ಸಂಬಂಧವಿಲ್ಲ. ಆ ದಿನಪತ್ರಿಕೆ ಕಥೆ, ಕವನ, ಪ್ರಬಂಧ ಇತ್ಯಾದಿಗಳನ್ನು ಪ್ರಕಟಿಸೋದೂ ಇಲ್ಲ. ಚೆಕ್ ಜೊತೆಗಿರುವ ಸೂಚನಾ ಪತ್ರದಲ್ಲಿ 'ನಿಮ್ಮದೊಂದು ಕಥೆಯನ್ನು ಸಂಜೆವಾಣಿಯ ದೀಪಾವಳಿ ವಿಶೇಷ ಪುರವಣಿಯಲ್ಲಿ ಬಳಸಿಕೊಳ್ಳಲಾಗಿದೆ. ಅದಕ್ಕಾಗಿ ಈ ಸಂಭಾವನೆ. ದಯವಿಟ್ಟು ಸ್ವೀಕರಿಸಿ. ಇತಿ..' ಎಂಬ ವಿನಂತಿ!

ನಿಜಕ್ಕೂ ಈ ಪತ್ರಿಕೆಯ ಕಚೇರಿ ಎಲ್ಲಿದೆ, ಸಂಪಾದಕರಾರು? ತಿಳಿಯದು. ಕನ್ನಡ ಚಳವಳಿಯ ಗೆಳೆಯನೊಬ್ಬನಿಂದ ಆ ಪತ್ರಿಕಾ ಕಚೇರಿ ಹಲಸೂರಿನಲ್ಲಿದೆ, ಅದರ ಸಂಪಾದಕ ಶಿವಸುಬ್ರಹ್ಮಣ್ಯ ಎಂದೂ ತಿಳಿದುಬಂತು. ಹೆಚ್ಚಿನ ವಿವರ ಆತನಿಗೂ ತಿಳಿಯದು. ಅದೇ ಸಂಜೆ ಆ ಪತ್ರಿಕೆಯನ್ನು ಕೊಂಡು, ಅದರಿಂದ ಕಚೇರಿಯ ಫೋನ್ ನಂಬರ್ ತಿಳಿದು ಸಂಪರ್ಕಿಸಿದಾಗ ಒಬ್ಬ ಮಹಿಳೆ ಸ್ಪಂದಿಸಿದಳು. 'ಸಂಪಾದಕರು ಇನ್ನೂ ಎರಡು ದಿನ ಸಿಗಲ್ಲ. ಏನಾಗಬೇಕಿತ್ತು?'ಎಂಬ ಪ್ರಶ್ನೆಯೊಂದಿಗೆ!

'ನಿಮ್ಮ ಕಚೇರಿಯಿಂದ ನನ್ನ ಹೆಸರಿಗೊಂದು ಚೆಕ್ ಬಂದಿದೆ. ಇದರ ಜೊತೆಗೆ ದೀಪಾವಳಿ ವಿಶೇಷ ಪುರವಣಿಯ ಒಂದು ಗೌರವ ಪ್ರತಿ ಬರಬೇಕಿತ್ತು. ಅವರಿಗೆ ಜ್ಞಾಪಿಸಿ' ಎಂದೆ. ಆ ಕಡೆಯ ಧ್ವನಿ 'ಓಕೆ ಸರ್' ಎಂದಿತು.

ನಾನಂತೂ ಈ ಪತ್ರಿಕೆಗೆ ಯಾವ ಲೇಖನವನ್ನೂ ಕಳಿಸಿರಲಿಲ್ಲ. ನನಗೆ ತಿಳಿದ ನನ್ನ ಹೆಸರಿನ ಆ ಮೂರು ವ್ಯಕ್ತಿಗಳು ನನ್ನಂತೆ ಕತೆಗಾರರಲ್ಲ. ಹಾಗಿರುವಾಗ ಆಯಾಚಿತವಾಗಿ ಬಂದಿರುವ ಚೆಕ್ ಅಪಾತ್ರದಾನವಲ್ಲ ಎಂಬ ಸಮಾಧಾನ. ಈಗಾಗಲೇ ಪ್ರಕಟವಾಗಿರುವ ಮೂರು ಕಥಾ ಸಂಕಲನಗಳಿಂದ ಯಾವುದೋ ಪತ್ರಿಕೆಯ ಸಂಪಾದಕರು ಒಂದನ್ನು ಅನಾಮತ್ತಾಗಿ ಎತ್ತಿಕೊಂಡಿದ್ದಾರು! ಸಂಭಾವನೆಯಂತೂ ಬಂದಿದೆಯಲ್ಲಾ ಅಂತ ನನ್ನ ಬ್ಯಾಂಕ್ ಉಳಿತಾಯ ಖಾತೆಗೆ ಜಮಾ ಮಾಡಿದೆ. ಆದರೆ ಅದರ ಜೊತೆಗೆ ಬಂದಿರಬಹುದಾದ ವಿಶೇಷ ಆ ಪುರವಣಿಯೆಲ್ಲಿ ಅಂತ ಕೊಂಚ ತಲೆ ಕೆಡಿಸಿಕೊಂಡೆ. ನಮ್ಮ ಮನೆಗೆ ಪತ್ರಿಕೆ ಹಾಕುವ ಹುಡುಗನನ್ನ ವಿಚಾರಿಸಿದರೂ ಸುಳಿವು ಸಿಗಲಿಲ್ಲ.

ಇದಾಗಿ ಒಂದು ತಿಂಗಳ ನಂತರ ಸಾಹಿತ್ಯ ಪರಿಷತ್ತಿನ ಒಂದು ಸಮಾರಂಭದಲ್ಲಿ 'ವಿಕ್ರಮ' ಪತ್ರಿಕೆಯ ಮಾಜಿ ಸಂಪಾದಕ ಲಕ್ಷ್ಮೀಶ ಕಾಟುಕುಕ್ಕೆ ಸಿಕ್ಕಿದರು. ವಿಜಯದಶಮಿ ವಿಶೇಷಾಂಕದ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ತಗೊಂಡ ಮೇಲೆ ನೀವು ಆಫೀಸು ಕಡೇನೇ ಬರಲಿಲ್ಲ ಅಂತ ವಿಚಾರಿಸಿದರು.

'ನೀವೂ ಪತ್ರಿಕೆ ಬಿಟ್ರಲ್ಲಾ.. ಹಿಂದಿನ ತಿಂಗಳು ಯಾವ ಸ್ಪರ್ಧೆಗೂ ಕಥೆ ಕಳಿಸದೆ ಸಾವಿರ ರೂಪಾಯಿ ಅನಾಯಾಸವಾಗಿ ಬಂತು' ಒಣ ಪ್ರತಿಷ್ಠೆಯಿಂದ ಬೀಗಿದೆ. ಅವರು ಹುಬ್ಬೇರಿಸಿದರು. ನಾನು ಸಂಜೆವಾಣಿಯ ಚೆಕ್ ವಿಷಯ ತಿಳಿಸಿದೆ.

ಆತ 'ಓ ಅದಾ? ನಾನು ವಿಕ್ರಮಕ್ಕೆ ಬರೋಕೆ ಮುಂಚೆ ಸಂಜೆವಾಣಿಗೆ ಸಂಪಾದಕ ಆಗಿದ್ದೆ. ಈಗ ನನ್ನ ಫ್ರೆಂಡು ಶಿವಸುಬ್ರಹ್ಮಣ್ಯ ಇದ್ದಾರೆ. ಆತ ಈ ವರ್ಷ ಮೊದಲ ಬಾರಿಗೆ ದೀಪಾವಳಿ ವಿಶೇಷಾಂಕ ತರ್ತಾ ಇದ್ದೀವಿ. ನಿಮ್ಮಲ್ಲಿ ಇನ್ನೂ ಪ್ರಕಟ ಆಗದೇ ಇರೋ ಕಥೆಗಳಿದ್ರೆ ಕಳಿಸಿಕೊಡಿ ಅಂತ ಕೇಳಿಕೊಂಡರು. ನೀವು ವಿಕ್ರಮಕ್ಕೆ ಎರಡು ಕಥೆ ಕಳಿಸಿದ್ದಿರಿ. ಅದರಲ್ಲಿ ಕೇಸರಿ ಮತ್ತು ಬಿಳಿಗೆ

ಬಹುಮಾನ ಬಂತಲ್ವಾ, ಇನ್ನೊಂದು ಕಥೇನ ಮುಂದೆ ಯಾವಾಗಲಾದರೂ ಉಪಯೋಗಿಸೋಣ ಅಂತ ಇಟ್ಕೊಂಡಿದ್ದೆ. ಅದನ್ನೇ ಅವರಿಗೆ ಕಳಿಸಿದೆ, ನಿಮ್ಮ ಅನುಮತಿ ಇಲ್ಲದೆ!' ಎಂದರು. ನಿಜಕ್ಕೂ ನನ್ನ ಆ ಇನ್ನೊಂದು ಕಥೆಯ ವಿಷಯ ನನಗೇ ಮರೆತುಹೋಗಿತ್ತು.

ಅಚಾತುರ್ಯವೆಂದರೆ ಸಂಜೆವಾಣಿಯ ವಿಶೇಷ ಪುರವಣಿ ಲಕ್ಷ್ಮೀಶ ಅವರಿಗೂ ಚೆಕ್ ನನಗೂ ಬಂದಿರೋದು!

ಆ ಮುಂದಿನ ವಾರವೇ ವಿಕ್ರಮ ಕಚೇರಿಗೆ ಹೋಗಿ ಆ ಪುರವಣಿಯನ್ನು ಪಡೆದುಕೊಂಡೆ. ಸುಂದರ ರೇಖಾಚಿತ್ರದೊಂದಿಗೆ 'ಬಾಡಿಗೆ ಮಂದಿ' ಪ್ರಕಟವಾಗಿದ್ದನ್ನು ಕಣ್ತುಂಬಿಕೊಂಡೆ.

ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ಪ್ರಸಂಗ. ಅದೊಂದು ಭಾನುವಾರ ಕಬ್ಬನ್ ಪಾರ್ಕಿನಲ್ಲಿರೋ ಪ್ರೆಸ್ ಕ್ಲಬ್‌ನಲ್ಲಿ ಡಾ. ಎಂ.ಚಿದಾನಂದಮೂರ್ತಿ ಅವರದೊಂದು ಪತ್ರಿಕಾಗೋಷ್ಠಿಯಿತ್ತು. ಉಪಾಹಾರದ ನಂತರ ಗೆಳೆಯರೊಬ್ಬರು 'ವಾರ್ತಾ ಭಾರತಿ' ಓದುತ್ತಿರುವಾಗ 'ಭಗವಾನ್ ಜೀ, ಇಲ್ಲಿ ನೋಡಿ ನಿಮ್ಮದೊಂದು ಕಥೆ ಪ್ರಕಟವಾಗಿದೆ' ಅಂತ ತೋರಿಸಿದರು. ಹೌದು, 'ವೇದಿಕೆ' ಎಂಬ ಕತೆ. ಇದು – ನನ್ನ ಮೊದಲ ಕಥಾ ಸಂಕಲನದಲ್ಲಿರೋದು! ಮೊದಲ ನೋಟಕ್ಕೆ ಹೆಮ್ಮೆ ಆಯಿತಾದರೂ, ಇದನ್ನು ಪ್ರಕಟಿಸೋ ಮುಂಚೆ ನನಗೊಂದು ಮಾತು ತಿಳಿಸಬೇಕಿತ್ತಲ್ವೆ? ಸಂಪಾದಕ ಎಷ್ಟೇ ದೊಡ್ಡವನಾಗಿರಲಿ, ಲೇಖಕನ ಅನುಮತಿ ಕೇಳೋದು ಒಂದು ಸೌಜನ್ಯ. ಮೊದಲೇ ತಿಳಿಸಿದರೆ ಸಂಭಾವನೆ ಕೊಡಬೇಕಿತ್ತೆಂದು ಹಾಗೆ ಮಾಡಿದರೇನೋ! ಆಗಿದ್ದಾಯ್ತು, ನಾನು ಆ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಬದಲಿಗೆ ಪತ್ರಿಕೆಯ ಮೂಲಕ ಒಂದಷ್ಟು ಸಾವಿರ ಓದುಗರಿಗೆ ನನ್ನ ಕಥೆ ಮುಟ್ಟಿತಲ್ಲಾ ಎಂಬ ಸಮಾಧಾನವಂತೂ ಆಯಿತು.

***

ಗಣಪನಿಂದ ಪುಟ್ಟ ಕತೆ ಪಠಣ



ಇಲಿಯಣ್ಣಾ... ಈ ಪುಟ್ಟಕತೆ ತುಂಬ ಚಂದ ಉಂಟು ಮಾರಾಯಾ.. ನಂಗಂತೂ ಕಣ್ಣಲ್ಲಿ ನೀರೇ ಬಂತು..
ಇನ್ನೂ ಸಾವಿರ ಕತೆ ಓದಬೇಕಲ್ಲಾ... ಮುಂದಿನ ಶ್ರಾವಣದೊಳಗೇ ಮುಗಿಸುಕಾಗುತ್ತಾ ನೋಡೋಣ...

ಕ್ರೋಧಿ ನಾಮ ಸಂವತ್ಸರ – ಶ್ರಾವಣ ಕಥಾಪರ್ವ–ಆವೃತ್ತಿ 02

ಪುಟ್ಟಕಥೆಗಳ ಶ್ರಾವಣ ಅಭಿಯಾನ–2024

ಭಾಗವಹಿಸಿದ ಕಥೆಗಾರರ ಪಟ್ಟಿ

1. ಸರಸ್ವತಿ ನಟರಾಜ್ (29)
2. ಕೆ ಆರ್ ಎಸ್ ಮೂರ್ತಿ (29)
3. ನರಸಿಂಗರಾವ್ (29)
4. ಗಿರಿಜಾ ರಾಜ್ (29)
5. ನಿರ್ಮಲ ಜಿ ವಿ (29)
6. ಎನ್ ಶಂಕರ ರಾವ್ (29)
7. ಗಣಪತಿ ಹೆಗಡೆ (29)
8. ಟಿ ಎಸ್ ಶ್ರವಣ ಕುಮಾರಿ (29)
9. ಸ್ನೇಹ ಶಶಿಧರ್ (29)
10. ಸಿಂಧು ಹರಿಥಸ್ (29)
11. ಗೋಪಿನಾಥ್ (29)
12. ಶಾಂತಾ ನಾಗಮಂಗಲ (29)
13. ಶೀಲಾ ಅರಕಲಗೂಡು (29)
14. ಪೂರ್ಣಿಮ ಭಗವಾನ್ (29)
15. ನಾಗರತ್ನ ಚಂದ್ರಶೇಖರ್ (29)
16. ಹು ವಾ ಶ್ರೀಪ್ರಕಾಶ್ (29)
17. ಅನ್ನಪೂರ್ಣ ಸುಬ್ಬರಾವ್ (29)
18. ಬೆಂಶ್ರೀ ರವೀಂದ್ರ (29)
19 .ಕಮಲಾಕ್ಷಿ ಸಿ ಆರ್ (29)
20. ರಾಜನ್ (29)
21. ಎ ಮಂಜುನಾಥ (29)
22. ವಿಠ್ಠಲ ಇಜೇರಿ (29)
23. ಶಾಂತಿವಾಸು (29)
24. ಅನಿತ ಪೈ (29)
25. ರತ್ನಾ ಮೂರ್ತಿ (29)
26. ಮಹಾಬಲ (25)
27. ಮಾಧುರಿ ಕೃಷ್ಣ (25)
28. ಎಸ್ ಮಂಜುನಾಥ್ (25)
29. ಎಂ ಮಲ್ಲಿಕಾರ್ಜುನ (24)
30. ಗೌರಿ ಯು ಭಟ್ಟ (15)
31. ಎಸ್ ಧೀರೇಂದ್ರ (15)
32. ರಾಧಿಕಾ ವಿ ಗುಜ್ಜರ್ (14)
33. ಶೀಲಾ ಭಂಡಾರ್ಕರ್ (14)
34. ಗುರುರಾಜ ಶಾಸ್ತ್ರಿ (13)
35. ಎಂ ಆರ್ ಆನಂದ (11)
36. ಪದ್ಮಾ ಕಲ್ಮಾಡಿ (10)
37. ಸುಜಾತ ರವೀಶ್ (10)
38. ಶ್ರೀನಿವಾಸ್ ಬಿ ಎಸ್ (10)
39. ಮಾನಸ ಕೆ ಕೆ (10)
40. ಅರುಣ ಜಿ ವಿ (9)
41. ವೆಂಕಟೇಶ್ (ಮನು) (8)
42. ಡಾ.ಶುಭಶ್ರೀ ಪ್ರಸಾದ್ (8)
43. ಲೀಲ ವಾಸುದೇವ್ (6)
44. ಮಾಲತಿ ಶ್ರೀನಿವಾಸನ್ (5)
45. ಸೀತಾರಾಮ ಕಟ್ಟಿ (5)
46. ವೆಂಕಟೇಶ್ ಕಾಮತ್ (5)
47. ಡಾ. ಗೋವಿಂದ ಹೆಗಡೆ (5)
48. ಡಾ. ಸತ್ಯವತಿ ಮೂರ್ತಿ (5)
49. ಶ್ರೀಧರ ರಾವ್ ಎಚ್ (5)
50. ಭ ರಾ ವಿಜಯಕುಮಾರ (5)
51. ಶೃಂಗೇಶ್ವರ ಶರ್ಮ ಎಸ್ (5)
52. ಕೆ ಜನಾರ್ಧನ ತುಂಗ (5)
53. ರೇಣುಕಾ ದೇಸಾಯಿ (5)
54. ವೆಂಕಟೇಶ ಬೈಲೂರು (4)
55. ರಂಗನಾಥ್ ಟಿ ಕೆ (4)
56. ಶ್ರೀಲಕ್ಷ್ಮಿ ಶ್ರೀನಿವಾಸನ್ (4)
57. ವಿಜಯಕುಮಾರಿ (3)
58. ಪ್ರಮೋದಾ ಮೂರ್ತಿ (3)
59. ನೀಲಕಂಠ ಕುಲಕರ್ಣಿ (3)
60. ಶೃತಿ ಕಟ್ಟಿ (3)
61. ಶಶಿಧರ ಹಾಲಾಡಿ(3)
62. ನಾಗರತ್ನ ಎಂ ಜಿ (2)
63. ರವೀಂದ್ರನಾಥ್ ಬಿ ಆರ್(2)
64. ರವಿ ಕುಸಬಿ (2)
65. ಉಷಾರಾಣಿ (2)
66. ಎಚ್ ಎಲ್ ಗುರುಪ್ರಸಾದ್(2)
67 .ಶ್ರೀನಿವಾಸನ್ (1)
68. ಪತ್ತಂಗಿ ಎಸ್ ಮುರಳಿ (1)
69. ಶ್ರೀಧರ ಬಾಣಾವರ(1)
70. ಅರುಣಪ್ರಕಾಶ (1)
71. ಡಾ.ಪ್ರಶಾಂತ ಮೇಡ (1)
72. ಪದ್ಮ ಆನಂದ್ (1)

ಅಭಿಯಾನದಲ್ಲಿ ಪ್ರಸ್ತುತಪಡಿಸಲಾದ ಒಟ್ಟು ಪುಟ್ಟ ಕಥೆಗಳ ಸಂಖ್ಯೆ: 1070



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ಸೋಡಿಯೋ ಸಾಹಿತ್ಯ ದಾಸೋಹ

ಅಧ್ಯಕ್ಷೀಯ ಅನಿಸಿಕೆಗಳು

– ಎಂ.ಆರ್. ಶ್ರೀರಂಗರಾಜನ್

ಎಲ್ಲರಿಗೂ ನಮಸ್ಕಾರ. ಇಂದಿನ ಸಾಹಿತ್ಯ ದಾಸೋಹ ಬಹಳ ವಿಶೇಷವಾದ ದಾಸೋಹ. ೨೨೮ನೇ ದಾಸೋಹ. ಎಲ್ಲ ದಾಸೋಹಿಗಳಿಗೂ ನನ್ನ ಅಭಿನಂದನೆಗಳು ಮತ್ತು ಶುಭಕಾಮನೆಗಳು. ನನಗೆ ಈ ದಾಸೋಹದ ಅಧ್ಯಕ್ಷತೆ ವಹಿಸಲು ಅತ್ಯಂತ ಸಂತೋಷವಾಗುತ್ತಿದೆ. ನಾವೂ ಸಚಿನ್ ತೆಂಡೂಲ್ಕರ್ ತರಹಾನೇ. ಅವನ ರೆಕಾರ್ಡ್‌ಗಳನ್ನು ಅವನೇ ಮುರಿಯುತ್ತಾ ಮುಂದುವರಿದ. ನಮ್ಮ ಸಾಹಿತ್ಯ ದಾಸೋಹಗಳು ಗಿನ್ನಿಸ್ ಬುಕ್‌ನಲ್ಲಿ ಇರಬೇಕಾದ ವಿಷಯ. ನನಗೆ ತಿಳಿದಹಾಗೆ ಯಾವ ಸಂಘ ಸಂಸ್ಥೆಯೂ ೨೨೮ ದಾಸೋಹಗಳನ್ನು ಎಡೆಬಿಡದೆ ನಡೆಸಿದ ಇತಿಹಾಸವಿಲ್ಲ. ಇದಕ್ಕೆ ನಮ್ಮ ವೇದಿಕೆಯ ಎಲ್ಲ ಸದಸ್ಯರೂ ಅಭಿನಂದನಾರ್ಹರು.

ಕೆಲವು ವರ್ಷಗಳ ಅಂದರೆ ಹಿಂದೆ ಸುಮಾರು ಹತ್ತು ವರ್ಷಗಳು, ಹತ್ತು ಎಂದರೆ ಅತಿಶಯೋಕ್ತಿಯಾಗಬಹುದು. ಆದರೆ ೧೦ ಎನ್ನುವುದನ್ನು ಒಂದು ದೊಡ್ಡ ಸಂಖ್ಯೆ ಎಂದು ಭಾವಿಸುದಾದರೆ ಅಥವಾ ಐದಾರು ವರ್ಷಗಳಲ್ಲಿ ಆದಂತಹ ಕನ್ನಡ ಸಾಹಿತ್ಯ ಕೃಷಿ ಒಂದೆರೆಡು ವರ್ಷಗಳಲ್ಲಿಯೇ ನಮ್ಮ ವೇದಿಕೆಯಲ್ಲಾಗಿದೆ ಎಂದರೆ ಅದು ಬರೀ ಹೆಗ್ಗಳಿಕೆಯ ಮಾತಾಗುವುದಿಲ್ಲ.

'ಪುಟ್ಟ ಕಥಾ ಶ್ರಾವಣ ಅಭಿಯಾನ' ಆರಂಭವಾಗಿ ಏಳು ದಿನಗಳಾದುವು. ಅಭಿಯಾನ ಇನ್ನೂ ಇಪ್ಪತ್ತೇಳು ದಿನಗಳು ನಡೆಯಲಿದೆ. ಮೊದಲ ಏಳು ದಿನಗಳಲ್ಲಿ ಸುಮಾರು ೫೦ ಕಥೆಗಾರರು ಪ್ರತಿ ದಿವಸವೂ ಒಂದೊಂದು ಕಥೆಯಂತೆ ಈಗಾಗಲೇ ಏಳು ಕಥೆಗಳನ್ನು ಪ್ರಸ್ತುತಪಡಿಸಿದ್ದಾರೆ. ಯಾವ ಕತೆಗಾರರೂ ದಿನಕ್ಕೊಂದು ಕಥೆಯಂತೆ ಏಳು ಕಥೆಗಳನ್ನು ಬರೆದ ವಿವರ ನನಗೆ ಗೊತ್ತಿಲ್ಲ. ಎಲ್ಲ ಕತೆಗಾರರೂ ಸೇರಿ ಅಭಿಯಾನದಲ್ಲಿ ಈವರೆಗೆ ಪ್ರಸ್ತುತಪಡಿಸಿರುವ ಒಟ್ಟು ಕತೆಗಳ ಸಂಖ್ಯೆ ೪೦೦ಕ್ಕೂ ಹೆಚ್ಚು. ಎಲ್ಲಾ ಕಥೆಗಳೂ ವಿಭಿನ್ನ. ಭಾವನೆಗಳು ಬೇರೆ ಬೇರೆ, ಕಲ್ಪನೆಗಳು ಬೇರೆ ಬೇರೆ, ಶೈಲಿಯೂ ಬೇರೆ. ಇದು ಒಂದು ನಮ್ಮ ವೇದಿಕೆಯ ಸಾಧನೆ. ಕತೆ ಬರೆಯುವುದು ಸುಲಭವಲ್ಲ ಎನ್ನುವುದನ್ನು ಸುಳ್ಳಾಗಿಸಿ, ಸುಲಭ ಎಂದು ತೋರಿಸಿಕೊಟ್ಟಿದ್ದೀರಿ. ಇದಕ್ಕೆ ಅನೇಕ ಕಾರಣಗಳಿರಬಹುದು. ಹೊಗಳುವ ಗೆಳೆಯರು, ಬೆನ್ನುತಟ್ಟುವ ಕೈಗಳು, ಎಲ್ಲರನ್ನೂ ಸರಿದಾರಿಯಲ್ಲಿ ನಡೆಸುವ ನಿರ್ದೇಶಕ ಅಥವಾ ಸೂತ್ರಧಾರಿ, ನಾನು ಮಾಡಬಲ್ಲೆ ಎನ್ನುವ ನಿಮ್ಮ ಆತ್ಮ ವಿಶ್ವಾಸ, ಮಾಡುತ್ತೇನೆ ಎನ್ನುವ ಛಲ ಹೀಗೆ. ನಿಮಗೆ ನನ್ನ ಅಭಿಮಾನದ ಅಭಿನಂದನೆಗಳು.

ನಾನೇನು ದೊಡ್ಡ ಕವಿಯಲ್ಲ, ಕಲಾವಿದನಲ್ಲ, ಕಥೆಗಾರನಲ್ಲ ಆದರೂ ನೀನು ಅಧ್ಯಕ್ಷನಾಗಬೇಕೆಂದು ಶ್ರೀ ಮಹಾಬಲ ಮತ್ತು ಶ್ರೀ ಬೆಂಶ್ರೀ ರವೀಂದ್ರ ಪ್ರೀತಿಯಿಂದ ಒತ್ತಾಯಿಸಿದರು. ಅವರ ಪ್ರೀತಿ ಮತ್ತು ನಿಮ್ಮೆಲ್ಲರ ಪ್ರೀತಿ ಸಿಗುವ ಸ್ವಾರ್ಥದಿಂದ ಒಪ್ಪಿಕೊಂಡೆ.

ನಿಮ್ಮ ಕಥೆ, ಕವನ, ಲೇಖನಗಳನ್ನು ನೀವು ಯಾವ ಭಾವನೆಗಳಿಂದ ಬರೆದಿದ್ದೀರೋ ಅದೇ ಭಾವನೆಯನ್ನು ಮನದಲ್ಲಿ ಮೂಡಿಸಿಕೊಂಡು ನಿಮ್ಮೆಲ್ಲರ ಸಾಹಿತ್ಯವನ್ನು ಓದಿದ್ದೇನೆ ಮತ್ತು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ನಿಮ್ಮ ಭಾವನೆಗಳು ಈಗ ನನ್ನ ಭಾವನೆಗಳು ಆಗಿವೆ. ನಿಮ್ಮ ಕತೆ, ಕವನ, ಲೇಖನಗಳು ಈಗ ನನ್ನದೂ ಆಗಿದೆ. ನೀವು ಅದರ ತಂದೆ ತಾಯಿಯಾದರೆ, ನಾನದರ ಚಿಕ್ಕಪ್ಪ ಸೋದರಮಾವ. ಈ ಸ್ವಾರ್ಥಕ್ಕಾಗಿ ನಾನು ಒಪ್ಪಿಕೊಂಡೆ.

ಎಲ್ಲರ ಸಾಹಿತ್ಯವನ್ನು, ಪದ ಪದಗಳನ್ನು ಬಿಡದೆ ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಪ್ರಾಯಶಃ ಅಧ್ಯಕ್ಷನಾಗದಿದಿದ್ದರೆ ಇಷ್ಟು ಮನಸ್ಸಿಟ್ಟು ಓದುತ್ತಿರಲಿಲ್ಲವೇನೋ. ನಿಮ್ಮೆಲ್ಲರ ಈ ಸಾಹಿತ್ಯ ಸೃಷ್ಟಿಯನ್ನು ಓದಿ ಅತ್ಯಂತ ಆನಂದಪಟ್ಟಿದ್ದೇನೆ. ಈ ಸ್ವಾರ್ಥಕ್ಕಾಗಿ ನಾನು ಒಪ್ಪಿಕೊಂಡೆ.

ಸ್ಕೂಲಲ್ಲಿ ಮೇಷ್ಟ್ರು ಪಾಠ ಮಾಡಿ, "ರಮೇಶ ಎದ್ದು ನಿಂತ್ಕೋ. ನಾನು ಏನು ಹೇಳಿದೆ ಅಂತ ಹೇಳು" ಅಂದ್ರೆ ರಮೇಶ ಕಣ್ಣುಬಾಯಿ ಬಿಡ್ತಾನೆ. ಮೇಷ್ಟ್ರು ಅದನ್ನೆಲ್ಲ ಮೊದಲೇ ಓದಿದ್ದಾರೆ. ಅವರಿಗೆ ವ್ಯಾಕರಣ, ಛಂದಸ್ಸು, ಅಲಂಕಾರ ಎಲ್ಲಾ ಗೊತ್ತು. ಅವರಿಗೆ ಪಾಠ ಮಾಡಿ ಅಭ್ಯಾಸವಿದೆ. ಆದರೆ ಪಾಪ, ರಮೇಶ ತಕ್ಷಣ ಅದನ್ನು ಹೇಗೆ ಹೇಳಲಿಕ್ಕೆ ಸಾಧ್ಯ. ನನ್ನ ಪರಿಸ್ಥಿತಿಯೂ ಇದೇ ರೀತಿ ಇದೆ. ನಮ್ಮ ವೇದಿಕೆಯಲ್ಲಿ ಅನೇಕ ಪಂಡಿತರಿದ್ದಾರೆ, ವಿದ್ವಾಂಸರು ಇದ್ದಾರೆ. ಭಾಷಾ ಪರಿಣಿತರಿದ್ದಾರೆ. ಅವರೆಲ್ಲರ ಜ್ಞಾನವನ್ನು ಅರಿತುಕೊಳ್ಳಲು ನಾನು ಏಕಲವ್ಯನಂತೆ ವೇದಿಕೆಯಲ್ಲಿದ್ದೇನೆ.

ಎಂ.ಆರ್. ಶ್ರೀರಂಗರಾಜನ್

ಹುಟ್ಟಿದ್ದು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ, 11 ಮೇ 1963ರಂದು. ಬೆಳೆದಿದ್ದು, ಓದಿದ್ದು ಎಲ್ಲಾ ಬೆಂಗಳೂರಿನಲ್ಲಿ.

ಇವರ ತಂದೆ ಶ್ರೀ ನರಸಿಂಹನ್ ಅವರು ಭಾರತೀಯ ಸ್ಟೇಟ್ ಬ್ಯಾಂಕ್ ನಲ್ಲಿ ಅಧಿಕಾರಿಯಾಗಿದ್ದವರು. ಅವರಿಗೆ ಸಾಹಿತ್ಯದ ಮೇಲಿದ್ದ ಆಸಕ್ತಿ ಮತ್ತು ಬರವಣಿಗೆಯ ಪ್ರಭಾವ ಶ್ರೀರಂಗರಾಜನ್ ಅವರ ಸಾಹಿತ್ಯಕ ಚಿಂತನೆಗೆ ಬುನಾದಿ ಎನ್ನಬಹುದು.

ತಂದೆಯನ್ನೇ ಅನುಸರಿಸಿದ ಶ್ರೀರಂಗರಾಜನ್, ತಾವು ಸಹಾ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ 1985ರಲ್ಲಿ ತಮ್ಮ ಉದ್ಯೋಗ ಜೀವನವನ್ನು ಆರಂಭಿಸಿದರು. 2009ರಲ್ಲಿ ಅಧಿಕಾರಿ ವರ್ಗಕ್ಕೆ ಬಡ್ತಿ ಪಡೆದ ನಂತರ, ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ 2023ರಲ್ಲಿ ಮುಖ್ಯ ವ್ಯವಸ್ಥಾಪಕರಾಗಿ ನಿವೃತ್ತಿಹೊಂದಿದರು.

ಶ್ರೀರಂಗರಾಜನ್ ಅವರಿಗೆ ಕನ್ನಡ ಸಾಹಿತ್ಯ, ಸಂಸ್ಕೃತಿಯ ಜೊತೆಗೇ, ಕನ್ನಡ ರಂಗಭೂಮಿಯಲ್ಲೂ ಅಪಾರ ಆಸಕ್ತಿ. ಇವರು ಪಾತ್ರವಹಿಸಿದ ಅನೇಕ ನಾಟಕಗಳು ರಾಜ್ಯಾದ್ಯಂತ ಹಲವು ಪ್ರದರ್ಶನಗಳನ್ನು ಕಂಡಿವೆ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ 'ಮೈತ್ರಿ' ನಾಟಕ ತಂಡವನ್ನು ಪ್ರಾರಂಭಿಸಿ, ಅನೇಕ ನಾಟಕಗಳನ್ನು ಪ್ರದರ್ಶಿಸಿರುವವರಲ್ಲದೆ, ನಾಟಕ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ, 'ಅತ್ಯುತ್ತಮ ನಾಟಕ', ಮತ್ತು 'ಅತ್ಯುತ್ತಮ ನಟ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ದೃಶ್ಯ ಮಾಧ್ಯಮದ ಕೆಲವು ಜನಪ್ರಿಯ ಧಾರಾವಾಹಿಗಳಲ್ಲಿಯೂ ಪಾತ್ರವಹಿಸಿದ್ದಾರೆ. ಇವರೇ ಬರೆದು ನಿರ್ದೇಶಿಸಿದ ನಾಟಕಗಳು ಜನಮನ್ನಣೆ ಮತ್ತು ಪ್ರಶಂಸೆ ಗಳಿಸಿವೆ.

ಕಲೆಯ ಬಗ್ಗೆಯೂ ಆಸಕ್ತಿಯನ್ನು ರೂಢಿಸಿಕೊಂಡಿರುವ ಇವರು ಹಲವು ಕವನಗಳನ್ನೂ ರಚಿಸಿದ್ದಾರೆ. 'ತೊದಲು' ಮತ್ತು 'ಇಬ್ಬನಿ-ಬನಿ' ಎಂಬ ಎರಡು ಕವನ ಸಂಕಲನಗಳು ಬಿಡುಗಡೆಯಾಗಿವೆ. ಹಲವು ಲೇಖನಗಳು ಮತ್ತು ಕಥೆಗಳನ್ನೂ ಬರೆದಿದ್ದು, ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ನಿರಂತರವಾಗಿ ಪ್ರಸ್ತುತವಾಗುತ್ತಿರುತ್ತವೆ.

ವೇದಿಕೆಯು ಕಳೆದ ತಿಂಗಳು ನಡೆಸಿದ 'ಪುಟ್ಟ ಕಥಾ ಶ್ರಾವಣ ಅಭಿಯಾನ'ದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವವರಲ್ಲದೆ, 29 ದಿನಗಳ ಅಭಿಯಾನದಲ್ಲಿ ದಿನಕ್ಕೊಂದರಂತೆ 29 ಕತೆಗಳನ್ನು ಬರೆದ 25 ಕತೆಗಾರರಲ್ಲಿ ಇವರೂ ಒಬ್ಬರು ಎಂಬುದು ಹೆಮ್ಮೆಯ ವಿಷಯ.

ಇಂದು ೨೩ ದಾಸೋಹಿಗಳು ಅನೇಕ ವಿಷಯಗಳನ್ನು ಪ್ರಸ್ತುತಪಡಿಸಿದ್ದಾರೆ. ಎಲ್ಲರೂ ಅತ್ಯಂತ ಸುಂದರವಾದ ಪ್ರಸ್ತುತಿಗಳನ್ನು ನೀಡಿದ್ದಾರೆ. ಅದರ ಬಗ್ಗೆ ವಿಮರ್ಶೆಯಲ್ಲ. ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ.

೧. ಶ್ರೀಮತಿ ಸುಜಾತ ರವೀಶ್ – 'ಕನ್ನಡ ವೈಭವ'

ಶ್ರೀಮತಿ ಸುಜಾತ ರವೀಶ್ ಅವರ 'ಕನ್ನಡ ವೈಭವ' ನಮ್ಮ ನಾಡಿನ ಬಗ್ಗೆ ಹೆಮ್ಮೆಯಿಂದ ಬರೆದ ಕವನ. ಇದು ಪರಿವರ್ಧಿನಿ ಷಟ್ಪದಿಯಲ್ಲಿದೆ. ೧, ೨, ೪, ೫ನೇ ಸಾಲುಗಳು ನಾಲ್ಕು ಮಾತ್ರೆಯ ನಾಲ್ಕು ಗಣಗಳು. ೩ ಮತ್ತು ೬ನೇ ಸಾಲುಗಳು ನಾಲ್ಕು ಮಾತ್ರೆಯ ಆರು ಗಣಗಳು. ಲಯವಿದೆ, ಪ್ರಾಸವಿದೆ, ಸುಂದರ ಪದಗಳ ಸಾಲುಗಳಿವೆ.

"ಸುಂದರ ಪರಿಸರ ನಯನಕೆ ಪರುವವು ಕುಂದನವಾಗಿದೆ ಕವಿಗಳ ರಚನೆಯು
ಕುಂದದ ಚೆಲುವಿನ ಸ್ನೇಹದ ಮಮತೆಯ
ಮರೆಯದ ಸವಿ ಹಾಡು"

ಸುಂದರ ಸಾಲು. ನಿಮ್ಮ ಈ ಕವನವೂ "ಕುಂದದ ಚೆಲುವಿನ ಕನ್ನಡ ನಾಡಿನ ಮರೆಯದ ಸವಿ ಹಾಡು". ನಮ್ಮ ವೇದಿಕೆಯ ಗಾಯಕರು ಈ ಕವನವನ್ನು ಹಾಡಿದರೆ ಸೊಗಸಾಗಿರುತ್ತದೆ. ಶ್ರೀಮತಿ ಸುಜಾತ ಅವರಿಗೆ ಧನ್ಯವಾದಗಳು.

೨. ಶ್ರೀಮತಿ ಕೆ.ಕೆ. ಮಾನಸ – 'ಸತ್ ಚಿಂತನೆ ಸನ್ಮಾರ್ಗಕ್ಕೆ ದಾರಿ'

ಶ್ರೀಮತಿ ಮಾನಸ ರವರ 'ಸಚ್ಚಿಂತನೆ ಸನ್ಮಾರ್ಗಕ್ಕೆ ದಾರಿ' ತುಂಬಾ ವಿಷಯಯುಕ್ತ ಮತ್ತು ಆಧ್ಯಾತ್ಮಿಕ ಜೀವನದ ಉಪಕಾರಗಳ ಬಗ್ಗೆ ನಿಚ್ಚಳವಾಗಿ ಬರೆದಿರುವ ಲೇಖನ. ಸನಾತನ ಧರ್ಮ, ಸಂಸ್ಕೃತಿ, ಸಂಸ್ಕಾರ, ನಾವು ಆಯ್ಕೆ ಮಾಡಿಕೊಳ್ಳಬೇಕಾದ ಹಾದಿ, ಬದುಕನ್ನು ರೂಪಿಸಿಕೊಳ್ಳಬೇಕಾಗಿರುವ ರೀತಿ ಎನ್ನುವುದನ್ನು ಸೊಗಸಾಗಿ ನಿರೂಪಿಸಿದ್ದಾರೆ.

ಭಗವದ್ಗೀತೆಯ,

"ಸುಖ-ದುಃಖೇ ಸಮೇ ಕೃತ್ವಾ
ಲಾಭಾ ಲಾಭೌ ಜಯಾ ಜಯೌ
ತತೋ ಯುದ್ಧಾಯ ಯುಜ್ಯಸ್ವ
ನೈವಂ ಪಾಪಂ ಅವಾಪ್ಯಸಿ" – ಈ ಶ್ಲೋಕ ನೆನಪಿಗೆ ಬರುತ್ತದೆ.

'ಅವನಿಲ್ಲದೆ ನಮ್ಮ ಹುಟ್ಟೆಲ್ಲಿ, ಅವನ ಭಿಕ್ಷೆಯೇ ಈ ಬದುಕಲ್ಲವೇ?' ಅತ್ಯಂತ ಸುಂದರವಾದ ಸಾಲುಗಳು. ನಾವು ನಮ್ಮ ದಿನನಿತ್ಯದ ಕಾರ್ಯಗಳಲ್ಲೂ ಸನ್ಮಾರ್ಗದಲ್ಲೇ ನಡೆಯಬೇಕು.

"ಬದುಕೆಂದರೆ ಸುಮ್ಮನೆ ಸಾಗುವುದಲ್ಲ- ಏನಾದರೂ ಹೊಸತನದತ್ತ ಚಿತ್ತವಿರಿಸಿರಬೇಕು"
"ಬದುಕು ಹೊತ್ತು ತಂದವರಿಲ್ಲ, ಹೊತ್ತು ಹೋದವರಿಲ್ಲ"

"ಜ್ಞಾನ, ಯೋಗ, ಹಿತವಾದ ಮಾತು, ಉಪಕಾರ, ಹೀಗೆ ನಮ್ಮ ಜೀವನವನ್ನು ರೂಢಿಸಿಕೊಂಡರೆ ಜನ್ಮಸಾಫಲ್ಯ ದೊರೆಯುತ್ತದೆ" ಎಷ್ಟು ಸುಂದರವಾದ ಮಾತುಗಳು. ಮಾನಸ ಅವರು ಬದುಕಿಗೊಂದು ಬಂಗಾರದ ಮಾತನ್ನು ನೀಡಿದ್ದಾರೆ. ಬಹಳ ಉತ್ತಮ ಮತ್ತು ಪ್ರೌಢವಾದ ಬರಹ. ಮಾನಸ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು ಮತ್ತು ನಮನಗಳು.

ಇದನ್ನು ಓದುತ್ತಿರುವಾಗ ನಾನು ಚಿಕ್ಕವಯಸ್ಸಿನಲ್ಲಿ ಓದುತ್ತಿದ್ದ 'ಭಾರತ-ಭಾರತೀ' ಪುಸ್ತಕಗಳು ಜ್ಞಾಪಕಕ್ಕೆ ಬಂತು. ಅದರಲ್ಲಿ ಪ್ರೊ. ಎಲ್.ಎಸ್.ಶೇಷಗಿರಿರಾಯರು, ಪ್ರಧಾನ ಸಂಪಾದಕರು ಬರೆಯುತ್ತಾರೆ, "ಜೇಬಿನ ತುಂಬ ಹೊಳೆಹೊಳೆವ ವಜ್ರಗಳು, ದಾರಿಯುದ್ದಕ್ಕೂ ಜಗಮಗಿಸುವ ದೀಪಗಳು. ಇಷ್ಟೆಲ್ಲ ಇದ್ದೂ ಕಣ್ಣು ಮುಚ್ಚಿಕೊಂಡು 'ನಾನು ಬಡವ, ಸುತ್ತಲೂ ಕತ್ತಲೆ' ಎಂದು ಅಳುವವನನ್ನು ಏನು ಮಾಡಲು ಸಾಧ್ಯ.

೩. ಶ್ರೀಮತಿ ಸ್ನೇಹ ಶಶಿಧರ್ – 'ಸೋಲಿನ ಮಹತ್ವ'

ಶ್ರೀಮತಿ ಸ್ನೇಹ ಶಶಿಧರ್ ಅವರು ತಮ್ಮ ಲೇಖನ 'ಸೋಲಿನ ಮಹತ್ವ'ದಲ್ಲಿ ಗೆಲವು ಸೋಲುಗಳ ಬಗ್ಗೆ ತುಂಬಾ ಚೆನ್ನಾಗಿ ಉದಾಹರಣೆಗಳ ಮೂಲಕ ತಿಳಿಸಿದ್ದಾರೆ. ಇಂದಿನ ಎಲ್ಲಾ ದೂರದರ್ಶನಗಳ ಕಾರ್ಯಕ್ರಮಗಳೂ ಟಿಆರ್‌ಪಿ ಮೇಲೆ ನಿಂತಿವೆ.

'ಅವರವರ ಸಾಧನೆ ಅವರವರಿಗೆ ಮುಖ್ಯ. ಗೆಲವೂ ಶಾಶ್ವತವಲ್ಲ, ಸೋಲೂ ಶಾಶ್ವತವಲ್ಲ. ಎರಡನ್ನೂ ಸಮನಾಗಿ ಸ್ವೀಕರಿಸಬೇಕು ಎಂದು ಸುಂದರವಾಗಿ ತಮ್ಮ ಅನಿಸಿಕೆ ತಿಳಿಸಿದ್ದಾರೆ. ನನಗೆ ಕೆ.ಎಸ್.ನ ಅವರ ಪದ್ಯದ ಸಾಲುಗಳು ನೆನಪಿಗೆ ಬಂದುವು.

"ಊರಿಗೆ ಊರೇ ಹಸೆಯಲಿ ನಿಂತರೆ
ಆರತಿ ಬೆಳಗಲು ಜನವೆಲ್ಲಿ?"

ಸ್ನೇಹ ಶಶಿಧರ್ ಅವರಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

೪. ಶ್ರೀಮತಿ ಸಿಂಧು ಹರಿಥಸ್ – 'ರಾಮ ರಮಣಿ'

ಶ್ರೀಮತಿ ಸಿಂಧು ಹರಿಥಸ್ ಅವರ ಪ್ರಸ್ತುತಿ 'ರಾಮ–ರಮಣಿ'. ಇಡೀ ರಾಮಾಯಣವನ್ನು ಆರು ನಿಮಿಷಗಳಲ್ಲಿ ಪ್ರಸ್ತುತಪಡಿಸಿದ್ದಾರೆ.

"ತಂಗಿಯರೇ ವಾರಗಿತ್ತಿಯರು".
"ಮುನ್ನ ನಾ ಕಂಡಿರಲಿಲ್ಲ ಕಾಡು ಮೇಡುಗಳ ಮಾರ್ಗ. ನಿನ್ನ ಕೂಡಿ ನಡೆದಿದ್ದು ನನಗೆ ಅದೇ ಸ್ವರ್ಗ"
"ರಾಕ್ಷಸಿಯನ್ನು ಏಕೆ ದೂಡಿದೆ ಲಕ್ಷ್ಮಣನ ಪಾಲಿಗೆ? ಅವನ ಕೋಪದ ತೀವ್ರತೆ ತಿಳಿಯದೆ ನಿನಗೆ?"
"ದಾಳಿ ಮಾಡುವನೇನೋ ಮಾಡಿ ಯುದ್ಧ ತಯಾರಿ"

ಹೀಗೆ ಸಾನಾನ್ಯ ಗೃಹಿಣಿಯು ತನ್ನ ಗಂಡನೊಂದಿಗೆ ಮಾತನಾಡುವ ರೀತಿ, ಸರಳವಾಗಿ ರಾಮಾಯಣವನ್ನು ಸೀತೆಯಿಂದ ನುಡಿಸಿದ್ದಾರೆ. ಉತ್ತಮ ಪ್ರಯತ್ನ, ಧನ್ಯವಾದಗಳು.

೫. ಶ್ರೀ ಬೆಂ.ಶ್ರೀ. ರವೀಂದ್ರ – 'ರವಿತೇಜನ ಮುಕ್ತಕಗಳು'

ಬೆಂಶ್ರೀ ರವೀಂದ್ರ ಅವರು 'ರವಿ ತೇಜನ ಮುಕ್ತಕ'ಗಳನ್ನು ಪ್ರಸ್ತುತಪಡಿಸಿದ್ದಾರೆ. ಆಗಸಕ್ಕೆ ಆ ರವಿಯ ತೇಜ. ಬಾಳಿಗೆ ಈ ರವಿಯ ತೇಜ! ರವೀಂದ್ರರವರ ಕವನಗಳು ವಿಶಿಷ್ಟ. ಒಂದು ಪದದಲ್ಲಿ ಒಂದು ಕಥೆಯನ್ನು ಅಡಗಿಸಿಟ್ಟು ಹೇಳಿಬಿಡುತ್ತಾರೆ. ಆ ಕಥೆ ಗೊತ್ತಿದ್ದರೆ ಈ ಪದ್ಯದ ಹೊಳಹು ಸಂಪೂರ್ಣ ಅರಿವಾಗುತ್ತದೆ. ಕೆಲವೊಮ್ಮೆ ಎಲ್ಲರೂ ಅವರವರ ಅನಿಸಿಕೆ ತಿಳಿಸಿದ ಮೇಲೆ ಒಂದು ರೂಪ ಸಿಗುತ್ತದೆ. ಆದರೆ ಕವಿ ಮನ ಅದಕ್ಕೂ ಮಿಗಿಲು! ಕೆಲವೊಮ್ಮೆ ವೇದಿಕೆಯಲ್ಲಿ ಜನಾರ್ಧನ ತುಂಗರ ಅನಿಸಿಕೆ ಬಂದ ಮೇಲೆ ಇವರ ಕವನ ಮತ್ತೊಮ್ಮೆ ಓದಿದ್ದಿದೆ.

ಒಂದು ಬೀಜದೊಳಗೆ ಒಂದು ವೃಕ್ಷ ಅಡಗಿರುವಂತೆ, ಅರ್ಥದ ಹೊಳಹು, ವಿಶಾಲತೆ ಇವರ ಕವನಗಳಲ್ಲಿ ನಿಧಾನವಾಗಿ ಹೊರಹೊಮ್ಮುತ್ತದೆ.

'ವಾಲ್ಮೀಕಿ ವ್ಯಾಸರಿಗೂ ಜಿಜ್ಞಾಸುಗಳುಂಟು, ಇದು ನಮಗೆ ತಿಳಿಯಬೇಕಾದರೆ ರಾಮಾಯಣ, ಮಹಾಭಾರತ ತಿಳಿದಿರಬೇಕು. ಹನ್ನೆರಡು ಮುಕ್ತಕಗಳಲ್ಲಿ ಅನೇಕ ವಿಷಯಗಳು ಅಡಗಿವೆ. ಪ್ರಸಕ್ತ ರಾಜಕೀಯವೂ ಇದೆ.

'ನೂರಲ್ಲ ಮೂರಾಡಿದರೆ ಸಾಕು'
'ಸಾಗರವೇಕೆ ಉದ್ದರಣೆಯಲೆ ತೀರ್ಥ'
'ಬಿಟ್ಟವಗೆ ಬಿಟ್ಟಿಹೆನೆಂದೆನಿಸದಿರೆ ತ್ಯಾಗಿಯು'

ಸುಂದರವಾದ, ಅರ್ಥಗರ್ಭಿತ, ಮನದಲ್ಲಿದ್ದು ಕಾಡುವ ಮುಕ್ತಕಗಳು. ಇವುಗಳನ್ನು ನೀಡಿದ ಶ್ರೀ ಬೆಂಶ್ರೀ ರವೀಂದ್ರ ಅವರಿಗೆ ಆದರದ ವಂದನೆಗಳು.

೬. ಶ್ರೀ ಎಂ.ಎಸ್.ಎನ್. – 'ತಲೆ ಶಿರೋಭಾರ'

ಎಂ ಎಸ್ ಎನ್ ಪೆನ್ನು ತೆಗೆದರೆ ಸಾಕು ನಗೆ ಹರಿದು ಬರುತ್ತೆ. ಇವರ ವಿಶ್ವ, ವಿಶಾಲು ನಾಟಕಗಳಲ್ಲಿ ನಾವು ಪಾತ್ರಗಳಾಗಿ ಅವರ ಮನೆಯ ಸೋಫಾ ಮೇಲೆ ಕೂತಿರುತ್ತೇವೆ. ನಾನು ನಾಟಕಗಳನ್ನು ಮಾಡಿರುವುದರಿಂದ ಇವರ ನಾಟಕ ಓದುವಾಗಲೆಲ್ಲ, ನಾನು ವಿಶ್ವನಾಗಿ ಸಂಭಾಷಣೆಗಳನ್ನು ಓದುತ್ತೇನೆ. 'ತಲೆ ಶಿರೋಭಾರ' ನಗೆ ಬರಹ. ಒಂದು ಹಾಸ್ಯ ಲೇಪನದ ಪೊಲಿಟಿಕಲ್ ಸೆಟೈರ್, ರಾಜಕೀಯ ವಿಡಂಬನೆ.

"ಬೇಡ ಅಂದ್ರೂ ಟೂ ವ್ಹೀಲರ್ ತೆಗೊಂಡ್ಹೋದ್ರು. ಹೆಲ್ಮೆಟ್ ಹಾಕ್ಕೊಂಡಿರ್ಲಿಲ್ಲ. ವಾಪಸ್ ಬರೋವಾಗ ಪೊಲೀಸ್ ಹಿಡಿದ್ರು. ತಲೆ ಖಾಲಿ ಇರೋದು ನೋಡಿ ಫೈನ್ ಜಡಿದ್ರು"
"ಮಂತ್ರಿಗಳೂ ಸಹ ಇದ್ರು. ಅವರ್ದೂ ತಲೆ ಖಾಲಿ"
"ಅತ್ತೆ ಒಡೆದ ಪಾತ್ರೆಗೆ ಬೆಲೆ ಇಲ್ಲ!"

ಸರಳವಾಗಿ ನಗಿಸಿ ಬಿಡುತ್ತಾರೆ. ಎಂ ಎಸ್ ಎನ್ ಎಂದರೆ 'ಮಾತಿನಲ್ಲಿ ಸುಮ್ಮನೆ ನಗಿಸಿ ಬಿಡುತ್ತಾರೆ'. ಎಂ ಎಸ್ ಎನ್ ಸರ್ ನಿಮಗೆ 'ತಲೆ ಶಿರೋಭಾರ' ನೀಡಿದ್ದಕ್ಕಾಗಿ ಆದರದ ವಂದನೆಗಳು.

೭. ಶ್ರೀಮತಿ ಕಮಲಾಕ್ಷಿ – 'ಕಾಫಿಗೆ ಹೋಗೋಣ್ವಾ?'

ಶ್ರೀಮತಿ ಕಮಲಾಕ್ಷಿ ಅವರು 'ಕಾಫಿಗೆ ಹೋಗೋಣ್ವಾ?' ಎಂದು ಕಾಫಿ ಬಗ್ಗೆ ಸುಂದರವಾದ ಪ್ರಬಂಧ ಮಂಡಿಸಿದ್ದಾರೆ. ಕಾಫಿ ಬಗ್ಗೆ, ಕಾಫಿ ಮಾಡುವುದರ ಬಗ್ಗೆ, ಕಾಫಿಯ ಉಗಮ ಮತ್ತು ವಿವಿಧ ಕಾಫಿಯ ಬಗ್ಗೆ ತಿಳಿಸಿದ್ದಾರೆ. ವಿಶ್ವದ ಭೂಪಟದಲ್ಲಿ ಕಾಫಿ ನಮ್ಮ ರಾಜ್ಯವನ್ನು ಹಿರಿದಾಗಿಸಿದೆ. ಕಾಫಿ ಕುಡಿಯುವುದರ ಪ್ರಯೋಜನ ಮತ್ತು ಸಂತಸದ ಬಗ್ಗೆ ತಿಳಿಸಿದ್ದಾರೆ.

ನಮ್ಮ ವೇದಿಕೆಯಲ್ಲಿರುವ ಅನೇಕ ಕಾಫಿಪ್ರಿಯರ ಸಾಲಿನಲ್ಲಿ ನೀವಿರುವುದು ನಿಮ್ಮ ಪ್ರಬಂಧದ ಮೂಲಕ ತಿಳಿಯಿತು. ನಿಮ್ಮ ಕಾಫಿ ಪ್ರಬಂಧ ಕೇಳಿ ಎಂಟಿಆರ್ ನಲ್ಲಿ ಬೆಳ್ಳಿ ಲೋಟದಲ್ಲಿ ಕಾಫಿ ಕುಡಿದಷ್ಟು ಸಂತೋಷವಾಯಿತು. ಕಾಫಿಯ ಬಗ್ಗೆ ನಿಮ್ಮ ಸುಂದರ ಲೇಖನಕ್ಕೆ ವಿಶೇಷ ಧನ್ಯವಾದಗಳು. ಕಾಫಿಗೆ ಕರೆದಾಗ ಬಾರದ ಪಾಪಿ ಯಾರಿದ್ದಾರೆ! ನಾನೂ ಕಾಫಿಪ್ರಿಯ!

೮. ಶ್ರೀಮತಿ ಗೌರಿ ಯು. ಭಟ್ – 'ಜಾರವಾಗಳು'

ಶ್ರೀಮತಿ ಗೌರಿ ಯು ಭಟ್ ಅವರ 'ಜಾರವಾಗಳು' ವಿಶೇಷ ಲೇಖನ. ಅಂಡಮಾನಿನ ಒಂದು ಜನಾಂಗದ ಪರಿಚಯವನ್ನು ಮಾಡಿಕೊಡುತ್ತಾರೆ. ಜನಾಂಗದ ಬಗ್ಗೆ ಕೇಳುತ್ತಾ ಹೋದರೆ ಪ್ರಪಂಚದಲ್ಲಿ ಹೀಗೂ ಒಂದು ಜನಾಂಗವಿದೆಯೇ ಎಂದೆನಿಸುತ್ತದೆ.

ಬೆಂಗಳೂರು, ಮುಂಬೈ, ಡೆಲ್ಲಿ ನೋಡಿದ ನಮಗೆ ಇದು ಅತೀ ಆಶ್ಚರ್ಯ ಉಂಟುಮಾಡುತ್ತದೆ. ತುಂಬಾ ಸುಂದರವಾಗಿ ಪ್ರಸ್ತುತಪಡಿಸಿದ್ದಾರೆ. ಕೆಲವು ವಿಷಯಗಳನ್ನು ಕೇಳುವಾಗ ರೋಮಾಂಚನವಾಗುತ್ತದೆ. ಹಾಗೆಯೇ ಭಯವೂ ಮೂಡುತ್ತದೆ.

ಜಾರವಾಗಳ ಜಾಗಕ್ಕೆ ಹೋಗುವಾಗ ಪೊಲೀಸರು ಜೊತೆಗೆ ಬರುತ್ತಾರಂತೆ. ಇವರು ಹೇಳುತ್ತಾರೆ, "ಮೂಲ ನಿವಾಸಿಗಳಿಂದ ನಮ್ಮ ರಕ್ಷಣೆಗೆ ಈ ತರಹ ವ್ಯವಸ್ಥೆ ಇರುವುದು ಅಲ್ಲ. ನಾಗರೀಕರಾದ ನಮ್ಮಿಂದ ಅವರ ರಕ್ಷಣೆಗೆ". ಇದನ್ನು ಕೇಳಿ ನಮ್ಮ ಬಗ್ಗೆ ನಮಗೆ ಅಸಹ್ಯ ಮೂಡುತ್ತದೆ. ಕಾಡಿನಲ್ಲಿರುವ ಅವರು ಅಶಿಕ್ಷಿತರೇ? ಇಲ್ಲಾ ನಾಡಿನಲ್ಲಿ ಎಲ್ಲಾ ಓದಿರುವ ನಾವು ಅಶಿಕ್ಷಿತರೇ?

ನಿಮ್ಮ ಪ್ರವಾಸ ಕಥನ ಬೆರಗು ಮೂಡಿಸಿದ್ದು ಗ್ಯಾರಂಟಿ. ಎಂತಹ ಅನುಭವ ನಿಮ್ಮದು! ಸುಂದರ ಲೇಖನಕ್ಕಾಗಿ ಶ್ರೀಮತಿ ಗೌರಿ ಭಟ್ಟರಿಗೆ ನಮನಗಳು.

೯. ಶ್ರೀ ವಿಠ್ಠಲ ಇಜೇರಿ – 'ಸೊಳ್ಳೆ ಪುರಾಣ'

ಶ್ರೀ ಇಜೇರಿಯವರು ತಮ್ಮ ನವಿರು ಹಾಸ್ಯದಿಂದ ಅನೇಕ ಲೇಖನಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ. ಅವರ ಲೇಖನಗಳಲ್ಲಿ ಹಾಸ್ಯ ತಾನಾಗಿಯೇ ಹೊಮ್ಮುತ್ತದೆ. ಜೀವನದ ಮೇಲೆ ಪ್ರೀತಿ ಇದ್ದಾಗ ಮಾತ್ರ ಹಾಸ್ಯ ಹೊಮ್ಮಲು ಸಾಧ್ಯ. ಈ ಸಲದ 'ಸೊಳ್ಳೆ ಪುರಾಣ' ತುಂಬಾ ಸೊಗಸಾಗಿದೆ. ಬ್ಯಾಟ್ ಬೀಸಿದರೆ ಸೊಳ್ಳೆಯು ಸಾಯುತ್ತದೆ. ವ್ಯಾಯಾಮವೂ ಆಗುತ್ತದೆ. ಜೊತೆಗೆ ಕಾನ್ಸನ್ಟ್ರೇಷನ್ ಇಂಪ್ರೂ ಆಗುತ್ತೆ! ಸೊಳ್ಳೆಯನ್ನೇ ನೋಡಬೇಕಲ್ಲ, ಕಣ್ಣು ದೃಷ್ಟಿಯೂ ಇಂಪ್ರೂವ್ ಆಗುತ್ತೆ. ಹಾಗೆಯೆ ಡಾ. ರಾಘವೇಂದ್ರ ಭಟ್ಟರ 'ಮಶಕ ಪುರಾಣ'ದ ಪರಿಚಯ ನಮಗೆ ಮಾಡಿಕೊಟ್ಟಿದ್ದಾರೆ. "ದಷ್ಟಪುಷ್ಟ ಶರೀರದವರೆಲ್ಲ ತನ್ನವರೆಂಬ ಆತ್ಮೀಯತೆಯಿಂದ, ಪ್ರೀತಿಯಿಂದ ಕಚ್ಚುತ್ತದೆ." ಪರಿಸರವನ್ನು ಸ್ವಚ್ಛವಾಗಿಡಬೇಕು ಎಂಬ ಸೂಚನೆಯೊಂದಿಗೆ ಲೇಖನ ಮುಕ್ತಾಯಗೊಳ್ಳುತ್ತದೆ. ಸುಂದರ ಲೇಖನಕ್ಕಾಗಿ ಇಜೇರಿಯವರಿಗೆ ಧನ್ಯವಾದಗಳು.

೧೦. ಶ್ರೀಮತಿ ನಾಗರತ್ನ ಚಂದ್ರಶೇಖರ್ – 'ಧರೆಗಿಳಿದ ದೇವಿಯರು'

ಶ್ರೀಮತಿ ನಾಗರತ್ನ ಚಂದ್ರಶೇಖರ್ ತಮ್ಮ ಕಲ್ಪನೆಯನ್ನು ತುಂಬಾ ಸುಂದರವಾಗಿ ಹಾಸ್ಯದ ರೂಪದಲ್ಲಿ ನೀಡಿದ್ದಾರೆ. ಕೋವಿಡ್ ಅನಂತರದ ದೃಶ್ಯ, ಗಣೇಶ, ಪಾರ್ವತಿ, ಲಕ್ಷ್ಮಿ, ಸರಸ್ವತಿಯರ ಸಂವಾದ ಮುದ ನೀಡುತ್ತದೆ.

"ಗಣೇಶನಿಗೆ ಅಂತೂ ತುಂಬಾ ನಿರಾಶೆಯಾಯಿತು. ಹಾಡು ಕುಣಿತ ಮೆರವಣಿಗೆ ಎಲ್ಲಾ ಕಡಿತ". ಕಲ್ಪನೆ ಬಹಳ ಸುಂದರವಾಗಿದೆ. ನಮ್ಮ ಗಣೇಶನಂತೂ ಸಿನಿಮಾ ಹಾಡು ಕುಣಿತಗಳಿಗೆ ಒಗ್ಗಿಬಿಟ್ಟಿದ್ದಾನೆ. ವರ್ಷಕೊಮ್ಮೆ ಸಿಗುವ ಈ ಮನರಂಜನೆ ತಪ್ಪಿಹೋಯಿತು. ಹಬ್ಬಗಳಲ್ಲಿ, ನೈಟಿಯಲ್ಲಿ ಪೂಜೆ ಮಾಡುವುದನ್ನು ಸುಂದರವಾಗಿ ವ್ಯಂಗ್ಯ ವ್ಯಕ್ತಪಡಿಸಿದ್ದಾರೆ. ಶ್ರೀಮತಿ ನಾಗರತ್ನ ಅವರ ನಗೆಬರಹಕ್ಕಾಗಿ ಅವರಿಗೆ ನಮಸ್ಕಾರಗಳು.

೧೧. ಶ್ರೀಮತಿ ಪೂರ್ಣಿಮಾ ಭಗವಾನ್ – 'ರಹಸ್ಯ'

ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ಹದಿನಾಲ್ಕು ಮುಕ್ತಕಗಳನ್ನು ಪ್ರಸ್ತುತಪಡಿಸಿದ್ದಾರೆ. ಮುಕ್ತಕಗಳು ನಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಒಂದು ಮುಖ್ಯವಾದ ಸೃಷ್ಟಿ. ಕಡಿಮೆ ಸಾಲುಗಳಲ್ಲಿ ವಿಶಾಲವಾದ ಅರ್ಥವನ್ನು ಹೊಮ್ಮಿಸುವ ಪದ್ಯಗಳು.

ನಮ್ಮ ವಿಶ್ವಾಸ, ಸಂತಸ, ಆತ್ಮವಿಶ್ವಾಸ ನಮ್ಮ ವಿಕಸನಕ್ಕೆ ಮುಖ್ಯ.

"ಕೀಲಿ ಕೈ ಬಳಿಯಲಿರೆ ಕದ ತೆರೆಯಲೇಕೆ ತಡ"
"ಖುಷಿಯ ಸೂತ್ರವಡಗಿದೆ ನಿಮ್ಮ ಮನದೊಳಗೆ"
"ವಿಷಯದ ಹರಿವಿನಲಿ ಸಂತಸವು ಅಡಗಿರಲು"

ಜ್ಞಾನಾರ್ಜನೆ ಮನುಜನಿಗೆ ಸಂತೃಪ್ತಿ ಮತ್ತು ಸಂತಸವನ್ನು ನೀಡುತ್ತದೆ. 'ಪ್ಲಾಸಿಬೋ' ಪರಿಣಾಮವನ್ನು ಮುಂದಿಟ್ಟುಕೊಂಡು ಎರಡು ಮುಕ್ತಕಗಳನ್ನು ನೀಡಿದ್ದಾರೆ. ವಿಜ್ಞಾನದಿಂದ ಬ್ರಹ್ಮಾಂಡದತ್ತ ದೃಷ್ಟಿ ಹರಿಸಿದ್ದಾರೆ. ಅನಂತದರಿವು ಉಂಟಾದರೆ ಅದಕ್ಕಿಂತ ಉತ್ಕೃಷ್ಟವಾದುದ್ದು ಬೇರೇನಿಲ್ಲ.

ಅವನು, ನಾನು, ಅವನಲ್ಲಿ ನಾನು, ನನ್ನಲ್ಲಿ ಅವನು, ಒಂದರಲ್ಲಿ ಒಂದು ಲೀನ. ಅದು ಜೀವನ ಸಾಕ್ಷಾತ್ಕಾರ.
ಸುಂದರ ಮುಕ್ತಕಗಳನ್ನು ನೀಡಿದ ಶ್ರೀಮತಿ ಪೂರ್ಣಿಮಾ ಭಗವಾನ್ ಅವರಿಗೆ ಅನಂತ ವಂದನೆಗಳು.

೧೨. ಶ್ರೀಮತಿ ರೇಣುಕಾ ದೇಸಾಯಿ – 'ವಿಭಿನ್ನ ನೋಟ'

ಶ್ರೀಮತಿ ರೇಣುಕಾ ದೇಸಾಯಿ ಅವರ 'ವಿಭಿನ್ನ ನೋಟ' ಪ್ರೇಕ್ಷಕರ ನೋಟದ ಬಗ್ಗೆ ಬರೆದ ಲೇಖನ. ಪ್ರಾಚಾರ್ಯ ಎಚ್ಚೆಸ್ಕೆಯವರ ಪ್ರಬಂಧಗಳು ರಂಗರೂಪದಲ್ಲಿ ಎಲ್ಲರ ಮುಂದೆ ಪ್ರದರ್ಶಿತವಾಗಿದ್ದು ನಿಮಗೆಲ್ಲರಿಗೂ ತಿಳಿದ ವಿಷಯವೇ. ಎರಡು ಪ್ರಬಂಧಗಳನ್ನು ರಂಗರೂಪಕ್ಕೆ ಶ್ರೀ ಧೀರೇಂದ್ರ ಅವರು ಅತ್ಯಂತ ಸಮರ್ಪಕವಾಗಿ ಅಳವಡಿಸಿದ್ದಾರೆ. ಪ್ರಬಂಧ ಓದಲು ಸರಿ. ಅದನ್ನು ನಾಟಕ ಮಾಡಿದಾಗ, ಡ್ರಾಮಾಟಿಕ್ ಎಲಿಮೆಂಟ್ಸ್ ಇಲ್ಲದ ಕಾರಣ ಸೊರಗುವ ಸಾಧ್ಯತೆ ಇರುತ್ತದೆ. ಆದರೆ ಧೀರೇಂದ್ರ ಅವರಿಲ್ಲಿದ್ದ ನಿರ್ದೇಶಕ, ಮಾವಿನ ಮರಕ್ಕೆ ಕಲ್ಲು ಹೊಡೆಯುವುದು, ಮಾವಿನಹಣ್ಣು ತಿನ್ನುವುದು, ಈ ದೃಶ್ಯಗಳ ಚುರುಕುತನದಿಂದ ನಾಟಕವನ್ನು ಮತ್ತೊಂದು ಹಂತಕ್ಕೆ ಎತ್ತಿ ಹಿಡಿಯಲು ಸಮರ್ಥನಾದ.

ರೇಣುಕಾ ದೇಸಾಯಿಯವರು ತಮ್ಮ ನಾಟಕ ತಾಲೀಮಿನ ದಿನಗಳನ್ನು, ರಂಗದ ಮೇಲಿನ ನಟನೆಯನ್ನು ರಂಗರಂಗಾಗಿ ಪ್ರಸ್ತುತಪಡಿಸಿದ್ದಾರೆ. ಅವರಿಗೆ ಧನ್ಯವಾದಗಳು.

೧೩. ಶ್ರೀಮತಿ ಶೀಲಾ ಅರಕಲಗೂಡು – 'ಒತ್ತಡ ಇರಬೇಕು'

ಶ್ರೀಮತಿ ಶೀಲಾ ಅರಕಲಗೂಡು ಅವರ ಲಲಿತ ಪ್ರಬಂಧ 'ಒತ್ತಡ ಇರಬೇಕು'. ಇಂದು ಪ್ರತಿಯೊಬ್ಬ ಮನುಷ್ಯನೂ ಒತ್ತಡದಲ್ಲೇ ಇದ್ದಾನೆ. ಪ್ರತಿಯೊಬ್ಬರೂ ಧನಾತ್ಮಕ ಒತ್ತಡಗಳನ್ನು ಬೆಳೆಸಿಕೊಳ್ಳಿ ಎಂದು ಕಿವಿಮಾತು ನುಡಿದಿದ್ದಾರೆ. ಹಾಗೆಯೇ ನಮ್ಮ ವೇದಿಕೆಯ ಬಗ್ಗೆ ಸುಂದರವಾದ ಮಾತುಗಳನ್ನು ಆಡಿದ್ದಾರೆ. ಹೌದು, ನಿಜ ನಮ್ಮ ವೇದಿಕೆ ಮತ್ತು ಸಂಚಾಲಕರು ಸುಂದರವಾದ ಮತ್ತು ಅನುಭವಿಸಬಹುದಾದ ಒತ್ತಡಗಳನ್ನು ಹೇರಿ ಅನೇಕ ಸಾಹಿತಿಗಳನ್ನು ಬೆಳಕಿಗೆ ತಂದಿದ್ದಾರೆ.

ಕಾಲು ಮೊಳಕೆಯೊಡೆಯಲು ಅದನ್ನು ನೆನೆಸಿ, ಬಟ್ಟೆಯಲ್ಲಿ ಸುತ್ತಿ, ಅದರ ಮೇಲೆ ಒತ್ತಡ ಹೇರುತ್ತಾರೆ. ಆಗ ಮೊಳಕೆಯೊಡೆಯುತ್ತದೆ. ಇಂತಹ ಒತ್ತಡಗಳು ಮನುಷ್ಯನಿಗೆ ಇರಬೇಕು. ಆಗ ಅವನು ಬೆಳೆಯಲು ಅನುಕೂಲವಾಗುತ್ತದೆ. ಸುಂದರ ಪ್ರಬಂಧಕ್ಕಾಗಿ ಶ್ರೀಮತಿ ಶೀಲಾ ಅರಕಲಗೂಡು ಅವರಿಗೆ ಧನ್ಯವಾದಗಳು.

೧೪. ಶ್ರೀ ಮಹಾಬಲ – 'ಸುಮ್ಮನೆ ಏಕೆ ನಿಂದಿಸುವಿರಿ ಮೊಬೈಲನ್ನು'

ಶ್ರೀ ಮಹಾಬಲ ಅವರು ತಮ್ಮ ತಿಳಿಹಾಸ್ಯದ 'ಸುಮ್ಮನೆ ಏಕೆ ನಿಂದಿಸುವಿರಿ ಮೊಬೈಲನ್ನು' ಎಂಬ ಲೇಖನ ಪ್ರಸ್ತುತಪಡಿಸಿದ್ದಾರೆ. ಇವರ ಲೇಖನಗಳು ತಿಳಿ ಸಾರು ಕುಡಿದಂತೆಯೇ ಮುದ ನೀಡುತ್ತದೆ. ಮೊಬೈಲ್ ಫೋನಿನಿಂದ ಇಂದು ಆಗುತ್ತಿರುವ ಉಪಯೋಗ ಮತ್ತು ಅದರ ಮೇಲಿನ ಅವಲಂಬನೆಯನ್ನು ತಮ್ಮ ನವಿರು ಹಾಸ್ಯದ ಮೂಲಕ ನಮಗೆ ಕಚಗುಳಿ ಇಟ್ಟಿದ್ದಾರೆ.

'ಹರುಷದ ಕೂಳಿಗೆ ಆಸೆಪಟ್ಟು, ವರುಷದ ಕೂಳಿಗೆ ಕಲ್ಲು ಹಾಕಿಕೊಳ್ಳುವುದು ಸರಿಯಲ್ಲ' ಬಹಳ ಸುಂದರವಾಗಿದೆ. ಇನ್ನೊಂದು ತಿಳಿಹಾಸ್ಯ, "ನಿಮ್ಮ ಸಭೆಯಲ್ಲಿ ಐದು ಜನರಿದ್ದರೆ, ನಾಲ್ಕು ಜನ ಸರದಿಯ ಮೇಲೆ ಇಂಥ ಫೋನ್ ಎಂದರೆ, ಹೆಂಡತಿಯ ಕಾಲ್ ಸ್ವೀಕರಿಸಲೇಬೇಕು. ಹೆಚ್ಚು ಕಡಿಮೆ ಇದೇ ವಿಷಯ ಅಂದರೆ, ಬರುವಾಗ ಅದನ್ನು ತನ್ನಿ, ಇದನ್ನು ತನ್ನಿ. ಮತ್ತೊಬ್ಬನಿಗೆ ಫೋನ್ ಬರುವುದಿಲ್ಲ. ಏಕೆಂದರೆ ಅವನು ಮದುವೆಯಾಗಿರುವುದಿಲ್ಲ" ಇದು ಕಚಗುಳಿ.

ಇದರಲ್ಲಿ ಫೋನು ಮಾಡಬಹುದೇ ಎಂದು ಕೇಳುವಷ್ಟರಮಟ್ಟಿಗೆ ಮೊಬೈಲಿನ ಬಹುಪಯೋಗಿತನ ಮುಂದೆ ಹೋಗಿದೆ. ಇದನ್ನು ಓದಿದಾಗ ನನಗೆ ಐಫೋನ್ ಜಾಹಿರಾತು ನೆನಪಿಗೆ ಬಂತು. ಅದರಲ್ಲಿ ಬರೀ ಫೋನ್ ಕ್ಯಾಮೆರಾ ಬಗ್ಗೆ ಹೇಳುತ್ತಾರೆ. ಲೇಖನದ ಕಡೆಯಲ್ಲಿ ಗಾಂಧಿಯವರ ತುಂಬಾ ಸುಂದರವಾದ ಸಾಲನ್ನು ಉಲ್ಲೇಖಿಸಿದ್ದಾರೆ. 'ವಾಲ್ಮೀಕಿ ಅವರು ರಾಮಾಯಣದಲ್ಲಿ ರಾಮ ರಾವಣ ಇಬ್ಬರನ್ನು ಸೃಷ್ಟಿಸಿದರು. ಅದರರ್ಥ ಜನ ರಾವಣನನ್ನು ಅನುಸರಿಸಿ ಎಂದಲ್ಲವಲ್ಲ.' ಮಹಾಬಲ ಅವರಿಗೆ ನನ್ನ ಪ್ರೀತಿಯ ನಮಸ್ಕಾರಗಳು.

೧೫. ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ – 'ತನಿ ಎರೆಯೋಣ'

ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ ಅವರ ಪ್ರಸ್ತುತಿ 'ತನಿ ಎರೆಯೋಣ', ನಾಗರ ಪಂಚಮಿಯ ಶುಭ ಸಂದರ್ಭದ ಸೊಗಸಾದ ಕವನ. 'ಕಲ್ಲ ನಾಗರವ ಕಂಡರೆ ಹಾಲೆರೆಯೆಂಬರು, ದಿಟದ ನಾಗರವ ಕಂಡರೆ ಕೊಲ್ಲುಕೊಲ್ಲೆಂಬರು' ಎನ್ನುವ ಅಣ್ಣನವರ ವಚನ ನೆನಪಿಗೆ ತರಿಸುತ್ತದೆ. ಒಂದೆಡೆ ಭಕ್ತಿ, ಮತ್ತೊಂದೆಡೆ ಭಯ! ಹಳೆಯ ನೆನಪುಗಳನ್ನು ಮೆಲಕು ಹಾಕುತ್ತಾ, ನಾಗರ ಪಂಚಮಿ ಹಬ್ಬವನ್ನು ಮಾಡೋಣ, ಎಲ್ಲರೂ ಸೇರೋಣ, ಉಯ್ಯಾಲೆ ಆಡೋಣ ಎಂದು ಸಂತಸದಿಂದ ಕರೆದಿದ್ದಾರೆ. ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ ಅವರಿಗೆ ಈ ಸುಂದರ ಕವನ ಹಾಗೂ ಹಳೆಯ ನೆನಪುಗಳನ್ನು ಮತ್ತೆ ತಂದು ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

೧೬. ಶ್ರೀಮತಿ ಶೃತಿ ಕಟ್ಟಿ – 'ಭಾರತೀಯತೆಯ ಗರಿಮೆ'

ಶ್ರೀಮತಿ ಶೃತಿ ಕಟ್ಟಿಯವರ 'ಭಾರತೀಯತೆಯ ಗರಿಮೆ' ಉತ್ಕಟ ದೇಶಭಕ್ತಿಯ ಲೇಖನ. ವಿಷ್ಣು ಪುರಾಣದ ಶ್ಲೋಕವನ್ನು ಉಲ್ಲೇಖಿಸಿ ಅಖಂಡ ಭಾರತದ ವರ್ಣನೆ ಮಾಡುತ್ತಾ, ಇತಿಹಾಸ, ಸಾಹಿತ್ಯ, ಕಲೆ, ನಡವಳಿಕೆಯಲ್ಲಿ ಗೋಚರಿಸುವ ನಮ್ಮ ನಾಡಿನ ಹೆಗ್ಗಳಿಕೆಯನ್ನು, ವೈವಿಧ್ಯತೆಯನ್ನು ತಮ್ಮ ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ. ಕವಿ ಜಾನಕಿರಾಮರ 'ಭಾರತಿ' ಕವನದ ಎರಡು ಸುಂದರ ಪ್ಯಾರಾಗಳನ್ನು ಪ್ರಸ್ತುತಪಡಿಸಿ, ಲೇಖನಕ್ಕೆ ಮತ್ತಷ್ಟು ಮೆರೆಗನ್ನು ತಂದಿದ್ದಾರೆ.

ನಮ್ಮ ದೇಶದ ಈಗಿನ ಪರಿಸ್ಥಿತಿಗೆ ಮತ್ತು ಪ್ರಪಂಚದ ಪ್ರಚಲಿತ ವಿದ್ಯಮಾನಗಳ ಸಂದರ್ಭದಲ್ಲಿ ಒಂದು ಉತ್ತಮ ದೇಶಭಕ್ತಿ ಲೇಖನ. ಲೇಖಕಿ ಶೃತಿ ಕಟ್ಟಿ ಅವರಿಗೆ ಅಭಿನಂದನೆಗಳು.

೧೭. ಶ್ರೀ ಗುರುರಾಜ ಶಾಸ್ತ್ರಿ – 'ಶ್ರೀಖಂಡ ಮಹಾದೇವ'

ಶ್ರೀ ಗುರುರಾಜ ಶಾಸ್ತ್ರಿಯವರ 'ಶ್ರೀಖಂಡ ಮಹಾದೇವ' ಭಾರತದ ಅತೀ ಕಠಿಣವಾದ ತೀರ್ಥಯಾತ್ರೆ ಚಾರಣ. ಅವರ ಇತ್ತೀಚಿನ ಪ್ರವಾಸ ಕಥನ ಕೇಳುತ್ತಿದ್ದರೆ ಹಾಗೆಯೇ ರೋಮಾಂಚನವಾಗುತ್ತದೆ. ಈ ಚಾರಣಕ್ಕಾಗಿ ಎಷ್ಟು ದೈಹಿಕವಾಗಿ ತಯಾರಾಗ ಬೇಕಾಗುತ್ತದೆ ಎಂದು ಊಹಿಸಿಯೇ ಸುಸ್ತಾಗುತ್ತದೆ. ಸುಮ್ಮನೆ ಕಿಲೋಮೀಟರುಗಟ್ಟಲೆ ನಡೆಯುವುದೇ ಕಷ್ಟ. ಅದೂ ಪರ್ವತ, ಏಳುಬೀಳುಗಳು, ಕಲ್ಲು ಬಂಡೆಗಳು, ಹಿಮದ ನದಿಗಳ ಮೇಲೆ ಇಡೀ ದಿನ ನಡೆಯುತ್ತಲೇ ಇರುವುದು. ಅಬ್ಬ, ಕೇಳಿದರೆ ಸಾಕು ಒಂದು ಅಲೌಕಿಕ ಭಾವನೆ ಮೂಡುತ್ತದೆ. ನಿಮ್ಮ ಮಾತುಗಳಲ್ಲಿ ಕೇಳುತ್ತಿದ್ದರೆ, ಅದೆಷ್ಟು ನಡೆಯಬೇಕು, ಅದೆಷ್ಟು ಏರಬೇಕು ಎಂದು ವಿಸ್ಮಯ ಮತ್ತು ಬೆರಗು ಮೂಡಿತು. ಅಲ್ಲಿ ಮಹದೇವನ ಮುಂದೆ ಕುಳಿತು ರುದ್ರ, ವೇದ ಮಂತ್ರ ಪಠಣ ಒಂದು ಅವ್ಯಕ್ತ ಅನುಭವ.

ಗುರುರಾಜ ಶಾಸ್ತ್ರಿಯವರಿಗೆ ಕಷ್ಟದ ಚಾರಣ ಮುಗಿಸಿ ಸುಖವಾಗಿ ಹಿಂದಿರುಗಿ ಬಂದಿದ್ದಕ್ಕೆ ಅಭಿನಂದನೆಗಳು. ಮಹಾದೇವನ ಕೃಪಾಶೀರ್ವಾದ ಎಲ್ಲರಿಗೂ ಇರಲಿ. ನಿಮ್ಮ ಮತ್ತೊಂದು ಪ್ರವಾಸ ಕಥನ ಪುಸ್ತಕ ರೂಪದಲ್ಲಿ ಮುದ್ರಿತವಾಗಿ ಹೊರಬರಲಿ ಎಂದು ಆಶಿಸುತ್ತೇನೆ. ಅಭಿನಂದನೆಗಳು ಗುರುರಾಜ ಶಾಸ್ತ್ರಿಯವರಿಗೆ.

೧೮. ಶ್ರೀ ವೆಂಕಟೇಶ ಕಾಮತ್ – 'ತಂಗಾಳಿ'

ಶ್ರೀ ವೆಂಕಟೇಶ ಕಾಮತ್ ಅವರ 'ತಂಗಾಳಿ' ಕಥೆ ತಂಗಾಳಿಯಷ್ಟೇ ಮೃದುವಾಗಿ ಸಾಗುತ್ತೆ. ಕಥೆಯನ್ನು ಹೇಳುವ ರೀತಿ ಆಕರ್ಷಕವಾಗಿದೆ. ಕೆಲವೊಂದು ಸಾಲುಗಳು ಕಥೆಗೆ ಒಂದು ರೀತಿಯ ಮೆರಗನ್ನು ಕೊಡುತ್ತದೆ.

"ನಿಲ್ಲಿಸಬೇಡ.. ನಿರಂತರವಾಗಿ ನುಡಿಸುತ್ತಿರು.. ನನಗಾಗಿ.. ನಮ್ಮಿಬ್ಬರಿಗಾಗಿ.." – ಪ್ರಕೃತಿಯಲ್ಲಿ ಒಬ್ಬನೇ ಕೂತು ಕೊಳಲು ಬಾರಿಸುತ್ತಿರುವ ಕಡೆಗೆ ಇವಳು ಕೈಬೀಸಿ ಬಂದು ನುಡಿವ ಚಿತ್ರಣವನ್ನು ಮನದಲ್ಲಿ ಕಲ್ಪಿಸಿಕೊಳ್ಳಿ.

ಮುಂದೆ ಕಥೆಯಲ್ಲಿ ಬರುವ ವಾಕ್ಯ ಸುಂದರ, "ಹೃದಯದಲ್ಲಿ ಒಂದು ಮಧುರ ಭಾವನೆ ಸುಳಿದು ತಂಗಾಳಿ ಒಳಹೊಕ್ಕಿತು."

ವೆಂಕಟೇಶ ಕಾಮತರು ಕಥೆಯಲ್ಲಿ ಪ್ರೀತಿಯ ಭಾವಗಳನ್ನು ಸುಂದರವಾಗಿ ಮೂಡಿಸಿದ್ದಾರೆ. ರೇಷ್ಮೆ ಸೀರೆಯಲ್ಲಿ ನವಿರಾಗಿ ಝರಿಯನ್ನು ನೇಯ್ದಂತೆ!

ವೆಂಕಟೇಶ ಕಾಮತ್ ಅವರಿಗೆ ಒಂದು ಕೋರಿಕೆ. ಕಾಮತರೆ ಕಥಾ ಶ್ರಾವಣಕ್ಕೆ ನಿಮ್ಮ ಕಥೆಗಳು ಬರಲಿ, ಧನ್ಯವಾದ.

೧೯. ಶ್ರೀಮತಿ ಮಾಲತಿ ಶ್ರೀನಿವಾಸನ್ – ಶ್ರಾವಣದ ತೇರು' ಮತ್ತು 'ಧ್ಯಾನ ಗಂಗೆ'

ಶ್ರೀಮತಿ ಮಾಲತಿ ಶ್ರೀನಿವಾಸನ್ ಸದಾ ನಗುತ್ತಾ, ಮೃದುವಾಗಿ ಪ್ರೀತಿಯಿಂದ ಎಲ್ಲರನ್ನೂ ಮಾತನಾಡಿಸುವರು. ಅವರ ಕವನಗಳಲ್ಲಿಯೂ ಆ ಮೃದು, ನಯ ವ್ಯಕ್ತವಾಗುತ್ತದೆ. 'ಶ್ರಾವಣದ ತೇರು' ಇದು ಮುಖ್ಯವಾಗಿ ನಮ್ಮ ವೇದಿಕೆಗೆ ಸಂಬಂಧಿಸಿದ ಕವನ. ಕವನ ಬರೆಯಬೇಕೆಂಬ ಆಸೆ, ತುಡಿತ. ಆದರೆ ಬರೆಯಲು ಸಮಯ ಸಾಲದು. ಸರಿ, ಹಾಗಾದರೆ ಬೇರೆಯವರು ಬರೆದಿರುವುದನ್ನು ಓದೋಣ. ಓದಿದರೆ ಬರೆಯುವ ಆಸೆ! ಅಲ್ಲಿಗೆ ನಮ್ಮ ವೇದಿಕೆಯ ಆಶಯ ಸಾರ್ಥಕವಾಯಿತು.

ಅವರ ಎರಡನೇ ಕವನ 'ಧ್ಯಾನ ಗಂಗೆ'. ಅಷ್ಟಾಂಗ ಯೋಗ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ. ಯೋಗದಲ್ಲಿ ಧ್ಯಾನವೂ ಒಂದು ಅಂಗ. ಧ್ಯಾನ ನನ್ನನ್ನು ನಾನು ಅಂತರ್ಮುಖಿಯಾಗಿ ನೋಡಿಕೊಳ್ಳುವ ವಿಧಾನ. ಮನುಷ್ಯ ಸಂಘಜೀವಿ. ಸಮಾಜದಲ್ಲಿರುವವ. ನಾನು ನಾವಾಗಬೇಕು, ನಾವು ನಾನಾಗಬೇಕು ಎಂಬುದನ್ನು 'ಧ್ಯಾನ ಗಂಗೆ' ಕವನದಲ್ಲಿ ಎಲ್ಲರ ಬಗೆಗಿನ ಕಾಳಜಿಯಿಂದ ಹೇಳಿದ್ದಾರೆ.

'ಸುತ್ತಲಿರುವವರ ಆಧರಿಸಿ, ದೀನ ದಲಿತರ ಸಂತೈಸಿ, ಮಾಡುವ ಸೇವೆಯೇ ಧ್ಯಾನ. ನನಗೆ ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ನೆನಪಿಗೆ ಬರುತ್ತದೆ. 'ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ'.

ಮಾಲತಿ ಶ್ರೀನಿವಾಸನ್ ಅವರಿಗೆ ಆತ್ಮೀಯ ವಂದನೆಗಳು.

೨೦. ಶ್ರೀ ಕೆ.ಎನ್. ಭಗವಾನ್ – 'ಮೂರು ಕಥೆ ಮೂರು ದೆಶೆ'

ಶ್ರೀ ಭಗವಾನ್ ಅವರು 'ಮೂರು ಕಥೆ ಮೂರು ದೆಶೆ' ಕಥೆಯನ್ನು ಪ್ರಸ್ತುತಪಡಿಸಿದ್ದಾರೆ. ದಿನಪತ್ರಿಕೆಯಿಂದ ಇವರಿಗೆ ಬಂದ ಕವರ್ ಮತ್ತು ಚೆಕ್ ಬಗ್ಗೆ ಮೂಡಿದ ಆಶ್ಚರ್ಯ ಕಥೆಯಾಗಿ ರೂಪಗೊಂಡಿದೆ. ಕಬ್ಬನ್ ಪಾರ್ಕ್ ಪತ್ರಿಕಾಗೋಷ್ಠಿಯಲ್ಲಿ ನಡೆದ ಸಂಗತಿಯನ್ನು ತಿಳಿಸಿದ್ದಾರೆ. ಕತೆಯ ಪ್ರಕಟಣೆಯ ಬೇವು ಬೆಲ್ಲದ ಸಂಗತಿಯನ್ನು ತುಂಬಾ ಸುಂದರವಾಗಿ ನಿರೂಪಿಸಿದ್ದಾರೆ. ಶ್ರೀ ಭಗವಾನ್ ಅವರಿಗೆ ಧನ್ಯವಾದಗಳು.

೨೧. ಶ್ರೀ ಶ್ರೀಧರ ಬಾಣಾವರ – 'ಜಯವರ್ಮನು ಆಳಿದ ನಾಡಿನ ಅಪ್ಸರೆಯರೊಂದಿಗೆ ಒಂದು ಸಂಜೆ'

ಶ್ರೀ ಶ್ರೀಧರ ಬಾಣಾವರ ಅವರ 'ಜಯವರ್ಮನು ಆಳಿದ ನಾಡಿನ ಅಪ್ಸರೆಯರೊಂದಿಗೆ ಒಣದು ಸಂಜೆ', ಕಾಂಬೋಡಿಯಾದ ಅಪ್ಸರ ನೃತ್ಯ, ಪ್ರವಾಸ ಕಥನ ಚೆನ್ನಾಗಿ ಮೂಡಿಬಂದಿದೆ. ಭರತಮುನಿಯ ನಾಟ್ಯ ಶಾಸ್ತ್ರವೇ ಎಲ್ಲಾ ನಾಟ್ಯಕಲೆಗಳಿಗೂ ಮೂಲ ಎಂದು ಇತಿಹಾಸ ಹೇಳುತ್ತದೆ. ನಂತರ 'ಶಿಲಪದಿಕಾರಂ'.

ಕಾಂಬೋಡಿಯಾದ ಖಮೇರ್ ನೃತ್ಯ ಪ್ರಕಾರ ಬಹಳ ಹಳೆಯದು. ದೇವಸ್ಥಾನಗಳಲ್ಲಿ ಆಡುತ್ತಿದ್ದ ನೃತ್ಯ ಮತ್ತು ರಾಜರ ಆಸ್ಥಾನದಲ್ಲಿ ಆಡುತ್ತಿದ್ದ ನೃತ್ಯ- ಇದರಲ್ಲಿ ನಮ್ಯತೆ, ಆಂಗಿಕ ಅಭಿನಯ ಮುಖ್ಯ. ಹಾವಭಾವದಲ್ಲಿ ಹಾವಿನ ಬಳಕೆಯಿದೆ.

ವಿಯೆಟ್ನಾಂ ಉದ್ಧದಿಂದಾಗಿ ಅನೇಕ ವಿಷಯಗಳು ನಾಶವಾಗಿ ನಷ್ಟ ಉಂಟಾಯಿತು. ಈ ಕಲೆಯು ನಶಿಸಿ ಹೋಗುವ ಪರಿಸ್ಥಿತಿಯುಂಟಾಗಿತ್ತು. ಕಲೆಯ ಮೇಲಿನ ಅಭಿಲಾಷೆಯಿಂದ ಅಲ್ಲಿನ ಜನರು ಪುನಶ್ಚೇತನಗೊಳಿಸಿದ್ದಾರೆ. ಮತ್ತೆ ಕಲೆ ಜನಪ್ರಿಯವಾಗುವಂತೆ ಮಾಡಿದ್ದಾರೆ.

ಶ್ರೀಧರ ಬಾಣಾವರ ಅವರ ಅಪ್ಸರೆಯರ ನೃತ್ಯದ ಅನುಭವ ಸರಳ ಸುಂದರವಾಗಿ ಮೂಡಿಬಂದಿದೆ. ಅಪ್ಸರೆಯರ ಉಡುಗೆತೊಡುಗೆಗಳು, ಆಭರಣಗಳು ನೋಡಲು ಬಹಳ ಸುಂದರವಾಗಿರುತ್ತದೆ.

ಅವರ ಸುಂದರ ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕಾಗಿ ಶ್ರೀಧರ ಬಾಣಾವರ ಅವರಿಗೆ ಧನ್ಯವಾದಗಳು.

೨೨. ಶ್ರೀ ಸೀತಾರಾಮ ಕಟ್ಟಿ (ಜಾನಕಿರಾಮ) – 'ಈ ನನ್ನ ಜೀವನ'

'ಜಾನಕಿ ರಾಮ' ಕಾವ್ಯನಾಮದ ಸೀತಾರಾಮ ಕಟ್ಟಿಯವರ 'ಈ ನನ್ನ ಜೀವನ' ಸರಳ ಸುಂದರ ಕವನ. ಜೀವನ ಸಾಧಾರಣವಾಗಿದ್ದರೂ ಪರವಾಗಿಲ್ಲ, ನಡೆಯುತ್ತಿರುತ್ತದೆ. ಆದರೆ ಹಗಲುಗನಸನ್ನು ನಂಬಿ ಕೂತರೆ ಏನು ಆಗುವುದಿಲ್ಲ!

ಮೈದಣಿದು ಆಗುವ ದಾಹ, ಹೆದರಿಕೆಗೆ ಪಸೆಯೊಳಗೆ ಆಗುವ ದಾಹ ಇವೆಲ್ಲ ಮೈಗಾಗುವ ದಾಹಗಳು. ಆದರೆ ಆಸೆ, ಅತಿಯಾಸೆಗಳಿಂದ ಮನಸ್ಸಿಗೆ ಆಗುವ ದಾಹ ತೀರಿಸಲಾಗುವುದಿಲ್ಲ! ಹೀಗೆ ವರ್ಣಿಸುತ್ತಾ, ಜೀವನ ಹೇಗಿರಬೇಕೆಂದು ಬರೀ ಎರಡು ಸಾಲುಗಳಲ್ಲಿ ಅತ್ಯಂತ ಸೂಕ್ತವಾಗಿ ನುಡಿದಿದ್ದಾರೆ.
"ಅಲ್ಲದರ ಬೆಂಬತ್ತಿ ಇರುವುದನು ಕಳೆಯುವ ಹಗಲುಗನಸು ಅಲ್ಲ ನನ್ನ ಜೀವನ" ಸೊಗಸಾದ ಸಾಲುಗಳು. ಶ್ರೀ ಸೀತಾರಾಮಕಟ್ಟಿ ಅವರಿಗೆ ಅಭಿನಂದನೆಗಳು.

೨೩. ಶ್ರೀಮತಿ ಗಿರಿಜಾ ರಾಜ್ – 'ಕೇಸರಿ ಬಿಳಿ ಹಸಿರು ಮೂರು'

ಶ್ರೀಮತಿ ಗಿರಿಜಾ ರಾಜ್ ಅವರ 'ಕೇಸರಿ ಬಿಳಿ ಹಸಿರು ಮೂರು' ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಪ್ರಸ್ತುತಪಡಿಸಿದ ಕವನ. ಚಿಕ್ಕಂದಿನಲ್ಲಿ ಓದಿದ ಪದ್ಯವನ್ನು ಜ್ಞಾಪಿಸಿಕೊಂಡು ನಿಧಾನವಾಗಿ ಇಂದಿನ ಕಟು ವಾಸ್ತವದತ್ತ ಬರುತ್ತಾರೆ. ಆಗಸದ ತುಂಬಾ ತುಂಬಿರುವ ನೀಲಿ ಬಣ್ಣವನ್ನು ವಿಷಕ್ಕೆ ಹೋಲಿಸುತ್ತಾ 'ಬಾನ್ನೀಲಿ ಕಾಲಕೂಟದ ವಿಷವಾಗಿ, ಮೂರು ನೂರು ಬಣ್ಣವಾಗಿ, ಕೊನೆಗೆಲ್ಲ ಕಲಸಿ ಹೋಗಿ ರಕ್ತವರ್ಣ ರೌದ್ರವಾಗಿ ರಾಚಿ ಬೆಚ್ಚಿಸಿತು'

ಅಬ್ಬ ಮೂರು ಸಾಲುಗಳಲ್ಲಿ ಅದೆಷ್ಟು ವಿಷಯಗಳು! ತುಂಬಾ ಅರ್ಥಗರ್ಭಿತ ಸಾಲುಗಳು. ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಹಿಂಸೆ, ಪ್ರಾಣಹರಣ, ಯುದ್ಧ, ದಳ್ಳುರಿ ಎಲ್ಲದರ ಚಿತ್ರಣ ಮನೆಗೆ ಭೀತಿ ಹಾಗೂ ಸಂಕಟವನ್ನು ತರುತ್ತದೆ.

ಸುಮ್ಮನೆ ನಮ್ಮ ಸುಖದಲ್ಲಿ ಕುಳಿತು, ಇತಿಹಾಸಗಳನ್ನು ಮರೆತು, ಸ್ವಾರ್ಥದಲ್ಲಿ ಕಾಲ ಕಳೆಯುತ್ತಿರುವುದನ್ನು ಕಂಡು ಹೇಳುತ್ತಾರೆ, 'ಸಣ್ಣತನ ಮೈಗೂಡಿಸಿಕೊಂಡ ಋಣ ಪಾತಕರು ನಾವು!"

ದುಡ್ಡು ಕೂಡಿಡುತ್ತಾ, ನಾವು ನನ್ನವರು ಎಂದು ಬಾಳುತ್ತಾ, ಎಲ್ಲಾ ನನಗೇ ಬೇಕು ಎನ್ನುವ ಸ್ವಾರ್ಥಿ ಮನುಜ ಒಂದು ಕಡೆ. ಮತ್ತೊಂದೆಡೆ ನಿರ್ಗತಿಕತನ. ಈ ಅಸಮಾನತೆ ಒಂದು ದೊಡ್ಡ ಶಾಪ. 'ಕಿತ್ತಾಡುವ ನಾಯಿಗಳು, ಅನ್ನ ಕಾಣದ ಬಾಯಿಗಳು' ಕಟು ವಾಸ್ತವದ ಚಿತ್ರಣ. ನಮ್ಮ ಬೇರುಗಳನ್ನು ಮರೆತು, ಇತಿಹಾಸದ ಅರಿವಿಲ್ಲದೆ ಬಾಳುತ್ತಿರುವ ನಮಗೆ ಕೊನೆಯ ಪ್ಯಾರಾ ಚಾಟಿ ಏಟಿನಂತಿದೆ. ಕವಯತ್ರಿ ಶ್ರೀಮತಿ ಗಿರಿಜಾ ರಾಜ್ ಅವರಿಗೆ ಅಭಿನಂದನೆಗಳು ಮತ್ತು ಸುಂದರ ಕವನ ನೀಡಿದ್ದಕ್ಕೆ ಧನ್ಯವಾದಗಳು.

'ಸಾಹಿತ್ಯ ದಾಸೋಹ' ಎಂದರೆ ಸಂಭ್ರಮ. ಈ ದಾಸೋಹದಲ್ಲೂ ವೈವಿಧ್ಯಮಯ ಲೇಖನ, ಕವನ, ಪ್ರಬಂಧ ಪ್ರವಾಸ ಕಥನಗಳು ಪ್ರಸ್ತುತಗೊಂಡಿವೆ. ಎಲ್ಲರಿಗೂ ಮತ್ತೊಮ್ಮೆ ಅಭಿನಂದನೆಗಳು ಮತ್ತು ಆದರದ ನಮನಗಳು.

೨೫ನೇ ವರ್ಷದ ಈ ವಿಶೇಷ ಸಾಹಿತ್ಯ ದಾಸೋಹ ೨೨೮ಕ್ಕೆ ನನ್ನನ್ನು ಅಧ್ಯಕ್ಷ ಪೀಠದಲ್ಲಿ ಕೂರಿಸಿದ ಸಂಚಾಲಕರಾದ ಆತ್ಮೀಯ ಶ್ರೀ ಮಹಾಬಲ ಅವರಿಗೆ ಮತ್ತು ನನ್ನ ಹಿರಿಯ ಮಿತ್ರರಾದ, ಗುರು-ಮಾರ್ಗದರ್ಶಕರಾದ ಸಸಕಸ ವೇದಿಕೆಯ ಸಂಚಾಲಕರಾದ ಶ್ರೀ ರವೀಂದ್ರರವರಿಗೆ ಮತ್ತು ನಿಮ್ಮೆಲ್ಲರ ಪ್ರೀತಿಗೆ ಆಭಾರಿಯಾಗಿದ್ದೇನೆ. ನನ್ನ ಅನಿಸಿಕೆಯನ್ನು ಪ್ರೀತಿಯಿಂದ ಸ್ವೀಕರಿಸಬೇಕಾಗಿ ಪ್ರಾರ್ಥನೆ. ಶ್ರೀಮತಿ ರೇಣುಕಾ ದೇಸಾಯಿ ಮತ್ತು ಶ್ರೀಮತಿ ರಾಧಿಕಾ ಗುಜ್ಜರ್ ಅವರಿಗೆ ವಿಶೇಷ ನಮನಗಳು. ಒಂದು ಕವಿ ಮಾತು ನೆನಪಿಗೆ ಬರುತ್ತದೆ.

"ಏನಿತು ಜನ್ಮಗಳಿಗೆ, ಎನಿತು ಜೀವಿಗಳಿಗೆ
ನಾ ಎನಿತು ಋಣಿಯೋ, ಹಾಗೆ ನೋಡಿದರೆ
ನಾ ಋಣದ ಗಣಿಯೋ"

ನಮಸ್ಕಾರ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 228 ನಡೆದ ದಿನಾಂಕ: 10 ಆಗಸ್ಟ್ 2024
ಸಂಚಿಕೆಯ ಬಿಡುಗಡೆ ದಿನಾಂಕ: 14 ಸೆಪ್ಟೆಂಬರ್ 2024 – ಶನಿವಾರ

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)